ಮಹಿಳಾ ಸಬಲೀಕರಣದಲ್ಲಿ ಕಿರು ಮಹಿಳಾ ಉದ್ಯಮಿಗಳ ಪಾತ್ರ-
ಮಂಗಳೂರು ತಾಲೂಕಿನ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ ಹಂಪಿಯ ಅಭಿವೃದ್ಧಿ ಅಧ್ಯಯನದ ಎಂ.ಫಿಲ್

ಪದವಿಗಾಗಿ

ಅರ್ಪಿಸಿದ ನಿಬಂಧ

ಸಂಶೋಧಕರು

ತನುಜ

ನೋಂದಾಣಿ ಸಂಖ್ಯೆ :151111030060

ಮಾರ್ಗದರ್ಶಕರು

ಡಾ. ರೇಣುಕಾ ಕೆ.

೨೦೧೬

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು - ೫೭೫೦೦೧

ಮಹಿಳಾ ಸಬಲೀಕರಣದಲ್ಲಿ ಕಿರು ಮಹಿಳಾ ಉದ್ಯಮಿಗಳ ಪಾತ್ರ- ಮಂಗಳೂರು ತಾಲೂಕಿನ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ ಹಂಪಿಯ ಅಭಿವೃದ್ಧಿ ಅಧ್ಯಯನದ ಎಂ.ಫಿಲ್

ಪದವಿಗಾಗಿ

ಅರ್ಪಿಸಿದ ನಿಬಂಧ

ಸಂಶೋಧಕರು

ತನುಜ

ನೋಂದಾಣಿ ಸಂಖ್ಯೆ :151111030060

ಮಾರ್ಗದರ್ಶಕರು

ಡಾ. ರೇಣುಕಾ ಕೆ.

೨೦೧೮

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು – ೫೭೫೦೦೧

ಯೋಗ್ಯತಾ ಪತ್ರ

ತನುಜ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **'ಮಹಿಳಾ ಸಬಲೀಕರಣದಲ್ಲಿ ಕಿರು ಮಹಿಳಾ ಉದ್ಯಮಿಗಳ ಪಾತ್ರ- ಮಂಗಳೂರು ತಾಲೂಕಿನ ಒಂದು ಅಧ್ಯಯನ'** ಎಂಬ ಶೀರ್ಷಿಕೆಯ ಈ ನಿಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ನಿಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ- ಸ್ವರೂಪವಾಗಿದೆ. ಇವರು ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ.

ಡಾ. ರೇಣುಕಾ ಕೆ.

ಸಂಶೋಧನ ಮಾರ್ಗದರ್ಶಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಎಂ.ಫಿಲ್ ಪದವಿಗಾಗಿ ಸಾದರಪಡಿಸುವ '**ಮಹಿಳಾ ಸಬಲೀಕರಣದಲ್ಲಿ ಕಿರು ಮಹಿಳಾ ಉದ್ಯಮಿಗಳ ಪಾತ್ರ- ಮಂಗಳೂರು ತಾಲೂಕಿನ ಒಂದು ಅಧ್ಯಯನ**'ಎಂಬ ಶೀರ್ಷಿಕೆಯ ಈ ನಿಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ, ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ರೇಣುಕಾ ಕೆ. ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ನಿಬಂಧವನ್ನು ಬೇರಾವುದೇ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

Thanuja

ತನುಜ

ಸಂಶೋಧಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು

ಅಧ್ಯಾಯಗಳ ವಿವರಗಳು

ಕೋಷ್ಟಕಗಳ ಪಟ್ಟಿ

ಅಧ್ಯಾಯ ೧

ಅಧ್ಯಯನದ ಸ್ವರೂಪ ಮತ್ತು ಉದ್ದೇಶ

೧.೧. ಪೀಠಿಕೆ

೧.೨. ಅಧ್ಯಯನದ ಸಮಸ್ಯೀಕರಣ

೧.೩. ಅಧ್ಯಯನದ ಉದ್ದೇಶಗಳು

೧.೪. ಅಧ್ಯಯನದ ವಿಧಾನಗಳು

೧.೫. ಅಧ್ಯಯನದ ಇತಿಮಿತಿಗಳು

೧.೬. ಅಧ್ಯಯಗಳು

೧.೭. ಕೊನೆ ಟಿಪ್ಪಣಿ

ಅಧ್ಯಯನದ ಸ್ವರೂಪ ಮತ್ತು ಉದ್ದೇಶ

೧.೧ ಪೀಠಿಕೆ

ಇಪ್ಪತ್ತನೆಯ ಶತಮಾನದಲ್ಲಿ ಮಹಿಳಾ ಸಬಲೀಕರಣ, ಮಹಿಳಾ ಕಲ್ಯಾಣ ಲಿಂಗ ನ್ಯಾಯ ಪರಿಭಾವನೆಗಳು ಅಭಿವೃದ್ಧಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಸಾಮಾಜಿಕ, ಅರ್ಥಿಕ ಹಾಗು ರಾಜಕೀಯ ಅಭಿವೃದ್ಧಿ ವಿಶ್ಲೇಷಣೆಯಲ್ಲಿ ಪ್ರಸಿದ್ಧಿಯಾಗಿ ಬೆಳಕಿಗೆ ಬಂದವು ಸಂಪ್ರದಾಯಕವಾಗಿ ಮಹಿಳೆಯರು ಬಹುತೇಕ ಎಲ್ಲಾ ಸಮಾಜಗಳಲ್ಲೂ ದ್ವಿತೀಯ ಪ್ರಜೆಯಾಗಿಯೇ ಉಳಿದಿದ್ದಾರೆ.ಹುಟ್ಟಿನಿಂದಿಡಿದು ಜೀವನದ ಕೊನೆಯವರೆಗೂ ಎಲ್ಲಾ ಸ್ತರ ವಿನ್ಯಾಸಗಳಲ್ಲಿಯೂ ಮಹಿಳೆ ಪುರುಷರನ್ನೇ ಅವಲಂಭಿಸಿರುವಂತೆ ಸಾಮಾಜಿಕ ಕ್ರಿಯೆ ಮಾಡಿದೆ. ನೈಜ್ಯವಾಗಿ ಹೇಳುವುದಾದರೆ ಮಹಿಳೆಯರನ್ನು ಪುರುಷರ ಗುಲಾಮರನ್ನಾಗಿ ಮಾಡಲಾಗಿತ್ತು.ಮಹಿಳೆಯರನ್ನು ಮಕ್ಕಳನ್ನು ಹೆರುವ ಮತ್ತು ಗಂಡನಿಗೆ ಸೇವೆ ಮಾಡುವ ಹಾಗೂ ಲೈಂಗಿಕ ಭೋಗದ ವಸ್ತುವನ್ನಾಗಿ ಬಳಸಲಾಗುತ್ತಿತ್ತು. ಬೇಗನೆ ವಿವಾಹ ಮಾಡುವುದರೊಂದಿಗೆ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮತ್ತು ಅಂತಸ್ತನ್ನು ದಮನಗೊಳಿಸಿ ಅವರನ್ನು ಮನೆಯಲ್ಲಿ ನಾಲ್ಕು ಗೋಡೆಗಳ ಮಧ್ಯೆ ಕೂಡಿ ಹಾಕಲಾಗುತ್ತಿತ್ತು. ಮಹಿಳೆಯರು ಶ್ರಮದ ಮತ್ತು ಘನತೆಯನ್ನು ಗರಿಷ್ಠವಾಗಿ ಬಳಸಿಕೊಂಡರೂ ಮಾರುಕಟ್ಟೆಯ ಮೌಲ್ಯ ದೊರಕಿಸದೇ ಶೋಷಣೆಗೊಳಪಡಿಸಲಾಯಿತು.

ಸ್ತ್ರೀ ಎಂದರೆ ಶಕ್ತಿ, ತ್ಯಾಗ, ಪ್ರೀತಿಯ ಸಂಕೇತ, ನಂಬುಗೆಗೆ ಅರ್ಹ, ಕ್ಷಮಾಯಾಧರಿತ್ರಿ, ದಯೆಯ ಸಾಕಾರ ಮೂರ್ತಿ, ಸಹನಾಮಣಿ ಇತ್ಯಾದಿಗಳಿಂದ ಹೊಗಳಿ ಹೊಗಳಿ 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ' ಎಂದು ದೇವತೆಯ ಸ್ಥಾನದಲ್ಲಿ ಕುಳ್ಳಿರಿಸಿದರೆ, ಇನ್ನೊಂದೆಡೆ ಒಂದು ವ್ಯವಸ್ಥೆಯನ್ನು ಹುಟ್ಟು ಹಾಕಿ ಆ ವ್ಯವಸ್ಥೆಗೆ ನಿಯಮಗಳನ್ನು ರೂಪಿಸಿ ಸ್ತ್ರೀ ಎಂದರೆ ಪಂಡಿತಳಲ್ಲ, ಪಾಮರಳೂ ಅಲ್ಲ, ಸ್ತ್ರೀಯನ್ನು ಅಬಲೆಯೆಂದು ಕರೆದು ಅವಳಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯ ಕೊಡದೆ ಉಳಿಯುವಂತೆ ಮಾಡಿದ್ದು ಐತಿಹಾಸಿಕ ಸತ್ಯ [1]

ಯಾವುದೇ ಒಂದು ದೇಶ ಜನಾಂಗ ಅಭಿವೃದ್ಧಿ ಹೊಂದಬೇಕಾದರೆ, ಆ ದೇಶದ ಪ್ರತಿಯೊಬ್ಬ ಪ್ರಜೆಯ ಸಹಭಾಗಿತ್ವವು ಅತ್ಯಗತ್ಯವಾದುದ್ದು, ಯಾವುದೇ ರೀತಿಯ ಜಾತಿ ಆಧಾರಿತ ಲಿಂಗಾಧಾರಿತ ಮತ್ತು ಪ್ರಾಂತ್ಯಾಧಾರಿತ ತಾರತಮ್ಯ ಮಾಡದೇ ಜನರ ನೈಪುಣ್ಯತೆ, ಜ್ಞಾನ ಮತ್ತು ಕೌಶಲ್ಯತೆಯನ್ನು ಅಭಿವೃದ್ಧಿಪಡಿಸಲು ಸಮಾಜ ರೀತಿಯ ಪ್ರೋತ್ಸಾಹ ಸಹಕಾರ ನೀಡಬೇಕು ಹಾಗಿದ್ದಾಗ ಮಾತ್ರ ಆ ದೇಶ

ಅಭಿವೃದ್ಧಿ ಹೊಂದುತ್ತದೆ. ಇಲ್ಲದಿದ್ದರೆ ರೋಗಗ್ರಸ್ಥವಾಗಿ ಬಡತನ ಎಂಬ ವಿಷವರ್ತುಲದಲ್ಲಿ ಸಿಲುಕಿಕೊಂಡು ಅರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಹಿಂದುಳಿಯಬೇಕಾಗುತ್ತದೆ.

ಭಾರತದಲ್ಲಿ ಚಾರಿತ್ರಿಕ ಯಾತನೆಗಳಿಗೆ ಹೆಸರಾಗಿರುವ ಒಂದು ಪ್ರಭಾವ ಅಂಚಿಗೆ ಸರಿಸಲ್ಪಟ್ಟ ಗುಂಪು ಎಂದರೆ ಮಹಿಳೆಯರು ವಾಸ್ತವದಲ್ಲಿ ಇದೊಂದು ಲಿಂಗತ್ವ ಸಮಸ್ಯೆ ಇದರಿಂದಾಗಿಯೇ ಲಿಂಗತ್ವ ನಿಷ್ಪಕ್ಷಪಾತತೆ ಮತ್ತು ಮಹಿಳಾ ಸಬಲೀಕರಣ ಇತ್ಯಾದಿ ಕ್ಲೀಷೆಯೆನಿಸಿಬಿಟ್ಟಿರುವ ಕರೆಗಳು ಕೇಳುತ್ತಿರುವುದು, ಒಟ್ಟಾರೆಯಾಗಿ ಮಹಿಳಾ ಸಬಲೀಕರಣಕ್ಕೆ ನೀಡಲಾಗುತ್ತಿರುವ ಕರೆಗೆ ಒಂದು ಪ್ರಧಾನ ಕಾರಣವೆಂದರೆ ಮಹಿಳೆಯರ ಅರ್ಥಿಕ ಸ್ವಾವಲಂಬನೆ, ಮಹಿಳೆಯರನ್ನು ಸಬಲರನ್ನಾಗಿ ಮಾಡುವುದು, ಅವರಿಗೆ ಸ್ವಾಯತ್ತತೆಯನ್ನು ನೀಡುವುದು ಮತ್ತು ಅವರ ಸಾಮಾಜಿಕ, ಅರ್ಥಿಕ,ಮತ್ತು ರಾಜಕೀಯ ಸ್ಥಾನಮಾನವನ್ನು ಉತ್ತಮಪಡಿಸುವುದು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಅತ್ಯಗತ್ಯ.

ಸಂಪ್ರದಾಯಬದ್ಧ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀಯರನ್ನು ಲಿಂಗಾಧಾರಿತ ದೃಷ್ಟಿಯಿಂದ ನೋಡುವ ದೃಷ್ಟಿಕೋನ ಹೇಗೆ ಇದ್ದರೂ ಪುರುಷ ಪ್ರಧಾನ ವ್ಯವಸ್ಥೆ ಪ್ರಧಾನವಾಗಿದೆ. ಲಿಂಗ ಅಸಮಾನತೆ ಒಂದೇ ಕಾರಣವಾಗಿ ಸಂಪ್ರದಾಯಬದ್ಧ ಸಮಾಜದಲ್ಲಿ ಸಹಜವಾಗಿದ್ದವು. ಸಾಮಾಜೀಕರಣದ ಪ್ರಭಾವ ಹೆಚ್ಚಾದಂತೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅವಳು ನಿರ್ವಹಿಸುವ ಪಾತ್ರ ಅಸಾಧಾರಣವಾಗಿದೆ. ಆದ ಕಾರಣ ಅವಳಿಗೆ ಸಮಾನ ಅವಕಾಶ ನೀಡುವ ಅಗತ್ಯತೆ ಇದೆ ಎನ್ನಬಹುದು [2]

ಜಗತ್ತಿನಾದ್ಯಂತ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಿರುವುದು ಇಂದಿನ ಬೆಳವಣಿಗೆ ತಳ್ಳಲ್ಪಟ್ಟ ಮಹಿಳಾ ಸಮುದಾಯವನ್ನು ಅಭಿವೃದ್ಧಿ ಮುಖ್ಯವಾಹಿನಿಗೆ.ತರುವಂಥ ಪ್ರಯತ್ನ ಇಂದು ಎಲ್ಲೆಡೆ ನಡೆಯುತ್ತಿದೆ. ಯಾವುದೇ ಸಮಾಜದಲ್ಲಾಗಲಿ ಅಲ್ಲಿನ ಅಭಿವೃದ್ಧಿಯ ಮುಖ್ಯ ಸೂಚಕವೆಂದರೆ ಮಹಿಳೆಯರ ಸ್ಥಾನಮಾನ.

ಒಂದು ರಾಷ್ಟ್ರವು ಅಭಿವೃದ್ಧಿಯಾಗಬೇಕಾದರೆ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಅವರ ಭಾಗವಹಿಸುವಿಕೆ ಕಡಿಮೆಯಿದೆ ಅಂದರೆ ಅಭಿವೃದ್ಧಿಯನ್ನು ಸಾಧಿಸಿಲ್ಲವೆಂದೇ ಅರ್ಥ. ಸ್ವಾತಂತ್ರ್ಯದ ನಂತರ ನಮ್ಮ ದೇಶದಲ್ಲಿ ಯೋಜನಾ ಆರ್ಥಿಕತೆಯನ್ನು ಅಳವಡಿಸಿಕೊಂಡಾಗಿನಿಂದಲೂ ಮಹಿಳಾ ಅಭಿವೃದ್ಧಿ ಸಲುವಾಗಿ ಅನೇಕ ಪ್ರಯತ್ನಗಳು ನಡೆದಿವೆ. ಸಮಾಜದಲ್ಲಿ ಬೇರೂರಿರುವ 'ಜಂಡರ್ ವ್ಯವಸ್ಥೆ' ಪಕ್ಷಪಾತವನ್ನು ಹೋಗಲಾಡಿಸಿ ನಮ್ಮ

ಸಂವಿಧಾನವು ಮಹಿಳೆಯರಿಗೆ ನೀಡಿರುವ ಸಮಾನತೆಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಸರ್ಕಾರ ತನ್ನ ಎಲ್ಲಾ ಪ್ರಯತ್ನಗಳನ್ನು ನಿರ್ದೇಶಿಸಿದೆ.

ಮಹಿಳಾ ವರ್ಗವು ಒಂದು ಪ್ರಮುಖ ಜನವರ್ಗವಾಗಿದೆ. ಆದರೆ ಎಲ್ಲಾ ದೇಶಗಳಲ್ಲೂ ಮಹಿಳೆಯರು ಪುರುಷರಿಗೆ ಸರಿ ಸಮನಾದ ಸ್ಥಾನಮಾನವನ್ನು ಹೊಂದಿಲ್ಲ. ಹೀಗಾಗಿ ಮಹಿಳೆಯರು ಸಾಮಾಜಿಕ ಆರ್ಥಿಕ, ರಾಜಕೀಯ, ಶಿಕ್ಷಣ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪುರುಷರಿಗೆ ಹೋಲಿಸಿದಂತೆ ಬಹಳ ಹಿಂದುಳಿದಿದ್ದಾರೆ. ರಾಜಕೀಯ ಮತ್ತು ತಂತ್ರ ಜ್ಞಾನ, ಉನ್ನತ ಶಿಕ್ಷಣ, ವಿಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯರು ಅತ್ಯಂತ ಹಿಂದುಳಿದಿದ್ದಾರೆ. ಆದ್ದರಿಂದ ಮಹಿಳೆಯರಿಗೆ ಸಾರ್ವತ್ರಿಕವಾಗಿ ಸರ್ವಾಂಗೀಣವಾಗಿ ಅಭಿವೃದ್ಧಿ ಮತ್ತು ಪಾಲುಗೊಳ್ಳುವಿಕೆ ಅವಕಾಶಗಳನ್ನು ಕಲ್ಪಿಸಬೇಕಿದೆ.

ಹೆಚ್ಚಿನೆಲ್ಲಾ ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಮಹಿಳಾ ಸಬಲೀಕರಣದ ಪ್ರಕ್ರಿಯೆ ಬಗ್ಗೆ ಸಾರ್ವಜನಿಕ ಅಜೆಂಡಾವನ್ನು ಹೊಂದಿದೆ. ಇನೊಂದು ಅಂತರಾಷ್ಟ್ರೀಯ ಬದ್ಧತೆಯಾಗಿದೆ. ಭಾರತದಲ್ಲಿ ಇಂದಿಗೂ ಸಹಉದ್ಯಮ ಜಗತ್ತು ಪುರುಷರಿಂದ ತುಂಬಿಕೊಂಡಿದೆ. ಆದರೆ ಮಹಿಳಾ ಉದ್ಯಮಿಗಳ ಸಂಖ್ಯೆ ನಿಧಾನವಾಗಿ ಏರುತ್ತಿದೆ. ಸಮಾಜದಲ್ಲಿ ತಮ್ಮ ಸ್ಥಾನಮಾನ ಹಕ್ಕನ್ನು ಕಂಡುಕೊಳ್ಳಲು ಮಹಿಳೆಯರು ನಿಧಾನವಾಗಿ ಯಶಸ್ವಿಯಾಗುತ್ತಿದ್ದಾರೆ. ಮಹಿಳೆಯರು ಪ್ರಜ್ಞಾವಂತರಾಗಿ ಬೆಳೆಯುತ್ತಿರುವುದರಿಂದ ಇದು ಅವರ ಅಭಿವೃದ್ಧಿಗೆ ಧನಾತ್ಮಕ ಅಂಶವಾಗಿ ಹೊರಹೊಮ್ಮಿದೆ ಕಳೆದೆರಡು ದಶಕಗಳಲ್ಲಿ ಮಹಿಳಾ ಉದ್ಯಮಿಗಳ ಸಂಖ್ಯೆ ಹೆಚ್ಚಾಗಿದ್ದರು ಪುರುಷರಿಗೆ ಹೋಲಿಸಿದರೆ ಅವರ ಪ್ರಮಾಣ ತುಂಬಕಡಿಮೆ. ವಿಷಾದದ ಸಂಗತಿಯೆಂದರೆ ಕಡಿಮೆ ಸಂಖ್ಯೆಯಲ್ಲಿ ಮಹಿಳೆಯರು ಉದ್ಯಮಕ್ಷೇತ್ರವನ್ನು ಆರಿಸಿಕೊಳ್ಳುತ್ತಿದ್ದಾರೆ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಲು ಸರ್ಕಾರ ಮತ್ತು ಸ್ಥಳೀಯ ಸಂಖ್ಯೆಗಳು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿವೆ.ಮಹಿಳಾ ಉದ್ಯಮಿಗಳಿಗೆಂದೇ ರಾಜ್ಯಮಟ್ಟದಲ್ಲಿ 'ಮಹಿಳಾ ಅಭಿವೃದ್ಧಿ ನಿಗಮ'ವನ್ನು ಸ್ಥಾಪಿಸಲಾಗಿದೆ.[3]

ಮಹಿಳಾ ಸಬಲೀಕರಣವು ಅಧಿಕಾರ ನಿಯಂತ್ರಣ ಮತ್ತು ಮಹಿಳೆಯರ ಜೀವನ ಸ್ಥೈರ್ಯವನ್ನು ಬಲಪಡಿಸುವಂತಹ ಪ್ರಕ್ರಿಯೆಯಾಗಿದೆ. ಆರ್ಥಿಕ, ಸಾಮಾಜಿಕ, ಮತ್ತು ರಾಜಕೀಯ ಸಬಲೀಕರಣದಲ್ಲಿ ಆರ್ಥಿಕ ಸಬಲೀಕರಣವು ಪ್ರಮುಖವಾಗಿದ್ದು ಇದು ಉಳಿದೆರಡಕ್ಕೆ ದಾರಿ ಮಾಡಿಕೊಡುತ್ತದೆ. ಮಹಿಳೆಯರು ಸಮಾಜದಲ್ಲಿ ಮತ್ತು ರಾಷ್ಟ್ರ ನಿರ್ಮಾಣ ಪ್ರಕ್ರಿಯೆಯಲ್ಲಿ ಗೌರವಾನ್ವಿತ ಸ್ಥಾನವನ್ನು ಪಡೆಯುವ ನಿಟ್ಟಿನಲ್ಲಿ ಭಾರತವು ಸಾಧಿಸಬೇಕಾದ್ದು ಬಹಳಷ್ಟಿದೆ.

ಸ್ತ್ರೀಯರಿಗೆ ಪುರುಷರಂತೆ ಎಲ್ಲ ಕ್ಷೇತ್ರಗಳಲ್ಲಿ ಅವಕಾಶ ಕೊಟ್ಟಿದ್ದೇ ಆದರೆ ಅಸಮಾನತೆ, ಶೋಷಣೆ, ದೌರ್ಜನ್ಯ ತಡೆಗಟ್ಟಲು ಜೊತೆಗೆ ವೈಯಕ್ತಿಕ ಸಾಮರ್ಥ್ಯ, ಕೌಶಲ್ಯ, ನಂಬಿಕೆ, ಜಾಗೃತಿ, ಬುದ್ಧಿವಂತಿಕೆ, ಸಂಪರ್ಕ ಮತ್ತು ವಹಿವಾಟು ಇತ್ಯಾದಿಗಳಲ್ಲಿ ಸೂಕ್ತ ಪ್ರತಿಭೆ ತೋರಬಹುದು. ಆದ್ದರಿಂದ ಮಹಿಳಾ ಸಶಕ್ತತೆ ಎಂಬುದನ್ನು ಒಂದು ಶಕ್ತಿ ಎಂದೇ ಪರಿಗಣಿಸಬಹುದಾಗಿದೆ.

ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವುದು, ಆತ್ಮವಿಶ್ವಾಸ, ಅರಿವು, ಆತ್ಮಗೌರವ ಬೆಳೆಸಿಕೊಂಡು ಸ್ವಂತ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಪಡೆಯುವುದೇ ಮಹಿಳಾ ಸಶಕ್ತೀಕರಣವಾಗುತ್ತದೆ. ಅಭಿವೃದ್ಧಿ ಮತ್ತು ಲಿಂಗದ ವಿಚಾರದಲ್ಲಿ ಸಶಕ್ತೀಕರಣವು ಒಂದು ಕಲ್ಪನೆಗಿಂತ ಪ್ರಕ್ರಿಯೆಯಾಗಿ ವ್ಯಾಖ್ಯಾನಿಸಲ್ಪಡುತ್ತದೆ. ಇದು ಹೆಚ್ಚು ಕ್ರಿಯಾತ್ಮಕವಾಗಿರುತ್ತದೆ. ವಿವಿಧ ಹಿನ್ನೆಲೆಯಲ್ಲಿ ವಿವಿಧ ರೂಪ ತಾಳುತ್ತದೆ. ಹೀಗೆ ಜೀವನದ ಅನುಭವ ಮತ್ತು ಸಮಾಜದ ಲಿಂಗ ಸಂಬಂಧಿ ಅಂಶಗಳು ಮಹಿಳಾ ಸಶಕ್ತೀಕರಣವನ್ನು ಪ್ರಭಾವಿಸುತ್ತದೆ.

ಮಹಿಳೆಯರನ್ನು ಅಭಿವೃದ್ಧಿಯಲ್ಲಿ ಪುರುಷರಿಗೆ ಸಮಾನ ಪಾಲುದಾರರು ಎಂದು ಪರಿಗಣಿಸಿದಾಗ ಮಾತ್ರವೇ ದೇಶದ ಸರ್ವತೋಮುಖ ಬೆಳವಣಿಗೆಯಾಗಲು ಸಾಧ್ಯ. ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು ಕಡೆಗಣಿಸಿದರೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲವೆಂಬುದನ್ನು ಮನಗಂಡು ಭಾರತ ಸರಕಾರವು ಸಂವಿಧಾನದಲ್ಲಿ ಮಹಿಳೆಯರಿಗೆ ಪುರುಷ ಸಮಾನ ಸ್ಥಾನವನ್ನು ನೀಡಿ ಲಿಂಗ ತಾರತಮ್ಯ ತೊಡೆದು ಹಾಕುವ ನಿಟ್ಟಿನಲ್ಲಿ ಪ್ರಯತ್ನಿಸಿದೆ.

ಜಗತ್ತಿನಾದ್ಯಂತ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರು ಸಕ್ರೀಯವಾಗಿ ಭಾಗವಹಿಸುತ್ತಿರುವುದು ಇಂದಿನ ಬೆಳವಣಿಗೆಯಾಗಿದೆ. ಅಭಿವೃದ್ಧಿಯಲ್ಲಿ ಮಹಿಳೆಯರ ಕ್ರಿಯಾಶೀಲ ಭಾಗವಹಿಸುವಿಕೆಯ ಅಗತ್ಯವಿದೆಯೆಂಬುದನ್ನು ಇಂದು ಮಹಿಳೆಯರು ತೋರಿಸಿಕೊಟ್ಟಿದ್ದಾರೆ. ಆದುದರಿಂದಲೇ ಅಂಚಿಗೆ ತಳ್ಳಲ್ಪಟ್ಟ ಮಹಿಳಾ ಸಮುದಾಯವನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವಂತಹ ಪ್ರಯತ್ನ ಇಂದು ಎಲ್ಲೆಡೆ ನಡೆಯುತ್ತಿದೆ.

ಮಹಿಳೆಯರನ್ನು ಪುರುಷರಷ್ಟೇ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕವಾಗಿ ಸಶಕ್ತರನ್ನಾಗಿ ಮಾಡುವುದಕ್ಕೆ ಮಹಿಳಾ ಸಬಲೀಕರಣವೆಂದು ಹೆಸರು. ಮಹಿಳೆಯರ ಶೋಷಣೆಯನ್ನು ತಡೆಗಟ್ಟಿ ಅವರು ಮುಕ್ತ ವಾತಾವರಣದಲ್ಲಿ ತಮ್ಮ ಹಕ್ಕುಗಳನ್ನು ಅನುಭವಿಸುವ ಸ್ವಾತಂತ್ರ್ಯವನ್ನು ದೊರಕಿಸಿಕೊಡುವ ಯೋಜನೆಗಳನ್ನು ಮಹಿಳಾ ಸಬಲೀಕರಣ ಯೋಜನೆಗಳೆಂದು ಕರೆಯಲಾಗುತ್ತದೆ. ಸ್ವಸಹಾಯ

ಗುಂಪುಗಳು, ಮಹಿಳಾ ಸಹಕಾರಿ ಸಂಘಗಳು, ಮಹಿಳಾ ಸಹಕಾರಿ ಬ್ಯಾಂಕುಗಳು ಇತ್ಯಾದಿಗಳನ್ನು ರಚಿಸುವುದರ ಮೂಲಕ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಿದೆ.[4]

ಮಹಿಳೆಯರನ್ನು ಅಭಿವೃದ್ಧಿಯಲ್ಲಿ ಪುರುಷರಿಗೆ ಸಮಾನ ಪಾಲುದಾರರು ಎಂದು ಪರಿಗಣಿಸಿದಾಗ ಮಾತ್ರವೇ ದೇಶದ ಸರ್ವತೋಮುಖ ಬೆಳವಣಿಗೆಯಾಗಳು ಸಾದ್ಯ ಮಹಿಳೆ ಮತ್ತು ಅಭಿವೃದ್ಧಿಯು ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಚರ್ಚೆಯ ವಿಷಯವಾಗಿ ಮಹಿಳಾ ಸಬಲೀಕರಣ ಪರಿಪೂರ್ಣವಾಗಲು ಮಹಿಳೆಯನ್ನು ಮೊದಲು ಸಶಕ್ತಳನ್ನಾಗಿಸಬೇಕು ಎಂಬ ಮಾತುಗಳಲ್ಲಿ ಪೂರ್ಣ ಸತ್ಯಾಂಶವಿದೆ. ಸ್ವಯಂ ಪ್ರೇರಿತರಾಗಿ ಸಾಧನೆಯತ್ತ ಇಂದಿನ ಮಹಿಳೆಯರು ಸಾಗುತ್ತಿರುವುದು ರಾಷ್ಟ್ರ ನಿರ್ಮಾಣದ ಕಾರ್ಯವನ್ನು ಸುಲಭಗೊಳಿಸಿದಂತಾಗಿದೆ. ಅಲ್ಲದೆ ಉದ್ಯಮಶೀಲತೆಯಲ್ಲಿ ಮಹಿಳೆಯರ ಪಾತ್ರ ಹೆಚ್ಚುತ್ತಿರುವುದು ಒಂದು ಉತ್ತಮ ಬೆಳವಣಿಗೆ. ಆದ್ದರಿಂದ ಇಂದು ತ್ವರಿತ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಮಹಿಳೆಯರನ್ನು ಉದ್ಯಮಶೀಲತಾರಂಗಕ್ಕೆ ಕರೆತರಬೇಕಾದ ಅಗತ್ಯವಿದೆ.

೧.೨ ಸಮಸ್ಯೀಕರಣ

ಮಹಿಳಾ ಸಬಲೀಕರಣ ಮತ್ತು ಕಿರು ಮಹಿಳಾ ಉದ್ಯಮಿಗಳು- ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಸಂಶೋದಕರು ನಡೆಸಿದ ಅಧ್ಯಯನಗಳ ವಿವರಗಳನ್ನು ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ನೋಡಬಹುದು.

ಸವಿತ ಅವರ ಸಂಶೋಧನಾ ಸಂಪ್ರಬಂಧವಾದ 'ಪ್ರವಾಸಿ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿ ಒಂದು ಅಧ್ಯಯನ' (೨೦೦೩) ದಲ್ಲಿ ಪ್ರವಾಸೀ ಕೇಂದ್ರಗಳಲ್ಲಿ ಪುರುಷ ಮತ್ತು ಮಹಿಳೆಯರು ನಡೆಸುವ ಕಿರು ಉದ್ಯಮಗಳ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಈ ಕಿರು ಉದ್ಯಮಗಳು ದೇಶದ ಆರ್ಥಿಕಾಭಿವೃದ್ಧಿಗೆ ಯಾವ ರೀತಿಯ ಕೊಡುಗೆಯನ್ನು ನೀಡಿವೆ ಎಂಬ ಸಂಗತಿಗಳ ಬಗ್ಗೆ ಹೆಚ್ಚಿನ ಒತ್ತನ್ನು ನೀಡಿದ್ದಾರೆ.

ಶೋಭಾಮಣಿ ಅವರ ಸಂಶೋಧನಾ ಸಂಪ್ರಬಂಧವಾದ 'ಗ್ರಾಮೀಣ ಮಹಿಳಾ ಸಬಲಿಕರಣದಲ್ಲಿ ಉದ್ಯಮಶೀಲತೆಯ ಪಾತ್ರ : ಒಂದು ಪ್ರಕರಣದ ಅಧ್ಯಯನ' (೨೦೦೬) ದಲ್ಲಿ ಉಡುಪಿ ಜಿಲ್ಲೆಯಲ್ಲಿರುವ ಗ್ರಾಮೀಣ ಪ್ರದೇಶದ ಮಹಿಳಾ ಉದ್ಯಮಿಗಳ ಲಕ್ಷಣಗಳು, ಸಮಸ್ಯೆಗಳನ್ನು ಸಮಂಜಸವಾಗಿ ಚರ್ಚಿಸಿದ್ದಾರೆ. ಮಹಿಳಾ ಸಬಲೀಕರಣ ಮತ್ತು ಮಹಿಳಾ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ಅಂಶಗಳ ಬಗ್ಗೆ ಚರ್ಚಿಸಿದ್ದಾರೆ.

ರಂಜನಾ ಕುಮಾರಿ ಯವರ "ವಿಮೆನ್ ಇನ್ ಡಿಸಿಷನ್ ಮೇಕಿಂಗ್" (೧೯೯೨) – ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹಾಗೂ ನಿರ್ಣಯಗಳನ್ನು ಕೈಗೊಳ್ಳುವ ಪ್ರಕ್ರಿಯೆಗಳನ್ನು ಇಲ್ಲಿ ಬಹಳ ಚೆನ್ನಾಗಿ ವಿಶ್ಲೇಷಿಸಲಾಗಿದೆ. ಮಹಿಳೆ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಂಗತಿಗೆ ಸಂಬಂಧಿಸಿದಂತೆ, ಸರ್ಕಾರಗಳು, ಸರ್ಕಾರೇತರ ಸಂಸ್ಥೆಗಳು, ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು, ಶೈಕ್ಷಣಿಕ ಚಿಂತಕರು ನಿರ್ಣಯ ತೆಗೆದುಕೊಳ್ಳುವವರ ಮೇಲೆ ಒತ್ತಡ, ಸಮೂಹವಾಗಿ ಪ್ರಭಾವ ಬೀರಿರುವುದನ್ನು ಕುರಿತು ತಿಳಿಸುತ್ತದೆ. ಪ್ರಸ್ತುತ ಜಾಗತಿಕ ಸಂದರ್ಭದಲ್ಲಿ ಲಿಂಗ ಅಸಮಾನತೆಯಿಂದ ಲಿಂಗ ಸಮಾನತೆಯತ್ತಾ ಸಾಗಿ, ಸಂಪನ್ಮೂಲಗಳನ್ನು ಹೆಚ್ಚಿಸುವ, ಸೂಕ್ತ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುವ ಅವಕಾಶಗಳನ್ನು ಕುರಿತು ಚರ್ಚಿಸಿದ್ದಾರೆ. ಮಹಿಳೆಯರು ಸರ್ಕಾರಿ-ಸರ್ಕಾರೇತರ ಸಂಸ್ಥೆಗಳಲ್ಲಿ ಭಾಗವಹಿಸುವಿಕೆಯ ಪ್ರಮಾಣ ಹೆಚ್ಚಾಗುತ್ತಿವೆ. ಮಹಿಳಾ ಆಯೋಗಗಳು, ರಾಜಕೀಯ ಸಶಕ್ತತೆ, ಮಹಿಳಾ ಯೋಜನೆಗಳು, ಮಹಿಳೆಯರ ಕ್ರಿಯಾಶೀಲತೆಯ ಮೌಲ್ಯಮಾಪನ ಮುಂತಾದ ಸಂಗತಿಗಳ ಬಗ್ಗೆ ಸಾಕಷ್ಟು ಪ್ರಭಾವ ಬೀರಿದೆ.

ಕಲ್ಬಗ್ಗ್. ಸಿ ಅವರ ಗ್ರಂಥವಾದ "ವಿಮೆನ್ ಎಂಪವರ್ಮೆಂಟ್ ಅಂಡ್ ದಿ ವರ್ಕ್ ಪ್ಲೇಸ್" (೧೯೯೩) ದಲ್ಲಿ ಮಹಿಳಾ ದುಡಿಮೆಯ ಭಾಗವಹಿಸುವಿಕೆಯ ಪ್ರಮಾಣ ಭಾರತದಲ್ಲಿ ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಮಹಿಳೆಯು ಇಂದು ವಿಜ್ಞಾನ-ತಂತ್ರಜ್ಞಾನ, ವೃತ್ತಿಗಳ ನೈಪುಣ್ಯತೆಯ ಕೊರತೆ, ಮಹಿಳೆಯರ ವಿರುದ್ಧ ಕಾರ್ಮಿಕ ಮಾರುಕಟ್ಟೆಯ ತಾರತಮ್ಯ ಮುಂತಾದ ಅಂಶಗಳಿಂದ ದುಡಿಯುವ ಮಹಿಳೆ ಸಾಕಷ್ಟು ತೊಂದರೆಗೆ ಒಳಗಾಗಿದ್ದಾಳೆ. ಆಧುನಿಕ ಕಾಲದ ಮಹಿಳೆಯ ದುಡಿಮೆಯ ಮಹತ್ವವನ್ನು ಕುರಿತು ಹೇಳುವುದಾದರೆ, ಆರ್ಥಿಕ, ಶೈಕ್ಷಣಿಕ, ಶಾಸನಾತ್ಮಕ ಕಾರಣಗಳಿಂದ ಮಹಿಳೆ ಇಂದು ಹಲವಾರು ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾಳೆಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಇಂದಿನ ಕಾಲದಲ್ಲಿ ದುಡಿಮೆಯ ಕ್ಷೇತ್ರದಲ್ಲಿ ತಲೆದೋರುವ ಸಮಸ್ಯೆಗಳನ್ನು ಎದುರಿಸುವ ನಿಟ್ಟಿನಲ್ಲಿ ಮಹಿಳೆ ತಯಾರಿ ನಡೆಸುತ್ತಿದ್ದಾಳೆಂಬುದನ್ನು ತಿಳಿಸಲಾಗಿದೆ.

ಜಯ ಕೊಥೈ ಪಿಳ್ಳೈ ಯವರ "ವಿಮೆನ್ ಅಂಡ್ ಎಂಪವರ್ಮೆಂಟ್" (೧೯೯೫) – ಸಾಮಾಜಿಕ ಬದಲಾವಣೆಯಲ್ಲಿ ಮಹಿಳೆಯರ ಪಾತ್ರಗಳನ್ನು ಸಮಂಜಸವಾಗಿ ಚರ್ಚಿಸಲಾಗಿದೆ. ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿಗಳು, ಅಭಿವೃದ್ಧಿ ಹೊಂದುತ್ತಿರುವ ಸಮಾಜದಲ್ಲಿ ಹೊಸ ಆರ್ಥಿಕ ನೀತಿ ಹಾಗೂ ಮಹಿಳಾ ಸಶಕ್ತಿಕರಣ ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ. ಮಹಿಳೆಯರ ಸಶಕ್ತಿಕರಣಕ್ಕೆ

ಕಾರಣಿಭೂತ ಅಂಶಗಳಾದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಹಾಗೂ ಶಾಸನಾತ್ಮಕ ಸಂಗತಿಗಳ ಬಗ್ಗೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ.

ಮಹಿಳಾ ಸಬಲೀಕರಣದ ಬಗ್ಗೆ ಅನೇಕ ಸಂಶೋಧನೆಗಳು ಮಂಡಿತವಾಗಿವೆ. ಆದರೆ ಈಗಾಗಲೇ ಮಂಡಿತವಾದ ವಾದಗಳನ್ನು ವಿಶ್ಲೇಷಿಸಿದಾಗ ಮಂಗಳೂರು ತಾಲೂಕಿನ ಕಿರು ಮಹಿಳಾ ಉದ್ಯಮಿಗಳ ಪಾತ್ರವನ್ನು ವಿಶ್ಲೇಷಣೆ ಮಾಡಿರುವುದು ಬಹಳ ಕಡಿಮೆ. ಆದ್ದರಿಂದ ಅಧ್ಯಯನದಲ್ಲಿ ಮಹಿಳಾ ಸಬಲೀಕರಣದಲ್ಲಿ ಮಹಿಳಾ ಕಿರು ಉದ್ಯಮಿಗಳ ಪಾತ್ರವನ್ನು ವಿಶ್ಲೇಷಣೆ ಮಾಡಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ನಾವು ಕಂಡುಕೊಳ್ಳಬಹುದಾದ ಮುಖ್ಯ ಸಂಶೋಧನಾ ಪ್ರಶ್ನೆಗಳೆಂದರೆ :

- ಮಹಿಳಾ ಕಿರು ಉದ್ಯಮಿಗಳ ಸ್ಥಾನಮಾನಗಳೇನು?
- ಮಹಿಳಾ ಕಿರು ಉದ್ಯಮಿಗಳ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳೇನು?
- ಕಿರು ಉದ್ಯಮಗಳ ಅಭಿವೃದ್ಧಿಗೆ ಸಿಗುವ ಅವಕಾಶಗಳೇನು
- ಮಹಿಳಾ ಸಬಲೀಕರಣದಲ್ಲಿ ಮಹಿಳಾ ಕಿರು ಉದ್ಯಮಿಗಳ ಪಾತ್ರವೇನು?
- ಮಹಿಳಾ ಕಿರು ಉದ್ಯಮಿಗಳು ಯಾಕಾಗಿ ಕಿರು ಉದ್ಯಮವನ್ನು ಆಯ್ಕೆ ಮಾಡಿಕೊಂಡಿದ್ದಾರೆ?

ಈ ಎಲ್ಲಾ ಮೇಲಿನ ಪ್ರಶ್ನೆಗಳನ್ನು ಗಮನದಲ್ಲಿ ಇಟ್ಟುಕೊಂಡು ಮಂಗಳೂರು ತಾಲೂಕಿನಲ್ಲಿ ಕಿರು ಉದ್ಯಮ ನಡೆಸುತ್ತಿರುವ ಮಹಿಳಾ ಉದ್ಯಮಿಗಳ ಮಾಹಿತಿಯನ್ನು ಪಡೆದು ಈ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೧.೩. ಅಧ್ಯಯನದ ಉದ್ದೇಶಗಳು

ಪ್ರಸ್ತುತ ಅಧ್ಯಯನವು ಮಹಿಳೆಯರ ಸಬಲೀಕರಣದ ಬಗೆಗಿನ ವಿಚಾರಗಳನ್ನು ಅರಿತುಕೊಳ್ಳಲು ಕೈಗೊಂಡದಾಗಿದೆ. ಉದ್ಯಮರಂಗದಲ್ಲಿ ಮಹಿಳೆಯರು ಯಾವ ರೀತಿ ತಮ್ಮನ್ನು ತೊಡಗಿಸಿಕೊಂಡು ಸಬಲೀಕರಣ ಎನ್ನುವ ಪರಿಕಲ್ಪನೆಗೆ ನ್ಯಾಯ ಒದಗಿಸುತ್ತಿದ್ದಾರೆ ಎಂಬುದನ್ನು ತಿಳಿಯಲು ನೆರವಾಗಲಿದೆ. ಈ ಅಧ್ಯಯನವು ಈ ಕೆಳಗಿನ ಪ್ರಮುಖ ಉದ್ದೇಶಗಳನ್ನು ಒಳಗೊಂಡಿದೆ.

೧.ಮಂಗಳೂರು ತಾಲೂಕಿನ ಕಿರು ಮಹಿಳಾ ಉದ್ದಿಮೆದಾರರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳನ್ನು ಕಂಡುಕೊಳ್ಳುವುದು.

೨. ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪ್ರಭಾವವನ್ನು ಅಧ್ಯಯನ ಮಾಡುವುದು.

೩. ಅಭಿವೃದ್ಧಿಯ ಹಿನ್ನೆಲೆಯನ್ನು ಮಹಿಳೆಯರ ಕೊಡುಗೆಗಳನ್ನು ತಿಳಿಸುವುದು.

೪.. ಮಹಿಳೆಯರ ಅಭಿವೃದ್ಧಿಯಲ್ಲಿ ಸಬಲೀಕರಣದ ಮಹತ್ವವನ್ನು ಗುರುತಿಸುವುದು.

೫. ಮಹಿಳಾ ಉದ್ದಿಮೆದಾರರಿಗೆ ನೀಡುವ ಸವಲತ್ತುಗಳನ್ನು ಅಧ್ಯಯನ ಮಾಡುವುದು.

೬. ಮಹಿಳಾ ಕಿರು ಉದ್ಯಮಿಗಳು ಕಿರು ಉದ್ಯಮವನ್ನು ಆಯ್ಕೆ ಮಾಡಿಕೊಂಡಿವುದಕ್ಕೆ ಇರುವ ಕಾರಣಗಳನ್ನು ಅವಲೋಕನ ಮಾಡುವುದು.

೧.೪. ಅಧ್ಯಯನದ ವಿಧಾನಗಳು

ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಈ ಕೆಳಕಂಡ ಮಾಹಿತಿ ಮೂಲಗಳಿಂದ ಪಡೆಯಲು ನಿರ್ಧರಿಸಿದ್ದೇನೆ ಅವುಗಳೆಂದರೆ :

೧. ಅಧ್ಯಯನವು ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳೆರಡನ್ನೂ ಒಳಗೊಂಡಿದೆ.

೨. ನೇರ ವೈಯಕ್ತಿಕ ಸಂದರ್ಶನದ ಮೂಲಕ ಮಾಹಿತಿ ಸಂಗ್ರಹಿಸಿದ್ದೇವೆ.

೩. ಅಧ್ಯಯನಕ್ಕೆ ಸೈದ್ಧಾಂತಿಕ ನೆಲೆಯನ್ನು ಒದಗಿಸಲು ವಿವಿಧ ಗ್ರಂಥಗಳ, ಸಂಶೋಧನಾ ಲೇಖನಗಳನ್ನು ಪರಾಮರ್ಶಿಸಲಾಗಿದೆ.

೪. ಮಹಿಳಾ ಕಿರು ಉದ್ದಿಮೆದಾರರಿಗೆ ವೈಯಕ್ತಿಕವಾಗಿ, ಪ್ರಶ್ನಾವಳಿ ಉಪಯೋಗಿಸಿಕೊಂಡು ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ.

೧.೫. ಅಧ್ಯಯನದ ಇತಿಮಿತಿಗಳು

೧. ಈ ಅಧ್ಯಯನವನ್ನು ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

೨. ಮಂಗಳೂರು ತಾಲೂಕಿನಲ್ಲಿ ಹಲವಾರು ಕಿರು ಉದ್ಯಮಗಳಿದ್ದು, ಕೇವಲ ಸಣ್ಣ ಹೋಟೆಲ್ ಉದ್ಯಮ, ಟೈಲರ್ ಅಂಗಡಿ, ಡ್ರೆಸ್ ಅಂಗಡಿ, ಉಪ್ಪಿನಕಾಯಿ ತಯಾರಿಕೆ ನಡೆಸುತ್ತಿರುವ ಮಹಿಳಾ ಉದ್ಯಮಿಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

೩. ಯಾವುದೇ ಉದ್ಯಮದ ಅಧ್ಯಯನ ಮಾಡುವಾಗ ಸಾಮಾನ್ಯವಾಗಿ ಎಲ್ಲಾ ಅಂಶಗಳನ್ನು ಪರಿಗಣಿಸಲಾಗುತ್ತದೆ. ಆದರೆ ಈ ಅಧ್ಯಯನದಲ್ಲಿ ಮಹಿಳಾ ಸಬಲೀಕರಣವನ್ನು ಕೇಂದ್ರವಾಗಿರಿಸಿ ಕಿರು ಉದ್ಯಮವನ್ನು ಅಧ್ಯಯನಕ್ಕೆ ಪರಿಗಣಿಸಲಾಗಿವೆ.

೧.೬. ಅಧ್ಯಾಯಗಳು

ಈ ಸಂಶೋಧನಾ ಅಧ್ಯಯನವನ್ನು ಐದು ಮುಖ್ಯ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಪೀಠಿಕೆ, ಉದ್ದೇಶಗಳು, ಅಧ್ಯಯನದ ಇತಿಮಿತಿಗಳು, ಅಧ್ಯಯನದ ವಿಧಾನಗಳು, ಸಮಸ್ಯೆಗಳ ಬಗ್ಗೆ ವಿವರಣೆ ನೀಡಲಾಗಿವೆ.

ಎರಡನೇ ಅಧ್ಯಾಯದಲ್ಲಿ ಮಹಿಳಾ ಸಬಲೀಕರಣದ ನಿರೂಪಣೆಯನ್ನು ವಿವರಿಸಲಾಗಿವೆ.

ಮೂರನೇ ಅಧ್ಯಾಯದಲ್ಲಿ ಮಹಿಳಾ ಉದ್ಯಮಶೀಲತೆ ಮತ್ತು ಕಿರುಉದ್ಯಮಗಳ ಪಾತ್ರವನ್ನು ಸ್ವವಿವರವಾಗಿ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಮಂಗಳೂರು ತಾಲೂಕಿನ ಕಿರು ಮಹಿಳಾ ಉದ್ಯಮಿಗಳಿಂದ ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆ ಮಾಡಲಾಗಿವೆ.

ಐದನೇ ಅಧ್ಯಾಯದಲ್ಲಿ ಅಧ್ಯಯನದ ಸಾರಾಂಶ, ಕೊನೆಮಾತು ಮತ್ತು ಸಲಹೆ ಸೂಚನೆಗಳನ್ನು ಕೊಡಲಾಗಿವೆ.

೧.೭. ಕೊನೆಟಿಪ್ಪಣಿ

೧. ನಾರಾಯಣಿ ದಾಮೋದರ್, ಅಸೀಮ, ೧೯೯೭. ಪುಟ ೨೭

೨. ಯೋಗರಾಜ್ ಎಸ್. ಡಿ, ಮಹಿಳಾ ಸಬಲೀಕರಣ, ೨೦೧೩, ಪುಟ ೩

೩. ಹೇಮಲತಾ ಎಚ್ ಎಂ, ಮಹಿಳಾ ಅಧ್ಯಯನ-೩, ೨೦೦೯, ಪುಟ ೧೩

೪. ಪ್ರಭಾಕರ ಶಿಶಿಲ ಬಿ, ಭಾರತದ ಆರ್ಥಿಕತೆ ಸಮಸ್ಯೆಗಳು ಮತ್ತು ಸುಧಾರಣೆ, ೨೦೦೯ ಪುಟ ೫೮

ಅಧ್ಯಾಯ ೧

ಮಹಿಳಾ ಸಬಲೀಕರಣ

೧.೧. ಸಬಲೀಕರಣದ ಅರ್ಥ

೧.೨. ಮಹಿಳಾ ಸಬಲೀಕರಣದ ಉದ್ದೇಶಗಳು

೧.೩. ಸಬಲರಾದ ಮಹಿಳೆಯರಲ್ಲಿ ಕಂಡು ಬರುವ ಗುಣಲಕ್ಷಣಗಳು

೧.೪. ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ

೧.೫. ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪ್ರಭಾವ

೧.೬. ಮಹಿಳೆಯರ ಅಭಿವೃದ್ಧಿಯಲ್ಲಿ ಸಬಲೀಕರಣದ ಮಹತ್ವ

೧.೭. ಕೊನೆಟಿಪ್ಪಣಿ

ಮಹಿಳಾ ಸಬಲೀಕರಣ

ಮೊದಲನೆಯ ಅಧ್ಯಾಯದಲ್ಲಿ ಅಧ್ಯಾಯನದ ಉದ್ದೇಶ, ಸಮಸ್ಯೆ ಮತ್ತು ಇತಿಮಿತಿಗಳನ್ನು ತಿಳಿದುಕೊಂಡೆವು. ಈಗ ಎರಡನೇ ಅಧ್ಯಾಯದಲ್ಲಿ ಮಹಿಳೆಯರ ಅಭಿವೃದ್ಧಿಯಲ್ಲಿ ಸಬಲೀಕರಣದ ಮಹತ್ವವನ್ನು ತಿಳಿಯಲಿದ್ದೇವೆ.ಮೊದಲನೆಯದಾಗಿ ಮಹಿಳಾ ಸಬಲೀಕರಣದ ಬಗ್ಗೆ ತಿಳಿಯೋಣ.

ಸಬಲೀಕರಣ ಎಂಬುದು ತೊಂಬತ್ತರ ದಶಕದ ವಿದ್ಯಮಾನವಾಗಿದ್ದು, ಇದನ್ನು ಅಧಿಕಾರ ನೀಡುವುದು, ತನ್ನೊಳಗೆ ಅಧಿಕಾರ ಸೃಷ್ಟಿಸುವುದು ಮತ್ತು ಸಮರ್ಥರನ್ನಾಗಿಸುವುದು ಎಂದೆಲ್ಲಾ ವ್ಯಾಖ್ಯಾನಿಸಲಾಗುತ್ತದೆ. ಆಂಗ್ಲಪದ 'ಎಂಪವರ್ ಮೆಂಟ್' ಅನ್ನು ಕನ್ನಡದಲ್ಲಿ ಸಬಲೀಕರಣ ಅಥವಾ ಸಶಕ್ತೀಕರಣ ಎಂದು ಅನುವಾದಿಸಲಾಗಿದೆ. ಎಂಪವರ್ ಮೆಂಟ್ ಪದಕ್ಕೆ ನಿಘಂಟಿನಲ್ಲಿ ಶಕ್ತಿ ಕೊಡು, ಅಧಿಕಾರವಹಿಸು, ಕಾನೂನಿನ ಹಕ್ಕುಗಳನ್ನು ನೀಡು, ಸಮರ್ಥ ಮಾಡು, ಅರ್ಹತೆ, ಹೆಸರು, ಬಿರುದು ಕೊಡು ಎಂಬ ಅರ್ಥಗಳನ್ನು ನೀಡಲಾಗಿದೆ. ಇಲ್ಲಿ ಸಬಲೀಕರಣ ಅಂದರೆ ವೈಯಕ್ತಿಕವಾಗಿ ಅಥವಾ ಸ್ವಂತವಾಗಿ ಸಬಲಗೊಳ್ಳುವ ಅಥವಾ ಶಕ್ತರಾಗುವ ಪ್ರಕ್ರಿಯೆ ಎಂದು ಹೇಳಬಹುದು. ಇನ್ನೊಂದು ಅರ್ಥದಲ್ಲಿ ಸಬಲೀಕರಣವೆಂದರೆ ಬಡವರ ದೀನ ದಲಿತರ ಪರಾವಲಂಬಿತರ ಶಕ್ತಿ ಸಂವರ್ಧನೆ ಎಂದರ್ಥ.[1]

ಸಬಲೀಕರಣವು ಆಯ್ಕೆ ಮತ್ತು ಅವಕಾಶಗಳ ವಿಸ್ತರಣೆಯಲ್ಲಿ ಮಾನವನ ಸಾಮರ್ಥ್ಯಗಳನ್ನು ವರ್ಧಿಸುವ ಮೂಲಕ ಪ್ರತಿಯೊಬ್ಬ ವ್ಯಕ್ತಿಯೂ ಮೌಲ್ಯಯುತ ಹಾಗೂ ಆತ್ಮಗೌರವವುಳ್ಳ ಜೀವನವನ್ನು ನಡೆಸುವಂತಾಗುವ ಒಂದು ಕ್ರಿಯೆಯಾಗಿದೆ. ಮಹಿಳಾ ಸಬಲೀಕರಣವು ಮಹಿಳೆ ಭೌತಿಕ ಸಂಪನ್ಮೂಲಗಳ ಮೇಲೆ ಅಧಿಕ ಭಾಗದ ನಿಯಂತ್ರಣ, ಮಾನವ ಮತ್ತು ಭೌದ್ಧಕತೆಗಳಾದ ಜ್ಞಾನ ಮಾಹಿತಿ ವಿಚಾರಗಳು ಮತ್ತು ಹಣಕಾಸಿನ ಸಂಪನ್ಮೂಲಗಳಾದ ಹಣ ಮತ್ತು ಹಣ ಹೂಡುವಿಕೆ ಮತ್ತು ಮನೆ,ಸಮುದಾಯ, ಸಮಾಜ ಹಾಗೂ ರಾಷ್ಟ್ರದಲ್ಲಿ ನಿರ್ಧಾರ ಕೈಗೊಳ್ಳುವಿಕೆಯಲ್ಲಿನ ನಿಯಂತ್ರಣ. ಇದರಿಂದ ಅಧಿಕಾರ ನಡೆಯುವಿಕೆ ಮುಂತಾದವುಗಳನ್ನು ನಿರ್ಧರಿಸುವ ಒಂದು ಪ್ರಕ್ರಿಯೆಯಾಗಿದೆ.

ಮಹಿಳಾ ಸಬಲೀಕರಣ ಕ್ರಿಯೆಯಲ್ಲಿ ಸಮಾಜಕ್ಕೆ ಮತ್ತು ಸರ್ಕಾರಕ್ಕೆ ಮಹತ್ವದ ಪಾತ್ರವಿದೆ. ಇದಕ್ಕಾಗಿ ಸಮಾಜ ಮತ್ತು ಸರ್ಕಾರಗಳನ್ನು ಲಿಂಗ ಸ್ಪಂದನಕ್ಕೊಲಪಡಿಸಬೇಕು. ಶಿಕ್ಷಣ, ಆಸ್ತಿಹಕ್ಕು, ಆರೋಗ್ಯ ಸೇವೆಗಳು, ಸಾಂಸ್ಥಿಕ ಸಾಲಕ್ಕೆ ಪ್ರವೇಶ ಕಲ್ಪಿಸುವುದು.

[illegible]

೧.೧ ಸಬಲೀಕರಣ

ಸಬಲೀಕರಣವೆಂದರೆ ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯವಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಮಾನಸಿಕ, ಧಾರ್ಮಿಕ ಮತ್ತು ಮೌಲ್ಯಕತೆಗೆ ಸಂಬಂಧಿಸಿದಂತೆ ಶಾಸನಬದ್ಧ ಮತ್ತು ನೈತಿಕ ಶಕ್ತಿಯನ್ನು ಕೊಡುವುದೆಂದರ್ಥ. ವಿಶಾಲಾರ್ಥದಲ್ಲಿ ಹೇಳುವುದಾದರೆ ದಮನ ಅನ್ಯಾಯ ಮತ್ತು ತಾರತಮ್ಯದ ವಿರುದ್ಧ ಧಾರ್ಮಿಕವಾಗಿ ಸಾಂಸ್ಕೃತಿಕವಾಗಿ ಹಾಗು ಶಾಸನಾತ್ಮಕವಾಗಿ ಹೋರಾಡುವುದೇ 'ಸಬಲೀಕರಣ'. ಸಬಲೀಕರಣವು ಎಲ್ಲಾ ಜನರಿಗೂ ಸಾಮಾಜಿಕ ವ್ಯವಸ್ಥೆಯಲ್ಲಿ ನಡೆಯುವ ಹೇಯಕೃತ್ಯಗಳು ಮತ್ತು ಜೀತ ಪದ್ಧತಿ ಹಾಗು ಚಾಕರಿಯಿಂದ ವಿಮುಕ್ತರಾಗಿ ತಮ್ಮ ಜೀವನದಲ್ಲಿ ಸ್ವಾತಂತ್ರ್ಯ ಮತ್ತು ಘನತೆಯನ್ನು ತರುವಲ್ಲಿ ಕೆಚ್ಚೆದೆಯ ದಿಟ್ಟ ವಿಚಾರಗಳನ್ನು ಸ್ಪಷ್ಟಗೊಳಿಸುತ್ತದೆ.

ಮಹಿಳಾ ಸಬಲೀಕರಣವು ಬಹು ಆಯಾಮಗಳನ್ನು ಹೊಂದಿರುವ ಒಂದು ಸಾಮಾಜಿಕ ಪ್ರಕ್ರಿಯೆ. ಮಹಿಳೆಯರು ತಮ್ಮ ಆರ್ಥಿಕ ಸ್ವಾತಂತ್ರ್ಯ ಪಡೆಯುವುದರ ಜೊತೆಗೆ ರಾಜಕೀಯ ಭಾಗವಹಿಸುವಿಕೆ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗುವ ಬೇರೆ ಬೇರೆ ಅಂಶಗಳ ಮೇಲೆ ನಿಯಂತ್ರಣವನ್ನು ಸಾಧಿಸುವುದು ಮತ್ತು ಅವುಗಳನ್ನು ಹೊಂದುವಂತೆ ಮಾಡುವ ಪ್ರಕ್ರಿಯೆಯೇ ಸಬಲೀಕರಣ.

ಸಬಲೀಕರಣದ ಅರ್ಥವೇನೆಂದರೆ ಪುರುಷ ಪ್ರಧಾನ ವ್ಯವಸ್ಥೆಯ ಎಲ್ಲಾ ತಾರತಮ್ಯಗಳಿಗೂ ಸವಾಲು ಹಾಕಿ ಪುರುಷರಷ್ಟೇ ಸಮಾನ ಅಧಿಕಾರ ಪಡೆದರೆ ಒಂದು ಶಕ್ತಿ ಸಮಾಜ ನಿರ್ಮಿಸಿದಂತೆ. ಈ ದೃಷ್ಟಿಯಲ್ಲಿ ಶಕ್ತಿ ಎಂಬುದನ್ನು ಇನ್ನೊಬ್ಬರ ಮೇಲೆ ಅಧಿಪತ್ಯ ಸಾಧಿಸುವ ಕಲ್ಪನೆಯನ್ನಾಗಿಸದೆ ಮಹಿಳೆಯರು ಹೆಚ್ಚು ಸ್ವಾವಲಂಬಿಗಳಾಗಿ ಆಂತರಿಕ ಶಕ್ತಿ ಬೆಳೆಸಿಕೊಳ್ಳುವ ಕಲ್ಪನೆಯನ್ನಾಗಿ ನೋಡಬೇಕಾಗಿದೆ.

ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವುದು, ಆತ್ಮ ವಿಶ್ವಾಸ, ಅರಿವು, ಆತ್ಮ ಗೌರವ ಬೆಳೆಸಿಕೊಂಡು ಸ್ವಂತ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಪಡೆಯುವುದೇ ಮಹಿಳಾ ಸಶಕ್ತಿಕರಣವಾಗುತ್ತದೆ. ಅಭಿವೃದ್ಧಿ ಮತ್ತು ಲಿಂಗದ ವಿಚಾರದಲ್ಲಿ ಸಶಕ್ತಿಕರಣವು ಒಂದು ಕಲ್ಪನೆಗಿಂತ ಪ್ರಕ್ರಿಯೆಯಾಗಿ ವ್ಯಾಖ್ಯಾನಿಸಲ್ಪಡುತ್ತದೆ. ಇದು ಹೆಚ್ಚು ಕ್ರಿಯಾತ್ಮಕವಾಗಿರುತ್ತದೆ. ವಿವಿಧ ಹಿನ್ನಲೆಯಲ್ಲಿ ವಿವಿಧ ರೂಪ ತಾಳುತ್ತದೆ. ಹೀಗೆ ಜೀವನದ ಅನುಭವ ಮತ್ತು ಸಮಾಜದ ಲಿಂಗ ಸಂಬಂಧಿ ಅಂಶಗಳು ಮಹಿಳಾ ಸಶಕ್ತಿಕರಣವನ್ನು ಪ್ರಭಾವಿಸುತ್ತವೆ.[2]

ಜೆ. ಕೆ. ಪಿಳ್ಳೈ - ಅವರ ದೃಷ್ಟಿಕೋನದಲ್ಲಿ ಮಹಿಳೆಯರು ತಮ್ಮನ್ನು ಪೂರ್ಣವಾಗಿ ಗುರುತಿಸಿಕೊಂಡು ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಶಕ್ತಿ ಬೆಳೆಸಿಕೊಳ್ಳುವಂತೆ ಮಾಡುವ ಆಯಾಮಗಳ ಪ್ರಕ್ರಿಯೆ ಮಹಿಳಾ ಸಶಕ್ತಿಕರಣ.[3]

ದಿವ್ಯಾ ಪಾಂಡೆ - ವೈಯಕ್ತಿಕ ಮತ್ತು ಸಾಮುದಾಯಕ ಮಟ್ಟದಲ್ಲಿ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಬೆಳೆಸುವ ಆತ್ಮ ವಿಶ್ವಾಸ ಹೊಂದುವ ಮತ್ತು ಉತ್ಪಧನಾ ಸಂಪನ್ಮೂಲಗಳ ಮೇಲೆ ನಿಯಂತ್ರಣ ಪಡೆಯುವ ಪ್ರಕ್ರಿಯೆ.[4]

ನೈಲಾ ಕಬೀರ್ ಅವರ ಪ್ರಕಾರ ಮಹಿಳೆಯರು ತಮ್ಮ ಸ್ವಾವಲಂಬನೆಯನ್ನು ಹೆಚ್ಚಿಸಿಕೊಂಡು ಸ್ವಾತಂತ್ರ್ಯದ ಹಕ್ಕನ್ನು ಪ್ರತಿಪಾದಿಸುವ, ಆಯ್ಕೆ ಮಾಡುವ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವ ಮತ್ತು ಪರಾಧೀನತೆಯನ್ನು ಪ್ರಶ್ನಿಸಿ ಅದನ್ನು ಹೋಗಲಾಡಿಸುವ ಸಾಮರ್ಥ್ಯವನ್ನು ಪಡೆಯುವ ಪ್ರಕ್ರಿಯೆಯೇ ಮಹಿಳಾ ಸಬಲೀಕರಣ ಅಥವಾ ಮಹಿಳಾ ಸಶಕ್ತೀಕರಣ.[5]

ಸಬಲೀಕರಣವು ಒಂದು ಪ್ರಕ್ರಿಯೆಯಾಗಿದ್ದು ಮಹಿಳೆಯರು ತಮ್ಮ ಸ್ವಾವಲಂಬನೆಯನ್ನು ವೃದ್ಧಿಸುವುದಕೋಸ್ಕರ ಆಯ್ಕೆಗಳನ್ನು ಮಾಡಿಕೊಳ್ಳಲು ತಮಗಿರುವ ವೈಯಕ್ತಿಕ ಹಕ್ಕನ್ನು ಪ್ರತಿಪಾದಿಸುವುದಕೊಸ್ಕರ ಮತ್ತು ತಮ್ಮ ಅಧೀನತೆಯನ್ನು ಪ್ರಶ್ನಿಸುವ ಮತ್ತು ನಿವಾರಿಸುವಲ್ಲಿ ತಮ್ಮೊಳಗೆ ಸಂಘಟಿತರಾಗುವುದಾಗಿದೆ ಎಂದು ಕೆಲ್ಲರ್ ಮತ್ತು ಮೆಬ್ಬವೆ (೧೯೯೧) ವರ್ಣಿಸಿದ್ದಾರೆ.[6]

೧.೨ ಮಹಿಳಾ ಸಬಲೀಕರಣದ ಉದ್ದೇಶಗಳು

೧. ಸಮಾಜದಲ್ಲಿ ಆಚರಣೆಯಲ್ಲಿರುವ ಲಿಂಗ ತಾರತಮ್ಯವನ್ನು ತೊಡೆದು ಹಾಕಿ ಮಹಿಳೆಯರ ಘನತೆ, ಗೌರವ ಹಾಗೂ ಸಾಮಾಜಿಕಸ್ಥಾನ ಮಾನಗಳನ್ನು ಉನ್ನತಿಗೊಳಿಸುವುದು.

೨. ಮಹಿಳೆಯರಲ್ಲಿ ಸುಪ್ತವಾಗಿರುವ ಅಪೂರ್ವ ಸಾಮರ್ಥ್ಯಗಳನ್ನು ಗುರ್ತಿಸಿ ವೃದ್ಧಿಗೂಳಿಸಿ ಅವರು ಬದಲಾವಣೆಯ ನಿಯೋಗಿಗಳಾಗಿ ರೂಪುಗೊಳ್ಳುವಂತೆ ಆತ್ಮವಿಶ್ವಾಸ ಮೂಡಿಸುವುದು.

೩. ಮಹಿಳೆಯರು ತಮ್ಮ ಅಭಿವೃದ್ಧಿಗೆ ಅವಕಾಶಗಳನ್ನು ಗುರುತಿಸಿಕೊಂಡು ಅಭಿವೃದ್ಧಿಯಾಗಲು ಪ್ರೋತ್ಸಾಹ ನೀಡುವುದು.

೪. ಮನೆ ಹಾಗು ಸಮುದಾಯದಲ್ಲಿ ಲಭ್ಯವಿರುವ ವಿವಿಧ ರೀತಿಯ ಸಂಪನ್ಮೂಲಗಳ ಮೇಲೆ ಅಧಿಕಾರ ಹೊಂದುವುದು ಹಾಗೂ ಅವುಗಳನ್ನು ಬಳಸಿಕೊಳ್ಳುವ ತಿಳುವಳಿಕೆ ಮತ್ತು ತಂತ್ರಗಳನ್ನು ಬೆಳೆಸುವುದು.

೫. ಮಹಿಳೆಯರ ಸಂತಾನೋತ್ಪತಿ ಆರೋಗ್ಯ, ಶಿಶು ಜನನ ಮತ್ತು ಮಕ್ಕಳ ಪಾಲನೆಗಳ ಬಗ್ಗೆ ಅರಿವು ನೀಡುವುದು.

೬. ಅಸಮಾನತೆ, ಹಸಿವು, ಶೋಷಣೆ, ಹಿಂಸೆ ಹಾಗೂ ನಿಂದನೆಗಳ ವಿರುದ್ಧ ಜಾಗೃತರಾಗಿ ಸಮಾನತೆಗಾಗಿ ಹಾಗೂ ಅಭಿವೃದ್ಧಿಗಾಗಿ ಸಂಗಟನಾತ್ಮಕ ಹೋರಾಟ ಮಾಡುವ ಆತ್ಮವಿಶ್ವಾಸ ಬೆಳೆಸುವುಸುವುದು.

೭. ಹಕ್ಕುಗಳು ಹಾಗೂ ಅಭಿವೃದ್ಧಿಯ ಅವಕಾಶಗಳ ಬಗ್ಗೆ ಅರಿವು ಮೂಡಿಸುವುದು.

೮. ಮಹಿಳೆಯರಲ್ಲಿ ವ್ಯಕ್ತಿತ್ವ ವಿಕಾಸದೂಂದಿಗೆ ನಾಯಕತ್ವದ ಗುಣಗಳನ್ನು ಬೆಳೆಸುವುದು.

೯. ಮಹಿಳೆಯರಲ್ಲಿ ತನ್ನ ಹಾಗೂ ಕುಟುಂಬದ ಶೈಕ್ಷಣಿಕ, ಆರೋಗ್ಯ, ಆರ್ಥಿಕ ವಿಶಯಗಳಲ್ಲಿ ಸ್ವತಂತ್ರವಾಗಿ ಯೋಚಿಸುವ ಸಾಮರ್ಥ್ಯ, ಜವಬ್ದಾರಿ ಹೊರುವ ಹಾಗೂ ನಿರ್ಣಯ ತೆಗೆದುಕೊಳ್ಳುವ ಶಕ್ತಿಯನ್ನು ಬೆಳೆಸುವುದು.

೧.೩. ಸಬಲರಾದ ಮಹಿಳೆಯರಲ್ಲಿ ಕಂಡು ಬರುವ ಗುಣಲಕ್ಷಣಗಳು

೧. ದೈಹಿಕ ಮತ್ತು ಮಾನಸಿಕ ಆರೋಗ್ಯ ಉತ್ತಮ ಸ್ಥಿತಿಯಲ್ಲಿರುತ್ತದೆ.

೨. ಆತ್ಮ ಗೌರವ, ಆತ್ಮವಿಶ್ವಾಸ ಮತ್ತು ಸ್ವಾಭಿಮಾನ ಹೊಂದಿದ್ದು ಸ್ವಾವಲಂಬಿಗಳಗಿರುತ್ತಾರೆ.

೩. ಸ್ವತಮ್ತ್ರವಾದ ಯೋಚನೆ ಹಾಗೂ ಅಭಿವ್ಯಕ್ತಿ ಸ್ವತಂತ್ಯ ಹೊಂದಿರುತ್ತಾರೆ.

೪. ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳನ್ನು ಪಡೆದುಕೊಂಡಿರುತ್ತಾರೆ.

೫. ಆರ್ಥಿಕಸ್ವಾವಲಂಬನೆ ಹೊಂದಿದ್ದು ಸಂಪನ್ಮೂಲಗಳ ಒಡೆತನ ಹಾಗೂ ಬಳಕೆಗೆ ಅಧಿಕಾರ ಹೊಂದಿರುತ್ತಾರೆ.

೬. ಸಾಮಾಜಿಕ ಸ್ವಾವಲಂಬನೆ ಹೊಂದಿದ್ದು ಆರ್ಥಿಕ, ಸಾಮಾಜಿಕ ,ರಾಜಕೀಯ ಹಾಗೂ ಅಡಳಿತ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುತ್ತಾರೆ.

೭. ಸಂವಹನ ಕೌಶಲ ಹಾಗೂ ನಾಯಕತ್ವದ ಗುಣಗಳನ್ನು ಹೊಂದಿದ್ದು ಸಮಾಜದ ಸಂಘ ಸಂಸ್ಥೆಗಳ ಜೊತೆ ಭಾಗಿಗಳಾಗುತ್ತಾರೆ

೮. ಆಡಳಿತ ಮತ್ತು ರಾಜಕೀಯ ವ್ಯವಹಾರಗಳಲ್ಲಿ ಆತ್ಮವಿಶ್ವಾಸದಿಂದ ಪಾಲ್ಗೊಳ್ಳುತ್ತಾರೆ.

೯. ಎಲ್ಲಾ ಸೌಲಭ್ಯಗಳನ್ನು, ಅವಕಾಶಗಳನ್ನು ಪಡೆದುಕೊಳ್ಳುವ ಮಾರ್ಗ ತಿಳಿದಿರುತ್ತಾರೆ.

೧೦. ಶೋಷಣೆಗೆ ಒಳಗಾಗದಿರುವ ಹಾಗೂ ನ್ಯಾಯ ಪಡೆದಿರುವ ಶಕ್ತಿ ಹೊಂದಿರುತ್ತಾರೆ.

೧೧. ಹಕ್ಕು ಬಾಧ್ಯತೆಗಳ ಬಗ್ಗೆ ಅರಿವು ಹೊಂದಿರುತ್ತಾರೆ.

೧೨.ತನ್ನ ದೇಹ, ಮನಸ್ಸು, ಯೋಚನೆಗಳನ್ನೊಳಗೊಂಡಂತೆ ಜೀವನದ ವಿವಿಧ ಅಂಶಗಳ ಬಗ್ಗೆ ತೀರ್ಮಾನ ಕೈಗೊಳ್ಳುವ ಸ್ವಾತಂತ್ರ್ಯ ಹೊಂದಿರುತ್ತಾರೆ.

೧೩. ವಿವಾಹದ ವಯಸ್ಸು, ಸಂತಾನೋತ್ಪತಿ, ಆರೋಗ್ಯ, ಮಕ್ಕಳ ಸಂಖ್ಯೆ ಮತ್ತು ಸುರಕ್ಷಿತಾಯ್ತತನದ ಬಗ್ಗೆ ತಿಳುವಳಿಕೆ ಹಾಗೂ ಅಗತ್ಯ ಕೌಶಲಗಳನ್ನು ಹೊಂದಿರುತ್ತಾರೆ.

೧೪. ಸಾಮಾಜಿಕ ನ್ಯಾಯ, ಶೋಷಣೆಯ ವಿರುದ್ಧ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಾರೆ.

೨.೪ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ

ಜಗತ್ತಿನ ಇಂದಿನ ಆರ್ಥಿಕ ಹಿನ್ನಡೆಗೆ ಹಾಗೂ ಭಾರತ ಅನುಭವಿಸುತ್ತಿರುವ ಭಯದ ವಾತಾವರಣಕ್ಕೆ ನಾವು ಅಂದು ಮತ್ತು ಇಂದಿಗೂ ಸಹ ಮಹಿಳೆಯರನ್ನು ಮುಖ್ಯವಾಹಿನಿಗೆ ತರದೇ ಮೂಲೆಗುಂಪಾಗಿಸುವುದೇ ಕಾರಣ. ಮೂಲತಃ ಪುರುಷರಿಗಿಂತಲೂ ಬಹು ಕೌಶಲ್ಯ ಮತ್ತು ಅತುಲ ಬಲ ಹೊಂದಿರುವ ಮಹಿಳೆ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಬಹುಮುಖ ಪ್ರತಿಭೆ ತೋರಬಲ್ಲವಳಾಗಿದ್ದಾಳೆ. ವಿಶ್ವ ಮಾನ್ಯ ಮಹಾತ್ಮ ಗಾಂಧೀಜಿ ಹೇಳುತ್ತಾರೆ - 'ನಾವು ನಮ್ಮ ಹೆಣ್ಣು ಮಕ್ಕಳನ್ನು ಗಂಡು ಮಕ್ಕಳಂತೆ ಸಹಜವಾಗಿ ಸ್ವೀಕರಿಸಬೇಕು, ಬೆಳೆಸಬೇಕು. ಇದನ್ನು ನಾವು ಮಾಡುವವರೆಗೆ ನಮ್ಮ ದೇಶಕ್ಕೆ ಕರಾಳ ಗ್ರಹಣ ತಪ್ಪಿದ್ದಲ್ಲ'. ಈ ಮಾತು ಇಡೀ ಜಗತ್ತಿಗೆ ಅನ್ವಯ. ಶೌರ್ಯ, ಸಾಹಸಗಳು ಗಂಡಸರ ಗುತ್ತಿಗೆಯಲ್ಲಿ ಎಂದು ಹೇಳಿದ ಬಾಪೂಜಿಯ ಮಾತನ್ನು ಮನನ ಮಾಡಿಕೊಂಡು ಹೆಣ್ಣು-ಗಂಡು ಸಮನಾಗಿ ಹೆಜ್ಜೆ ಹಾಕಿದಾಗ ಮಾತ್ರ ಸಶಕ್ತ ರಾಷ್ಟ್ರ ಅಸ್ತಿತ್ವಕ್ಕೆ ಬರಲು ಸಾಧ್ಯ.

ಮಹಿಳೆಯರ ಅಭಿವೃದ್ಧಿಯ ವಿವಿಧ ಆಯಾಮಗಳನ್ನು ಪರಿಶೀಲಿಸಬೇಕಿದೆ. ಮಹಿಳೆಯರ ಸಹಜ ಹಕ್ಕುಗಳನ್ನು ರಕ್ಷಿಸುತ್ತಾ ಅವರನ್ನು ಅಭಿವೃದ್ಧಿಯಾ ಮುಖ್ಯವಾಹಿನಿಗೆ ಕರೆ ತರಬೇಕು ಮತ್ತು ಅಂತಹ ಅಭಿವೃದ್ಧಿಯಲ್ಲಿ ಸಾಂಸ್ಕೃತಿಕ ಮೌಲ್ಯಗಳಿಗೆ, ಹೆಣ್ಣಿನ ಗೌರವಕ್ಕೆ ಧಕ್ಕೆಯಾಗಬಾರದು. ರಾಷ್ಟ್ರದ ಕುಟುಂಬದ

ಅಭಿವೃದ್ಧಿಗೆ ಮಹಿಳೆಯರ ಕೊಡುಗೆಯನ್ನು ಎಂದೂ ಕಡೆಗಣಿಸಲು ಸಾಧ್ಯವಿಲ್ಲವೆಂಬುದನ್ನು ಎಲ್ಲರೂ ಮನಗಾಣುವಂತಾಗಬೇಕು. ದುಡಿಮೆಯ ವಿಷಯಕ್ಕೆ ಬಂದಾಗ ಜೀವನೋಪಾಯಕ್ಕಾಗಿ ಬೇಸಾಯವಾಗಿರಲಿ ಇಲ್ಲವೇ ವಾಣಿಜ್ಯ ಆಧಾರಿತ ಬೇಸಾಯವೇ ಆಗಿರಲಿ, ಕೃಷಿಯಲ್ಲಿ ಮಹಿಳೆಯರ ಕೊಡುಗೆ ಅಪಾರವಾದುದು. ಪುರುಷರ ಹೆಚ್ಚಿನ ಕೃಷಿ ಕೆಲಸಗಳು ಯಾಂತ್ರಿಕ ಅಥವಾ ವಿದ್ಯುತ್ ಶಕ್ತಿಯನ್ನು ಉಪಯೋಗಿಸುವಂಥಾಗಿದ್ದರೆ, ಮಹಿಳೆಯರ ಕೆಲಸಗಳು ಯಾವುದೇ ಸಲಕರಣೆಗಳನ್ನು ಉಪಯೋಗಿಸುವುದಿಲ್ಲವಾದ್ದರಿಂದ ಮತ್ತು ಹೆಚ್ಚಾಗಿ ದೈಹಿಕ ಶ್ರಮವನ್ನು ಆಧರಿಸುವುದರಿಂದ ಅವರ ಕೆಲಸವನ್ನು ಕೌಶಲ್ಯರಹಿತ ಮತ್ತು ಕಡಿಮೆ ಉತ್ಪಾದಕ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಸಮಯ ಕಠಿಣ ದುಡಿಮೆ ಮಾಡಿದರೂ ಅವರಿಗೆ ಕಡಿಮೆ ಸಂಬಳ ನೀಡಲಾಗುತ್ತದೆ.

೧.೫ ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪ್ರಭಾವ

ಮಹಿಳಾ ಸಶಕ್ತೀಕರಣ ಪ್ರಕ್ರಿಯೆಯಲ್ಲಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದು ಒಂದು ಪರಿಕ್ರಮವಾಗಿದೆ. ಆರ್ಥಿಕ ಸಶಕ್ತೀಕರಣಕ್ಕೆ ಅವರನ್ನು ಸ್ವ-ಉದ್ಯೋಗದಲ್ಲಿ ತೊಡಗಿಸುವುದು ಅಥವಾ ಉದ್ಯಮಿಗಳಾಗಿ ಬೆಳೆಯಲು ಪ್ರೋತ್ಸಾಹ ನೀಡುವುದು ಪ್ರಮುಖ ವಿಧಾನವಾಗಿದೆ. ಮಹಿಳೆಯರು ಉದ್ಯಮಿಗಳಾಗಲು ಎರಡು ಪ್ರಕಾರದ ಪ್ರೋತ್ಸಾಹದಾಯಕ ಅಂಶಗಳು ಅವಶ್ಯಕ ಅವುಗಳೆಂದರೆ ಮೊದಲನೆಯದು ಆಂತರಿಕ ಪ್ರೋತ್ಸಾಹದಾಯಕ ಅಂಶಗಳು, ಎರಡನೆಯ ಅಂಶ ಬಾಹ್ಯ ಪ್ರೋತ್ಸಾಹದಾಯಕ ಅಂಶಗಳು.

ಆಂತರಿಕ ಪ್ರೋತ್ಸಾಹದಾಯಕ ಅಂಶಗಳು ಮಹಿಳೆಯರಲ್ಲೇ ಉದ್ಭವವಾಗುವಂತದ್ದು. ನಮ್ಮಲ್ಲಿರುವ ಪ್ರತಿಭೆ, ಸಾಮರ್ಥ್ಯ ಹಾಗು ಕೌಶಲ್ಯವನ್ನು ಗುರುತಿಸಿಕೊಂಡು ಅವುಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳುವುದು. ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ನಮ್ಮನ್ನು ನಾವೇ ಬೆಂಬಲಿಸಿಕೊಳ್ಳುವ ತಿಳಿವಳಿಕೆ ಮೂಡಿಸಿಕೊಳ್ಳಬೇಕು. ಬಾಹ್ಯ ಪ್ರೋತ್ಸಾಹದಾಯಕ ಅಂಶಗಳು ಮಹಿಳೆಯಲ್ಲಿರುವ ನಿರ್ವಹಣ ಕೌಶಲ್ಯ, ಸಾಮರ್ಥ್ಯಗಳೆಲ್ಲವೂ ಕೇವಲ ಕುಟುಂಬ ನಡೆಸುವುದಕ್ಕೆ ಸೀಮಿತಗೊಂಡಿದೆ. ಅದನ್ನು ಅವರ ಆರ್ಥಿಕ ಸ್ವಾವಲಂಬನೆಗೆ ಹಾಗೂ ದೇಶದ ಪ್ರಗತಿಗೆ ಬಳಸಿಕೊಳ್ಳಬೇಕೆಂದರೆ ಅವರಲ್ಲಿ ಅಡಗಿರುವ ಪ್ರತಿಭೆ ಸಾಮರ್ಥ್ಯವನ್ನು ಹೊರತರಲು ಹೊರಗಿನಿಂದ ಪ್ರಯತ್ನಗಳು, ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ಮಧ್ಯ ಪ್ರವೇಶಿಕೆ ಅವಶ್ಯಕ. ಕುಟುಂಬದ ನೈತಿಕ ಬೆಂಬಲ, ಸರ್ಕಾರದ ಸಹಾಯ ಹಾಗೂ ಪುರುಷರ ಸಹಕಾರ ಉತ್ತೇಜನ ನೀಡುವ ಅಂಶಗಳಾಗಿ ಬರಬೇಕು.

ಸಾಮಾನ್ಯವಾಗಿ ಮಹಿಳೆಯರು ವೇತನ ಸಿಗುವ ಉದ್ಯೋಗಕ್ಕೆ ಹೋಗಲು ಇಚ್ಚಿಸುತ್ತಾರೆ. ಅವರು ಗಂಡಾಂತರವನ್ನು ಎದುರಿಸಲು ಅಥವಾ ಹೆಚ್ಚು ಕ್ರಿಯಾತ್ಮಕವಾಗಿರಲು ಹಿಂಜರಿಯುತ್ತಾರೆ. ಅದರರ್ಥ ಅವರಲ್ಲಿ ಸಾಮರ್ಥ್ಯವಿಲ್ಲ ಎಂದಲ್ಲ. ಸೂಕ್ತ ಪರಿಸರವನ್ನು ಸೃಷ್ಟಿಸುವುದು ಅಗತ್ಯ.ಮಹಿಳೆಯರು ಉದ್ಯಮ ನಡೆಸುವುದನ್ನು ಒಂದು ಪರ್ಯಾಯ ಮತ್ತು ಉತ್ತಮ ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಳ್ಳುವಂತೆ ಪ್ರೇರೆಪಿಸಬೇಕು. ಆಗ ಅವರಲ್ಲಿ ಹುದುಗಿರುವ ಉದ್ಯಮಶೀಲ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬಳಸಿಕೊಳ್ಳಬಹುದು.

ಮಹಿಳೆಯರ ಶಿಕ್ಷಣ ಮಟ್ಟವನ್ನು ಉತ್ತಮಪಡಿಸಬೇಕು. ಒಳ್ಳೆ ಶಿಕ್ಷಣದ ಹಿನ್ನೆಲೆಯಿರುವ ಮಹಿಳೆಯರು ಉದ್ಯಮದಲ್ಲಿ ಏನೇ ಸಮಸ್ಯೆ ಬಂದರೂ ಆತ್ಮವಿಶ್ವಾಸದಿಂದ ಎದುರಿಸುತ್ತಾರೆ. ಶಿಕ್ಷಣವು ತಾತ್ವಿಕ ನೆಲೆಯನ್ನು ನೀಡುವುದರಿಂದ ವ್ಯಾಪಾರ ವಹಿವಾಟುಗಳನ್ನು ನಡೆಸುವುದು, ಅಧಿಕಾರಿ ಹಾಗು ಸಾರ್ವಜನಿಕರೊಂದಿಗೆ ಉತ್ತಮ ಸಂಪರ್ಕ ಹೊಂದುವುದು, ಸರಿಯಾದ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವುದು ಮುಂತಾದ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಸಾಧ್ಯವಾಗುತ್ತದೆ.

ಮಹಿಳಾ ಉದ್ಯಮಿಗಳ ಕುರಿತು ಸಮಾಜದ ಮನೋಭಾವ ಹಾಗೂ ದೃಷ್ಟಿಕೋನದಲ್ಲಿನ ಬದಲಾವಣೆ, ಮಹಿಳೆಯರಿಗೆ ಸಾಮಾಜಿಕ ಮುಕ್ತ ವಾತಾವರಣವನ್ನು ಒದಗಿಸುವುದು ಇವು ಅವರ ಉದ್ಯಮಶೀಲ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತವೆ.

ಮಹಿಳೆಯರು ಉದ್ಯಮ ಕ್ಷೇತ್ರವನ್ನು ಪ್ರವೇಶಿಸಲು ಮೊದಲು ಔಪಚಾರಿಕ ತರಬೇತಿ ಪಡೆಯುವುದು ಅವಶ್ಯಕ. ಉದ್ಯಮಿಗಳಾದ ನಂತರವೂ ತಮ್ಮ ಕೌಶಲ್ಯಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಆಗಾಗ್ಗೆ ತರಬೇತಿ ಶಿಬಿರಗಳಲ್ಲಿ ಭಾಗವಹಿಸುತ್ತಿರಬೇಕು.

ಮಹಿಳಾ ಉದ್ಯಮಿಗಳ ಯಶಸ್ಸು ಇತರ ಮಹಿಳೆಯರಿಗೆ ಮಾದರಿ ಅಥವಾ ಪ್ರೇರಕ ಅಂಶವಾಗಿರಬೇಕು. ಯಶಸ್ವಿ ಮಹಿಳಾ ಉದ್ಯಮಿಗಳನ್ನು ಗುರುತಿಸಿ,ಪ್ರಶಂಸಿಸಿ ಅವರ ಬಗ್ಗೆ ಪ್ರಚಾರ ಮಾಡಬೇಕು.

೧.೬ ಮಹಿಳೆಯರ ಅಭಿವೃದ್ಧಿಯಲ್ಲಿ ಸಬಲೀಕರಣದ ಮಹತ್ವ

ಮಹಿಳಾ ಸಬಲೀಕರಣವು ಪುರುಷ ಮತ್ತು ಮಹಿಳೆಯರ ನಡುವೆ ಸಮಾನತೆಯ ಹೊಸ ಸಮಾಜ ಸೃಷ್ಟಿಸುತ್ತದೆ. ಒಂದು ಸ್ವಯಂ ನಿರ್ಧಾರ ತೆಗೆದುಕೊಂಡರೆ ಅವರೇ ಮುಂದೆ ತಮ್ಮ ಶ್ರಮ , ಆದಾಯ, ಲೈಂಗಿಕ ಸಂತಾನೋತ್ಪತ್ತಿ ಹಾಗೂ ವ್ಯವಹಾರ ನಿರ್ವಹಣೆಯ ಮೇಲೆ ಸೂಕ್ತ ನಿಯಂತ್ರಣ ಹೊಂದುತ್ತಾರೆ.

ನಿರ್ಭಂಧ ಮುಕ್ತ ವಾತಾವರಣದಿಂದ ಸ್ವತಂತ್ರಯುತ ವ್ಯವಸ್ಥೆಗೆ ಕಾಲಿಡುವ ಸ್ತ್ರೀ ಯಾವೊಂದು ವಿಷಯ ವ್ಯವಸ್ಥೆಯನ್ನಾದರೂ ಮೌಢ್ಯತೆಯಿಂದ ಒಪ್ಪಿಕೊಳ್ಳದೆ ಸ್ವತಂತ್ರವಾಗಿ ಚಿಂತಿಸಿ ಅಭಿಪ್ರಾಯ ವ್ಯಕ್ತಪಡಿಸುತ್ತಾಳೆ.

ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ಬರಬಹುದಾದ ಎಲ್ಲಾ ತರನಾದ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುತ್ತಾಳೆ. ರಾಷ್ಟ್ರ ಜೀವನದ ವಿವಿಧ ಸ್ತರಗಳಲ್ಲಿ ಗುರುತಿಸಿಕೊಳ್ಳುವ ಸ್ತ್ರೀ ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವ ಪ್ರವೃತಿ ಬೆಳೆಯುತ್ತದೆ. ತಮ್ಮ ಮಕ್ಕಳನ್ನು ಹೆಚ್ಚು ಲಿಂಗ ಸೂಕ್ಷ್ಮ ಮತಿಗಳನ್ನಾಗಿ ಸಾಮಾಜೀಕರಿಸುತ್ತಾಳೆ. ಸೂಕ್ಷ್ಮ ಮತಿಗಳಾಗಿರುವ ಮಹಿಳೆಯರು ರಾಷ್ಟ್ರಡಳಿತದಲ್ಲಿ ತಮ್ಮ ಪ್ರತಿಭಾ ಪ್ರಕಾಶನದೊಂದಿಗೆ ಅಮೂಲ್ಯ ಸೇವೆ ಸಲ್ಲಿಸುವಲ್ಲಿ ಮಾದರಿಯಾಗಿರುತ್ತಾರೆ. ಸಾಮಾಜಿಕ ಪಿಡುಗುಗಳ ವಿರುದ್ಧ ಅವಕಾಶ ವಂಚಿತರ ಪರ ಹೋರಾಟದ ಪ್ರವೃತಿ ಬೆಳೆಸಿಕೊಳ್ಳುವುದಲ್ಲದೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸುವಲ್ಲಿ ಈ ಕೆಳ ಕಂಡಂತೆ - ತಮ್ಮ ಸಶಕ್ತತೆಯ ಮಹತ್ವ ತೋರಿಸುತ್ತಾರೆ.

- ಪುರುಷ ಪ್ರಧಾನ ವ್ಯವಸ್ಥೆಯ ಬಿಗಿ ಹಿಡಿತವನ್ನು ತಪ್ಪಿಸಿ, ಅವರ ಪರಾಧೀನತೆಯಿಂದ ಮುಕ್ತಿ ಪಡೆಯುವಂತೆ ಮಾಡುತ್ತದೆ.
- ಮಹಿಳಾ ಸಬಲೀಕರಣವು ಆರ್ಥಿಕ ಸ್ವಾತಂತ್ರಕ್ಕೆ ಒತ್ತು ಕೊಟ್ಟು ಆದಾಯ ಗಳಿಕೆ ವೃದ್ಧಿಸಿ, ಅದರ ಮೇಲೆ ಪ್ರಭುತ್ವ ಸಾಧಿಸುವಂತೆ ಮಾಡುತ್ತದೆ.
- ಮಹಿಳಾ ಸಬಲೀಕರಣದಿಂದಾಗಿ ಇವರ ಗೌರವ ಸ್ತಾನ-ಮಾನಗಳು ಹೆಚ್ಚಿ, ಶೋಷಣೆ ಮುಕ್ತ, ವರ್ಗ ರಹಿತ, ವ್ಯವಸ್ಥೆಗೆ ಮಹತ್ವ ಕೊಡುತ್ತದೆ.
- ಲಿಂಗಾಧಾರಿತ ಶ್ರಮ ವಿಭಜನೆ, ಸಾಂಪ್ರದಾಯಕ ಕಟ್ಟುಪಾಡುಗಳು, ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ಧೋಷಗಳನ್ನು ನಿವಾರಿಸುತ್ತದೆ.
- ಪಾರದರ್ಶಕ, ಜವಾಬ್ದಾರಿಯುತ, ಭ್ರಷ್ಟಾಚಾರ ರಹಿತ, ಪ್ರಾಮಾಣಿಕ, ಆಡಳಿತ ನೀಡುವ ಮನೋಭಾವ ಉಂಟಾಗುತ್ತದೆ.
- ನ್ಯಾಯ ಸಮ್ಮತವಲ್ಲದ ಸಾಂಪ್ರದಾಯಿಕ ಕಟ್ಟುಪಾಡುಗಳು ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ದೌರ್ಜನ್ಯಗಳ ವಿರುದ್ದ ಸ್ತ್ರೀ ಪರ ಚಳುವಳಿಗಳಿಗೆ ಸ್ಪಂಧಿಸುತ್ತಾಳೆ.
- ಪುರುಷ ಪ್ರಧಾನ ವ್ಯವಸ್ಥೆಯ ಅಧೀನತೆ ಒಪ್ಪಿಕೊಳ್ಳದೇ ಸಹಕಾರ, ಹೊಂದಾಣಿಕೆ, ಸಾಮರಸ್ಯ ಭಾವನೆಯ ಸರ್ವ ಸಮ್ಮತ ವ್ಯವಸ್ಥೆಗೆ ಇದು ಬುನಾದಿ ಹಾಕುತ್ತದೆ.

- ಮಹಿಳಾ ಸಶಕ್ತತೆಯಿಂದ ಸಮಾಜದ ಪುನರ್ ರಚನೆಯಗುವುದರ ಮೂಲಕ ವ್ಯಾಪಕ ಬದಲಾವಣೆಗೆ ಅವಕಾಶ ಮಾಡಿಕೊಡುತ್ತದೆ ಮತ್ತು ಮಹಿಳೆಯರು ತಮ್ಮ ಅನಿಸಿಕೆ, ಭಾವನೆ, ಅನುಭವಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಹಾಯಕವಾಗುತ್ತದೆ.
- ಉತ್ತಮ ನಾಯಕತ್ವದ ಗುಣ ಬೆಳೆಸುವುದರ ಜೊತೆಗೆ ಆಡಳಿತಾತ್ಮಕ ತರಬೇತಿಯೊಂದಿಗೆ ರೋಲ್ ಮಾಡಲ್ ಆಗುವುದಕ್ಕೆ ಮುಕ್ತ ಅವಕಾಶ ದೊರಕಿಸಿಕೊಟ್ಟಂತಾಗುತ್ತದೆ.

ಈ ಅಧ್ಯಾಯದಲ್ಲಿ ಮಹಿಳಾ ಸಬಲೀಕರಣದ ಬಗ್ಗೆ ತಿಳಿದುಕೊಂಡೆವು. ಮೂರನೇ ಅಧ್ಯಾಯದಲ್ಲಿ ಮಹಿಳಾ ಉದ್ಯಮಶೀಲತೆ ಮತ್ತು ಕಿರು ಉದ್ಯಮದ ಬಗ್ಗೆ ತಿಳಿಯಲಿದ್ದೇವೆ. ಏಕೆಂದರೆ ಮಹಿಳಾ ಸಬಲೀಕರಣದಲ್ಲಿ ಮಹಿಳಾ ಉದ್ಯಮಶೀಲತೆ ಮತ್ತು ಕಿರು ಉದ್ಯಮಗಳು ಪ್ರಮುಖ ಪಾತ್ರ ವಹಿಸುತ್ತವೆ.

೨.೭ ಕೊನೆಟಿಪ್ಪಣಿ

೧. ಜಯಶೀಲ ಮತ್ತು ಸುಧಾಕರ್ ಎಸ್, ಗ್ರಾಮೀಣ ಮಹಿಳೆಯರ ಸಬಲೀಕರಣದ ವಿವಿಧ ಆಯಾಮಗಳು, ೨೦೦೭ ಪುಟ ೨೮.

೨. ಯೋಗರಾಜ್ ಎಸ್ ಡಿ, ಮಹಿಳಾ ಸಬಲೀಕರಣ, ೨೦೧೩ ಪುಟ ೨೪

೩. ಐ.ಬಿ.ಐ.ಡಿ.

೪. ಐ.ಬಿ.ಐ.ಡಿ.

೫. ಐ.ಬಿ.ಐ.ಡಿ.

೬. ಜಯಶೀಲ ಮತ್ತು ಸುಧಾಕರ್ ಎಸ್, ಗ್ರಾಮೀಣ ಮಹಿಳೆಯರ ಸಬಲೀಕರಣದ ವಿವಿಧ ಆಯಾಮಗಳು, ೨೦೦೭ ಪುಟ ೨೮.

ಅಧ್ಯಾಯ ೩

ಮಹಿಳಾ ಉದ್ಯಮಶೀಲತೆ ಮತ್ತು ಕಿರು ಉದ್ಯಮಗಳ ಪಾತ್ರ

೩.೧. ಉದ್ಯಮಶೀಲತೆ ಮತ್ತು ಮಹಿಳಾ ಉದ್ಯಮಿಗಳು

೩.೨. ಮಹಿಳಾ ಉದ್ಯಮಿಗಳ ಗುಣಲಕ್ಷಣಗಳು ಮತ್ತು ಸವಾಲುಗಳು

೩.೩. ಮಹಿಳಾ ಉದ್ಯಮಿಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸರ್ಕಾರ ಕೈಗೊಂಡ ಕ್ರಮಗಳು

೩.೪. ಕಿರು ಉದ್ಯಮಗಳು ಮತ್ತು ಅವುಗಳ ಮಹತ್ವ

೩.೫. ಕಿರು ಉದ್ಯಮಗಳ ಸಮಸ್ಯೆಗಳು

೩.೬. ಕಿರು ಮಹಿಳಾ ಉದ್ದಿಮೆದಾರರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ

೩.೭. ಅಭಿವೃದ್ಧಿಗೆ ಮಹಿಳೆಯರ ಕೊಡುಗೆ

೩.೮. ಮಹಿಳಾ ಉದ್ದಿಮೆದಾರರಿಗೆ ನೀಡುವ ಸವಲತ್ತುಗಳು

೩.೯. ಕಿರು ಉದ್ಯಮ ಆಯ್ಕೆ ಮಾಡಿಕೊಂಡಿರುವುದಕ್ಕೆ ಕಾರಣಗಳು

೩.೧೦. ಕೊನೆ ಟಿಪ್ಪಣಿ

ಮಹಿಳಾ ಉದ್ಯಮಶೀಲತೆ ಮತ್ತು ಕಿರು ಉದ್ಯಮಗಳ ಪಾತ್ರ

ಎರಡನೇ ಅಧ್ಯಾಯದಲ್ಲಿ ಮಹಿಳಾ ಸಬಲೀಕರಣ ಮತ್ತು ಅಭಿವೃದ್ಧಿಯ ಬಗ್ಗೆ ಅರಿತಿದ್ದೇವೆ. ಮೂರನೇ ಅಧ್ಯಾಯದಲ್ಲಿ ಮಹಿಳಾ ಉದ್ಯಮಿಗಳು ಎದುರಿಸುತ್ತಿರುವ ಸಮಸ್ಯೆ, ಸವಾಲು ಮತ್ತು ಸವಲತ್ತುಗಳನ್ನು ತಿಳಿಯಲಿದ್ದೇವೆ. ಮೊದಲನೆಯದಾಗಿ ಉದ್ಯಮಶೀಲತೆಯ ಉಗಮದ ಬಗ್ಗೆ ತಿಳಿದುಕೊಳ್ಳೋಣ.

ಕೈಗಾರಿಕಾ ಕ್ರಾಂತಿಗೆ ಮೊದಲು ಮನೆಯೇ ಉತ್ಪಾದನಾ ಘಟಕವಾಗಿತ್ತು. ಮನೆಗೆ ಬೇಕಾದ ವಸ್ತುಗಳನ್ನು ಮನೆಯಲ್ಲೇ ತಯಾರಿಸಲಾಗುತ್ತಿತ್ತು. ಮನೆಯ ಸದಸ್ಯರಿಗೆ ಉದ್ಯೋಗವನ್ನು ನೀಡುತ್ತಿತ್ತು. ವಸ್ತುಗಳನ್ನು ಮನೆಯವರಿಗೆ ಮತ್ತು ಹೊರ ಜನರಿಗೆ ಪೂರೈಸುತ್ತಿತ್ತು. ಇವುಗಳನ್ನು ಗೃಹ ಕೈಗಾರಿಕೆ ಎಂದು ಕರೆಯಲಾಗುತ್ತಿತ್ತು. ಇದರಲ್ಲಿ ಮಹಿಳೆಯರು ಪ್ರಧಾನ ದುಡಿಮೆಗಾರರಾಗಿರುತ್ತಿದ್ದರು. ಆದರೆ ಕೈಗಾರೀಕರಣ ಮತ್ತು ಯಾಂತ್ರೀಕರಣದಿಂದ ಈ ಗೃಹ ಉತ್ಪಾದನಾ ಘಟಕಗಳು ಕುಸಿಯಲಾರಂಭಿಸಿದವು. ವಸ್ತುಗಳಿಗೆ ಬೇಡಿಕೆಯಿಲ್ಲದೆ ಅನೇಕ ಘಟಕಗಳು ಮುಚ್ಚಿಹೋದವು. ಕೆಲಸ ಕಳೆದುಕೊಂಡ ಪುರುಷರು ಕೆಲಸ ಅರಸಿಕೊಂಡು ವಲಸೆ ಹೋದರು. ಹೆಚ್ಚಿನ ಕೌಶಲ್ಯ ಪಡೆದು ಕಾರ್ಖಾನೆಗಳಲ್ಲಿ ದುಡಿಯಲಾರಂಭಿಸಿದರು. ಆದರೆ ಕೆಲಸ ಕಳೆದುಕೊಂಡ ಮಹಿಳೆಯರು ಆಚಲನೆಯಿಂದ, ವಲಸೆ ಹೋಗಲಾಗದೆ ಕುಟುಂಬದ ನಿರ್ವಹಣೆಗೆ ಕೂಲಿ ಅಥವಾ ಕಡಿಮೆ ವೇತನದ ಕೆಲಸಗಳಲ್ಲಿ ತೊಡಗಿಸಿಕೊಂಡರು. ವಸ್ತುಗಳ ಉತ್ಪಾದನೆಯ ಕೌಶಲ್ಯವನ್ನು ಕಳೆದುಕೊಳ್ಳಲಾರಂಭಿಸಿದರು. ಕೆಲವೇ ಮಹಿಳೆಯರು ಹೊರಗೆ ಹೋಗಿ ದುಡಿಯಲು ಸಾಧ್ಯವಾಗದವರು ಗೃಹಕೈಗಾರಿಕೆಯನ್ನು ಮುಂದುವರೆಸಿದರು. ಇನ್ನೂ ಕೆಲವರು ಹೊಸದಾಗಿ ಸ್ವ-ಉದ್ಯೋಗವನ್ನು ಪ್ರಾರಂಭಿಸಿದರು. [1]

ವ್ಯಕ್ತಿಯು ತಾನೇ ಸ್ವತಃ ಉತ್ಪಾದನಾ ಕಾರ್ಯದಲ್ಲಿ ತೊಡಗಿ ವಸ್ತುಗಳನ್ನು ಉತ್ಪಾದಿಸುವುದು ಉತ್ಪಾದನಾ ಘಟಕಗಳನ್ನು ನಡೆಸುವುದು, ಇತರರಿಗೂ ಕೆಲಸ ನೀಡುವುದು, ವಸ್ತುಗಳನ್ನು ಕೊಳ್ಳುವ ಮತ್ತು ಮಾರಾಟ ಮಾಡುವ ವ್ಯವಹಾರ ಮಾಡುವುದೇ ಸ್ವ-ಉದ್ಯೋಗ. ಈ ಸ್ವ-ಉದ್ಯೋಗವು ಹೆಚ್ಚು ವ್ಯವಸ್ಥಿತವಾದಂತೆ, ವೃತ್ತಿಪರವಾದಂತೆ ಉದ್ಯಮಶೀಲತೆಯಾಗಿ ಪರಿವರ್ತನೆಗೊಂಡಿತು. ಸ್ವ-ಉದ್ಯೋಗದ ತಾಂತ್ರಿಕ ಪದವೇ ಉದ್ಯಮಶೀಲತೆ. ನಿಘಂಟಿನ ಅರ್ಥದಲ್ಲಿ ಉದ್ಯಮಶೀಲತೆ ಎಂದರೆ ಸಾಹಸ ಕಾರ್ಯದಲ್ಲಿ ಅಥವಾ ಸಾಹಸೂದ್ಯಮದಲ್ಲಿ ತೊಡಗುವ ಗುಣ ಎಂದಿದೆ. ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೊಸ ಉತ್ಪನ್ನವನ್ನು ಮಾರುಕಟ್ಟೆಗೆ ತರುವುದು, ಹೊಸ ಕಚ್ಚಾ ಸಾಮಾಗ್ರಿ, ಹೊಸ ತಂತ್ರಜ್ಞಾನ ಬಳಸಿ ಉತ್ಪಾದನ ಕಾರ್ಯವನ್ನು ಕೈಗೊಳ್ಳುವುದು, ವಸ್ತುವಿನ ವಿನ್ಯಾಸ, ಗುಣಮಟ್ಟ,

ಮಾರಾಟ ಮುಂತಾದವುಗಳಲ್ಲಿ ನವೀನತೆ ತರುವುದು, ವ್ಯಾಪಾರ ವಹಿವಾಟುಗಳನ್ನು ಕೈಗೊಳ್ಳುವ ಕಾರ್ಯಗಳೇ ಉದ್ಯಮಶೀಲತೆ.

೩.೧ ಉದ್ಯಮಶೀಲತೆ ಮತ್ತು ಮಹಿಳಾ ಉದ್ಯಮಿಗಳು

ಉದ್ಯಮಶೀಲತೆ ಎಂಬುದು ಒಬ್ಬ ವ್ಯಕ್ತಿ ಯಾರು ಒಂದು ಉದ್ದಿಮೆಯನ್ನು ಸ್ಥಾಪಿಸುವನೋ ಅವನು ಉದ್ಯಮಶೀಲ. ಆಂದರೆ ವಿವಿಧ ಹಂತಗಳ ಮುಖಾಂತರ ಒಂದು ಉದ್ದಿಮೆಯನ್ನು ಸ್ಥಾಪಿಸುವುದೇ ಉದ್ಯಮಶೀಲತೆ. ಇಲ್ಲಿ ಉದ್ಯಮಶೀಲತೆ ಎಂಬ ಪದವು ಪ್ರೆಂಚ್ ನಿಂದ ಬಂದಿರುವುದಾಗಿರುತ್ತದೆ. ಇಲ್ಲಿ ಇದರ ಅರ್ಥ ಕೈಗೊಳ್ಳು, ಹೊತ್ತುಕೋ ಎಂಬುದಾಗಿದೆ.

ಜೋಸೆಪ್ ಎ ಸವಾಲ್ ಪ್ರಕಾರ :ಯಾರು ಹೊಸದಾಗಿ ಒಂದು ಆರ್ಥಿಕ ವ್ಯವಸ್ಥೆಯನ್ನು ಪರಿಚಯಿಸುತ್ತರೋ ಅವರೇ ಉದ್ಯಮಶೀಲರು" ಎಂದಿದ್ದಾರೆ.[2]

ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಪ್ರಕಾರ "ಯಾವ ವ್ಯಕ್ತಿಗಳು ವ್ಯಾಪಾರ ವಿಶ್ಲೇಷಣೆ ಮತ್ತು ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಮತ್ತು ಜನರಿಗೆ ಉಪಯೋಗವಾಗುವಂತೆ ಸರಿಯಾದ ಕ್ರಮ ಕೈಗೊಳ್ಳುವನೋ ಅವನೇ ಉದ್ಯಮಶೀಲ ವ್ಯಕ್ತಿ".[3]

ಸ್ವ ಉದ್ಯೋಗಿಗಳಾಗಿ, ಉದ್ಯಮಗಳನ್ನು ನಡೆಸುವವರಾಗಿ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾಲುದಾರರಾಗಿರುವುದರಿಂದ ಉದ್ಯಮಿಗಳಾಗಿ ಮಹಿಳೆಯರನ್ನು ವಿಶೇಷವಾಗಿ ಅಧ್ಯಯನ ಮಾಡುವುದು ಅವಶ್ಯಕ. ಅಲ್ಲದೆ ಪುರುಷಾಧಿಪತ್ಯ ಎನಿಸಿಕೊಂಡಿರುವ ಉದ್ಯಮ ಲೋಕದಲ್ಲಿ ಮಹಿಳಾ ಉದ್ಯಮಿಗಳ ಪ್ರಮಾಣ ಎಷ್ಟು, ಅವರು ಯಾವ ಯಾವ ಉದ್ದಿಮೆಗಳನ್ನು ನಡೆಸುತ್ತಿದ್ದಾರೆ. ಅವರಿಗಿರುವ ಅಡ್ಡಿಗಳೇನು, ಸಮಸ್ಯೆಗಳೇನು? ಪ್ರೋತ್ಸಾಹದಾಯಕ ಅಂಶಗಳು ಯಾವುವು ಎಂಬುದನ್ನು ತಿಳಿಯಬೇಕಾಗುತ್ತದೆ.

ಕೌಶಲ್ಯ ಜ್ಞಾನವನ್ನು ಪಡೆದುಕೊಂಡು, ಪ್ರತಿಭೆಯನ್ನು ಮೈಗೂಡಿಸಿಕೊಂಡು, ವ್ಯಾಪಾರದಲ್ಲೂ ಅರ್ಹತೆಯನ್ನು ಬೆಳೆಸಿಕೊಂಡು, ಜೀವನದಲ್ಲಿ ಏನನ್ನಾದರೂ ಹೊಸದನ್ನು ವಿಶೇಷವಾದುದನ್ನು ಸಾಧಿಸಬೇಕೆಂಬ ಒತ್ತಾಸೆಯಿಂದ ಉದ್ಯಮಿಗಳಾಗಿ ಹೊರಬರುತ್ತಿದ್ದಾರೆ. ಮಹಿಳೆಯರಲ್ಲಿರುವ ಸುಪ್ತ ಪ್ರತಿಭೆಯನ್ನು ಕಂಡು ಅಮೆರಿಕಾದ ಮಾಜಿ ಅಧ್ಯಕ್ಷರ ಪತ್ನಿ ನಾನ್ಸಿ ರೇಗನ್ ಅವರು ಈ ರೀತಿ ಹೇಳುತ್ತಾರೆ "ಒಬ್ಬ ಸ್ತ್ರೀಯು ಟೀ ಬ್ಯಾಗ್ ಇದ್ದಂತೆ. ಅವಳನ್ನು ಬಿಸಿನೀರಿನೊಳಗೆ ಹಾಕುವ ತನಕ ಅವಳು ಎಷ್ಟು

ಬಲಾಢ್ಯಳು ಎಂದು ಹೇಳಲಾಗುವುದಿಲ್ಲ" ಅದೇ ರೀತಿ ಉದ್ಯಮ ಲೋಕದಲ್ಲಿ ಸ್ತ್ರೀಯರನ್ನು ಉದ್ಯಮಿಗಳನ್ನಾಗಿ ಮಾಡದ ಹೊರತು ಅವರ ಅರ್ಹತೆ ಮತ್ತು ಶಕ್ತಿಯನ್ನು ಗುರುತಿಸಲು ಸಾಧ್ಯವಿಲ್ಲ.[4]

ಕಳೆದೆರಡು ದಶಕಗಳಲ್ಲಿ ಮಹಿಳಾ ಉದ್ಯಮಿಗಳ ಸಂಖ್ಯೆ ಹೆಚ್ಚಾಗಿದ್ದರೂ, ಪುರುಷರಿಗೆ ಹೋಲಿಸಿದರೆ, ಅವರ ಪ್ರಮಾಣ ತುಂಬಾ ಕಡಿಮೆ. ವಿಷಾದದ ಸಂಗತಿಯೆಂದರೆ, ಕಡಿಮೆ ಸಂಖ್ಯೆಯಲ್ಲಿ ಮಹಿಳೆಯರು ಉದ್ಯಮ ಕ್ಷೇತ್ರವನ್ನು ಆರಿಸಿಕೊಳ್ಳುತ್ತಿದ್ದಾರೆ. ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಲು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿವೆ. ಮಹಿಳಾ ಉದ್ಯಮಿಗಳಿಗೆಂದೇ ರಾಜ್ಯಮಟ್ಟದಲ್ಲಿ 'ಮಹಿಳಾ ಅಭಿವೃದ್ಧಿ ನಿಗಮ'ವನ್ನು ಸ್ಥಾಪಿಸಲಾಗಿದೆ. [5]

೩.೨. ಮಹಿಳಾ ಉದ್ಯಮಿಗಳ ಗುಣಲಕ್ಷಣಗಳು ಮತ್ತು ಸವಾಲುಗಳು

ಮಹಿಳಾ ಉದ್ಯಮಿಗಳ ಗುಣಲಕ್ಷಣಗಳು

ಉತ್ಪಾದನಾ ಘಟಕವನ್ನು ನಡೆಸುವ, ವ್ಯಾಪಾರ ವಹಿವಾಟನ್ನು ಹೊಂದಿರುವ, ಸಣ್ಣ ಅಥವಾ ದೊಡ್ಡ ಉದ್ಯಮವನ್ನು ನಡೆಸುವ ಮಹಿಳೆಯು ಮಹಿಳಾ ಉದ್ಯಮಿ ಎನಿಸಿಕೊಳ್ಳುತ್ತಾಳೆ. ಮೊದಲೇ ಹೆಸರಿಸಿದ ಸಾಮಾನ್ಯ ಉದ್ಯಮಿಯು ಹೊಂದಿರಬೇಕಾದ ಎಲ್ಲಾ ಗುಣಲಕ್ಷಣಗಳನ್ನು ಮಹಿಳೆಯರು ಅವಶ್ಯವಾಗಿ ಹೊಂದಿರಬೇಕು. ಜೊತೆಗೆ ಮಹಿಳೆ ಅನ್ನುವ ಕಾರಣಕ್ಕಾಗಿ ಮತ್ತು ಸಮಾಜದಲ್ಲಿರುವ ಜಂಡರ್ ವ್ಯವಸ್ಥೆ ಸಂಬಂಧಗಳಿಂದ ಅವರು ವಿಶಿಷ್ಟ ಪರಿಸ್ಥಿತಿ ಹಾಗೂ ಸಮಸ್ಯೆಗಳನ್ನು ಎದುರಿಸಬೇಕಾಗುವುದರಿಂದ ಇನ್ನು ಹೆಚ್ಚುವರಿ ಗುಣಗಳನ್ನು ಬೆಳೆಸಿಕೊಳ್ಳಬೇಕಾಗುತ್ತವೆ.

ಪುರುಷಾಧಿಪತ್ಯ ಮತ್ತು ತೀವ್ರ ಸ್ಪರ್ಧೆಯಿಂದ ಕೂಡಿರುವ ಉದ್ಯಮ ಜಗತ್ತನ್ನು ಮಹಿಳೆಯರು ಪ್ರವೇಶಿಸುವುದೇ ದೊಡ್ಡ ಸಾಹಸ. ಪ್ರವೇಶಿಸಿದ ನಂತರ ಅಲ್ಲಿ ಉಳಿಯುವುದು ಮತ್ತೊಂದು ಸಾಹಸ. ಹೀಗಿರುವಾಗ ಮಹಿಳೆಯರು ಪೂರ್ವ ಯೋಜನೆ, ಸಿದ್ಧತೆ ಮಾಡಿಕೊಂಡು ದೂರಾಲೋಚನೆ ಮಾಡುವ ಪ್ರವೃತ್ತಿಯುಳ್ಳವರಾಗಿರಬೇಕು. ಪುರುಷರಿಗಿಂತ ಹೆಚ್ಚಿನ ಆತ್ಮವಿಶ್ವಾಸ ಹಾಗೂ ಮಾನಸಿಕ ಸದೃಡತೆಯಿಂದ ಮುನ್ನುಗ್ಗುವ ಗುಣವಿರಬೇಕು. ಅವರಿಗಿಂತ ಹೆಚ್ಚು ಕಷ್ಟಪಟ್ಟು ಕೆಲಸ ಮಾಡುವ ಮನಸ್ಸಿರಬೇಕು.

ಪುರುಷಪ್ರಧಾನ ಮೌಲ್ಯ, ಆಚರಣೆಗಳು ಎಲ್ಲಾ ಕಡೆ ಬೇರೂರಿರುತ್ತದೆ. ವ್ಯಾಪಕವಾಗಿ ಹರಡಿಕೊಂಡಿರುತ್ತವೆ. ಮಹಿಳೆಯು ಉದ್ಯಮಿಯಾಗಿ ಕಾರ್ಯ ನಿರ್ವಹಿಸುವಾಗ ವಿಶಿಷ್ಟ ಪರಿಸ್ಥಿತಿ

ಸಮಸ್ಯೆಗಳು ಎದುರಾಗುತ್ತವೆ. ಚಲನೆಯು ಮೇಲಿರುವ ನಿರ್ಬಂಧ, ಸಮಾಜದ ದೃಷ್ಟಿಕೋನ ಮತ್ತು ನಿರೀಕ್ಷೆಗಳು ಅನೇಕ ರೀತಿಯ ಅಡ್ಡಿಗಳನ್ನು ಉಂಟುಮಾಡುತ್ತವೆ. ಪುರುಷ ಸಹೋದ್ಯೋಗಿಗಳೊಂದಿಗೆ, ಇತರ ಸ್ತ್ರೀಯರೊಂದಿಗೆ, ವಿವಿಧ ಜಾತಿ, ವರ್ಗದ ಜನರೊಂದಿಗೆ ಕೆಲಸ ಮಾಡಬೇಕಾಗುತ್ತದೆ. ಕೆಲವೊಮ್ಮೆ ಪುರುಷರು ಮಹಿಳಾ ಬಾಸ್ ಅಧೀನದಲ್ಲಿ ಕೆಲಸ ಮಾಡಲು ಇಷ್ಟಪಡುವುದಿಲ್ಲ. ಅನಿವಾರ್ಯವಾಗಿ ಮಾಡುತ್ತಿರಬಹುದು. ಅಂತಹ ಸಮಯದಲ್ಲಿ ಅತ್ಯಂತ ಸಂಯಮ, ಜಾಣ್ಮೆ ಹಾಗು ಸ್ಟ್ರಾಟೆಜಿಕ್ ಆಗಿ ಕಾರ್ಯ ನಿರ್ವಹಿಸುವ ಗುಣವಿರಬೇಕು.

ಸರ್ಕಾರಿ ವಲಯದಲ್ಲಿ, ಹಣಕಾಸಿನ ಸಂಸ್ಥೆಗಳೊಂದಿಗೆ ವ್ಯವಹಾರ ಮಾಡುವಾಗ, ಮಾರುಕಟ್ಟೆ ಕ್ಷೇತ್ರದಲ್ಲಿ ಸ್ತ್ರೀಯೆಂಬ ಕಾರಣದಿಂದ ತಾರತಮ್ಯ, ನಿರ್ಲಕ್ಷ್ಯ, ಅತಿಯಾದ ಔದಾರ್ಯ ಮತ್ತು ಜಂಡರ್ ಆಧಾರಿತ ಆರೋಪ, ನಿಷೇಧಗಳನ್ನು ಎದುರಿಸಬೇಕಾಗಬಹುದು. ಅವುಗಳನ್ನು ನಿಭಾಯಿಸಿಕೊಂಡು ಯಶಸ್ವಿ ಉದ್ಯಮಿಯಾಗುವ ಛಲ ಹೊತ್ತು ಮುನ್ನಡೆಯಬೇಕು.

ನವೀನ ವಿಚಾರ, ಹೊಸ ತಂತ್ರಜ್ಞಾನ, ಮಾಹಿತಿಯೊಂದಿಗೆ ಯಾವಾಗಲು ಸನ್ನದ್ಧರಾಗಿದ್ದುಕೊಂಡು ಸ್ಪರ್ಧಾಲೋಕದಲ್ಲಿ ಅವಕಾಶಗಳ ಸದುಪಯೋಗ ಮಾಡಿಕೊಳ್ಳುವ ಚತುರತೆಯಿರಬೇಕು.

ಮಹಿಳೆಯರು ಸ್ವ-ಉದ್ಯೋಗದಲ್ಲಿ ಹೆಚ್ಚು ತೊಡಗಿರುವುದರಿಂದ ಅವರನ್ನು ಉದ್ಯಮಿಗಳೆಂದು ಗುರುತಿಸುವುದು ಅಪರೂಪ. ಅಧಿಕ ಬಂಡಾವಾಳ ಹೂಡಿ ಆಧುನಿಕ ತಂತ್ರಜ್ಞಾನ ಬಳಸಿ ದೊಡ್ಡ ಉತ್ಪಾದನಾ ಘಟಕವನ್ನು ನಡೆಸುವ ಚತುರತೆಯಿರಬೇಕು.

ಸವಾಲುಗಳು

ಮಹಿಳಾ ಉದ್ಯಮಿಗಳು ಹಲವಾರು ಸವಾಲುಗಳನ್ನು ಎದುರಿಸಬೇಕಿದೆ. ಹಣಕಾಸು ಮಾರುಕಟ್ಟೆ, ಉತ್ಪಾದನೆ ವೈಯಕ್ತಿಕ ಮತ್ತು ಸಾಮಾಜಿಕ ಸಮಸ್ಯೆಗಳು.

ಸಾಮಾಜಿಕ ವಿಚಾರದಲ್ಲಿ ಎದುರಿಸುವ ಬಲು ದೊಡ್ಡ ಸವಾಲು ಅವರು ಸಾಮಾಜಿಕ ಕಟ್ಟುಪಾಡುಗಳು, ನಿಯಂತ್ರಣಗಳು ಮತ್ತು ಸಂಪ್ರದಾಯವು ಮಹಿಳೆಯರಲ್ಲಿ ಕೀಳರಿಮೆಯ ಪ್ರಜ್ಞೆ ಬೆಳಸಿ ಅವರ ಉದ್ಯಮಶೀಲತೆ ಕೌಶಲ್ಯಕ್ಕೆ ಬಹು ದೊಡ್ಡ ತೊಡಕಾಗಿದೆ. ಇದರ ಪರಿಣಾಮವಾಗಿ ಅವರಿಗೆ ಪ್ರಾಯೋಗಿಕ ಜ್ಞಾನವಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ವಿಷಯದಲ್ಲಿ ವಿದ್ಯಾವಂತ ಮಹಿಳೆಯರ ವಿಚಾರದಲ್ಲಿ ಇದು ಹೊರತಾಗಿಲ್ಲ. ಹೆಚ್ಚಿನ ಮಹಿಳೆಯರು ವಿಶ್ವಾಸದ ಕೊರತೆ ಮತ್ತು ತಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇಲ್ಲದಿರುವುದು. ಒಟ್ಟಿನಲ್ಲಿ ಮಹಿಳೆಯರ ಬಗೆಗಿನ ಸಮಾಜದ ಪ್ರವೃತಿ

ಆಶಾದಾಯಕವಾಗಿಲ್ಲ. ಭಾರತದಲ್ಲಿ ಹೆಚ್ಚಿನ ಮಹಿಳಾ ಉದ್ಯಮಿಗಳು ಕುಟುಂಬದ ಸಹಕಾರವನ್ನು ಪಡೆಯುತ್ತಿಲ್ಲ. ಅವರನ್ನು ಸಂಶಯದ ದೃಷ್ಟಿಯಿಂದ ನೋಡುವವರು ಹೆಚ್ಚಾಗಿದ್ದಾರೆ. ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳುವ ಅವರು ಕುಟುಂಬ ಮತ್ತು ತಮ್ಮ ಉದ್ಯಮವನ್ನು ಸರಿದೂಗಿಸಿಕೊಂಡು ಹೋಗಬೇಕಾದ ಕಠಿಣ ಕೆಲಸ ಅವರ ಮುಂದಿದೆ.

ಆರ್ಥಿಕ ವಿಚಾರದಲ್ಲಿ ಬೇಕಾದ ಹಣಕಾಸಿನ ನೆರವನ್ನು ಪಡೆಯುವುದು ದೊಡ್ಡ ಸಮಸ್ಯೆಯಾಗಿದೆ. ಹಣಕಾಸಿನ ಸಂಸ್ಥೆಗಳು, ಅಧಿಕಾರಿಗಳು ಅವರನ್ನು ಲಘುವಾಗಿ ಪರಿಗಣಿಸಿರುವುದು

ಮಾರುಕಟ್ಟೆ ಇನ್ನೊಂದು ಸಮಸ್ಯೆ ಹೆಚ್ಚಿನವರು ಸಣ್ಣ ಪ್ರಮಾಣದ ಉದ್ಯಮ ಘಟಕವನ್ನು ಹೊಂದಿರುವುದರಿಂದ ಇಂದಿನ ಸ್ವರ್ಧಾತ್ಮಕ ಯುಗದಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅವರು ಹರಸಾಹಸ ಪಡುತ್ತಿದ್ದಾರೆ. ಅಲ್ಲದೆ ಮಾರುಕಟ್ಟೆ ಜ್ಞಾನ ಮತ್ತು ಕೌಶಲ್ಯ ಮಹಿಳೆಯರಲ್ಲಿ ಕಡಿಮೆ ಇದೆ ಎಂದು ಹೇಳಲಾಗಿದೆ.

ಸರಕಾರದ ಬೆಂಬಲ ಸರಿಯಾಗಿಲ್ಲ. ಸರಕಾರದ ಸಮರ್ಪಕ ಬೆಂಬಲ ಇಲ್ಲದಿರುವುದರಿಂದ ಭಾರತದಂತಹ ಸಾಂಪ್ರದಾಯಕ ಸಮಾಜದಲ್ಲಿ ಮಹಿಳಾ ಉದ್ಯಮಿಗಳು ತೀವ್ರ ತರವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ

೩.೩. ಮಹಿಳಾ ಉದ್ಯಮಿಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸರಕಾರ ಕೈಗೊಂಡಿರುವ ಕ್ರಮಗಳು

ಮಹಿಳಾ ಉದ್ಯಮಿಗಳು ಎದುರಿಸುತ್ತಿರುವ ಸಮಸ್ಯೆಗಳು

ಭಾರತದಲ್ಲಿ ಮಹಿಳಾ ಉದ್ಯಮಿಗಳ ಸಂಖ್ಯೆ ತುಂಬಾ ಕಡಿಮೆಯಿದೆ. ಉದ್ಯಮ ಜಗತ್ತಿನಲ್ಲಿ ಮಹಿಳೆಯರು ಅನುಭವಿಸುವ ತೊಂದರೆ, ಉದ್ಯಮ ಜಗತ್ತನ್ನು ಪ್ರವೇಶಿಸಲು ಅವರಿಗೆ ಅಡ್ಡಿಯಾಗಿದೆ. ಕೆಲವು ಸಮಸ್ಯೆಗಳು ಈ ಕೆಳಗಿನಂತಿವೆ :

೧. ಭಾರತವು ಪ್ರಮುಖವಾಗಿ ಪುರುಷ ಪ್ರಧಾನ ಸಮಾಜವಾಗಿರುವುದರಿಂದ, ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯದ ಕೊರತೆಯಿದೆ.

೨. ಹಲವು ಮಹಿಳೆಯರು ಉದ್ಯಮದಲ್ಲಿ ತೊಡಗಿಕೊಂಡರೂ, ಅದನ್ನು ಸಮರ್ಥವಾಗಿ ನಿಭಾಯಿಸುವ, ಮುನ್ನಡೆಸುವ ಕೌಶಲ್ಯ ಇಲ್ಲದೆ ವಿಫಲರಾಗುತ್ತಾರೆ.

೩. ಸಾಮಾಜಿಕ ಕಟ್ಟುಪಾಡುಗಳು, ಲಿಂಗ ಭೇದಭಾವ, ಸಂಪ್ರದಾಯಗಳು, ಮಹಿಳೆಯರ ಬಗ್ಗೆ ಇರುವ ತಪ್ಪು ಕಲ್ಪನೆಗಳು, ಧಾರ್ಮಿಕ ನಂಬಿಕೆಗಳು ಹಾಗೂ ಆಚರಣೆಗಳು ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಮಹಿಳೆಯರಿಗೆ ಅಡ್ಡಿಯಾಗಿವೆ.

೪. ಹೆಣ್ಣು ಮಕ್ಕಳ ಶಿಕ್ಷಣದ ಕುರಿತು ನಿರ್ಲಕ್ಷ್ಯ, ವೃತ್ತಿಪರ ಕೋರ್ಸ್ ಗಳ ಆಯ್ಕೆಗೆ ಅವಕಾಶ ಇಲ್ಲದಿರುವುದು, ಶಿಕ್ಷಣ ಪಡೆಯಲು ಮೂಲಭೂತ ಸೌಕರ್ಯಗಳ ಕೊರತೆ ಇತ್ಯಾದಿಗಳು ಹೆಣ್ಣುಮಕ್ಕಳು ಉದ್ಯಮಿಗಳಾಗಿ ರೂಪುಗೊಳ್ಳುವಂತಾಗಲು ಶಿಕ್ಷಣವನ್ನು ಸಾಧನವನ್ನಾಗಿ ಮಾಡಿಕೊಳ್ಳಲು ಇರುವ ಅಡ್ಡಿಗಳು.

೫. ಸ್ಥಿರತೆ, ಭದ್ರತೆಗೆ ಆದ್ಯತೆ ನೀಡುವ ಮಹಿಳಾ ಉದ್ಯಮಿಗಳು ಗಂಡಾಂತರವನ್ನು ಎದುರಿಸಲು ಸಿದ್ಧರಿರುವುದಿಲ್ಲ. ಜೊತೆಗೆ ಸಂಪನ್ಮೂಲದ ಕೊರತೆ, ಆತ್ಮವಿಶ್ವಾಸದ ಕೊರತೆ, ಚಲನಶೀಲತೆಯ ಕೊರತೆ ಹಾಗೂ ದ್ವಿಗುಣ ಕೆಲಸದ ಹೊರೆ ಮಹಿಳಾ ಉದ್ಯಮಿಗಳ ವೃತ್ತಿ ಚಲನೆಗೆ ಅಡ್ಡಿಯಾಗಿವೆ.

೬. ತೀವ್ರ ಪೈಪೋಟಿ, ಸ್ಪರ್ಧೆ, ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆ ಕುರಿತು ಮಾಹಿತಿ ಕೊರತೆ, ಮಹಿಳಾ ಉದ್ಯಮಿಗಳ ಬಗ್ಗೆ ಗ್ರಾಹಕರ ಉದಾಸೀನ ಧೋರಣೆ, ವಸ್ತುಗಳ ವಿತರಣೆಗೆ ಮೂಲಸೌಕರ್ಯಗಳ ಕೊರತೆ, ಪ್ರಚಾರ, ಜಾಹೀರಾತಿನ ಕೊರತೆ ಮುಂತಾದ ಸಮಸ್ಯೆಗಳನ್ನು ಮಹಿಳಾ ಉದ್ಯಮಿಗಳು ತಮ್ಮ ವಸ್ತುಗಳನ್ನು ಮಾರಾಟ ಮಾಡುವಾಗ ಎದುರಿಸಬೇಕಾಗುತ್ತದೆ.

೭. ಸಾಮಾಜಿಕ ಕಟ್ಟುಪಾಡುಗಳು, ಪುರುಷ ಪ್ರಧಾನ ಸಮಾಜ ಹಾಗೂ ಆರ್ಥಿಕ ವ್ಯವಸ್ಥೆ ಮಹಿಳೆಯರನ್ನು ಪರಾವಲಂಬಿಗಳನ್ನಾಗಿ ಮಾಡಿದೆ. ಬ್ಯಾಂಕ್ ಗಳು, ಹಣಕಾಸು ಸಂಸ್ಥೆಗಳು ಮಹಿಳಾ ಉದ್ಯಮಿಗಳಿಗೆ ಹಣಕಾಸಿನ ನೆರವು ನೀಡಲು ಹಿಂಜರಿಯುತ್ತವೆ. ತೆಗೆದುಕೊಳ್ಳುವ ಸಾಲಕ್ಕೆ ಪ್ರತಿಯಾಗಿ ಭದ್ರತೆ ಒದಗಿಸುವ ಸಾಮರ್ಥ್ಯ ಹೆಚ್ಚಿನ ಮಹಿಳೆಯರಲ್ಲಿಲ್ಲ. ಬಂಡವಾಳ ಕೊರತೆಯಿಂದಾಗಿ ಮಹಿಳೆಯರು ಉದ್ಯಮವನ್ನು ಸ್ಥಾಪಿಸಲು ಹಿಂದೇಟು ಹಾಕುತ್ತಾರೆ.

೮. ನವೀನ ತಂತ್ರಜ್ಞಾನದ ಕೊರತೆ, ಸರ್ಕಾರ, ಕೈಗಾರಿಕೆ ಹಾಗೂ ಹಣಕಾಸು ಸಂಸ್ಥೆಗಳಿಂದ ಬೆಂಬಲ ಹಾಗೂ ಮಾರ್ಗದರ್ಶನದ ಕೊರತೆ, ಕಚ್ಚಾ ಸಾಮಾಗ್ರಿಗಳ ಕೊರತೆ ಮಹಿಳಾ ಉದ್ಯಮಿಗಳಿಗಿರುವ ಸಮಸ್ಯೆಗಳಾಗಿವೆ.

೯. ಕಳೆದ ಒಂದೂವರೆ ದಶಕದಿಂದ ಚಾಲ್ತಿಯಲ್ಲಿರುವ ಜಾಗತೀಕರಣವು ಮಹಿಳಾ ಉದ್ಯಮಿಗಳಿಗೆ ದೊಡ್ಡ ಸವಾಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಒಡ್ಡುವ ಸ್ಪರ್ಧೆ, ಗುಣಮಟ್ಟ, ಬೆಲೆ ಪೈಪೋಟಿ,

ಅಗತ್ಯ ವಸ್ತುಗಳ ಸರಬರಾಜಿನಲ್ಲಿ ವಿಳಂಬ ಇತ್ಯಾದಿಗಳನ್ನು ಎದುರಿಸಲು ಮಹಿಳಾ ಉದ್ಯಮಿಗಳು ಸನ್ನದ್ಧರಾಗಬೇಕಾಗಿದೆ.

ಸರಕಾರವು ಕೈಗೊಂಡ ಕ್ರಮಗಳು

ಸರಕಾರವು ಮಹಿಳಾ ಉದ್ಯಮಿಗಳಿಗಾಗಿ ಕೈಗೊಂಡ ಕ್ರಮಗಳು ತೃಪ್ತಿದಾಯಕವಾಗಿದೆ. ಆದರೆ ಅವು ಸಾಲದು. ಕೆಳಗಿನವುಗಳು ಪ್ರಮುಖ ಕಾರ್ಯಕ್ರಮಗಳಾಗಿವೆ

ಯೋಜನೆಯ ಮೊದಲು ದಶಕಗಳಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳಾ ಪಾತ್ರಕ್ಕೆ ಅಷ್ಟೊಂದು ಪ್ರಾಮುಖ್ಯತೆ ಕೊಟ್ಟಿರಲಿಲ್ಲ. ೬ ನೇ ಪಂಚವಾರ್ಷಿಕಯೋಜನೆಯ ಕರಡು (೧೯೮೦-೧೯೮೫) ಮಹಿಳಾ ಉದ್ಯಮಶೀಲತೆ ವಿಷಯಕ್ಕೆ ಪ್ರಾಮುಖ್ಯತೆ ಕೊಟ್ಟಿತು ಮತ್ತು ಕ್ರಮಗಳನ್ನು ಕೈಗೊಂಡಿತು.

೧೯೮೫ ರಲ್ಲಿ ಭಾರತ ಸರ್ಕಾರ ಮಹಿಳಾ ಉದ್ಯಮಿಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಸಮಿತಿಯನ್ನು ಸ್ಥಾಪಿಸಿತು. ದೇಶದಲ್ಲಿ ಉದ್ಯಮಿಗಳನ್ನು ಉತ್ತೇಜಿಸುವ ಸಲುವಾಗಿ ೧೯೯೧ ರ ಕೈಗಾರಿಕಾ ನೀತಿ ಮಹಿಳೆಯರಿಗಾಗಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮಹತ್ವ ನೀಡಿತು. ಉತ್ಪನ್ನ ಮತ್ತು ಪ್ರಕ್ರಿಯೆ ಆಧಾರಿತ ಕೋರ್ಸುಗಳು ಮಹಿಳೆಯರನ್ನು ಸಣ್ಣ ಕೈಗಾರಿಕೆ ನಡೆಸಲು ಅವಕಾಶ ಮಾಡಿಕೊಟ್ಟಿತು.

ಭಾರತದಲ್ಲಿ ಸರಕಾರದ ವಿವಿಧ ಕಾರ್ಯಕ್ರಮಗಳ ಮೂಲಕ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಬೆಳೆಸಲು ಬ್ಯಾಂಕ್ ಗಳು ಅತೀ ಮುಖ್ಯವಾದ ಪಾತ್ರ ವಹಿಸುತ್ತಿವೆ. ಮಹಿಳೆಯರ ರಾಷ್ಟ್ರೀಯ ನೀತಿಯ ಪ್ರಕಾರ ಮಹಿಳಾ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಲಾಗಿದೆ. ಮಹಿಳಾ ಸಮೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ಮಹಿಳಾ ಕೋಶ್ ಮುಂತಾದ ಯೋಜನೆಗಳನ್ನು ಪರಿಚಯಿಸಿದೆ.

ಆಧುನಿಕ ವಿಜ್ಞಾನ ತಂತ್ರಜ್ಞಾನದಿಂದ ನಿರ್ಮಿತವಾದ ನೂತನ ಆರ್ಥಿಕ, ಸಾಮಾಜಿಕ ವ್ಯವಸ್ಥೆ ಮತ್ತು ಹೊಸ ವಿಚಾರಗಳು ನೂತನ ಮಹಿಳಾ ಉದ್ಯಮಿಗಳಿಗೆ ಹೆಚ್ಚಿನ ಪ್ರೇರಣೆ ನೀಡಿದೆ. ಅವರ ಪ್ರೋತ್ಸಾಹಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹೊಸ ಕ್ರಮಗಳನ್ನು ಶೋಧಿಸುತ್ತವೆ. ಸರ್ಕಾರೇತರ ಸಂಘಟನೆಗಳು ಮಹಿಳಾ ಉದ್ಯಮಿಗಳು, ಉದ್ಯಮ ಸಾಹಸದ ಚೈತನ್ಯವ ತುಂಬುವ ಪ್ರಕ್ರಿಯೆಯಲ್ಲಿ ನಿರತವಾಗಿವೆ.

ಮಹಿಳೆಯರ ವಿಷಯದಲ್ಲಿ ಸಬಲೀಕರಣ ಮತ್ತು ಉದ್ಯಮಶೀಲತೆಯು ಒಂದಕ್ಕೊಂದು ಪೂರಕವಾಗಿವೆ. ಯಶಸ್ವಿ ಉದ್ಯಮಶೀಲತೆಯು ಸಬಲೀಕರಣಕ್ಕೆ ದಾರಿ ಮಾಡಿಕೊಟ್ಟರೆ, ಸಬಲೀಕರಣವು ಉದ್ಯಮಿಗಳನ್ನು ತಮ್ಮ ಗುರಿ ತಲುಪಲು ಸ್ಫೂರ್ತಿ ನೀಡುತ್ತದೆ. ನಿರುದ್ಯೋಗಿಗಳಿಗೆ ನೇರವಾಗಿ ಭತ್ಯೆ ನೀಡುವ ಬದಲು ಅವರಿಗೆ ಕೌಶಲ್ಯ ಆಧಾರಿತ ತರಬೇತಿ ನೀಡುವುದು, ಮಹಿಳೆಯರಲ್ಲಿ ಉದ್ಯಮಶೀಲತೆ ಗುಣಗಳನ್ನು ಬೆಳೆಸುವುದು ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ಮಹತ್ವವಾದದ್ದು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ, ಆರ್ಥಿಕ ಅಭಿವೃದ್ಧಿಗೆ ಮಹಿಳಾ ಉದ್ಯಮಿಗಳ ಅಭಿವೃದ್ಧಿ ಅತೀ ಅಗತ್ಯವಾಗಿದೆ. ಸಶಕ್ತರಾಗಲು ಮಹಿಳೆಯರಿಗೆ ಬೆಂಬಲ, ಸಮಾಲೋಚನೆ ಮತ್ತು ತರಬೇತಿಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಸರ್ಕಾರದ ಜೊತೆಗೆ ಹಲವಾರು ಸರ್ಕಾರೇತರ ಸಂಘ ಸಂಸ್ಥೆಗಳು ಮಹಿಳೆಯರನ್ನು ಆರ್ಥಿಕವಾಗಿ ಸದೃಢರನ್ನಾಗಿಸಲು ಶ್ರಮಿಸಬೇಕಿದೆ.

೩.೪ ಕಿರು ಉದ್ಯಮಗಳು ಮತ್ತು ಅವುಗಳ ಮಹತ್ವ

ಕಳೆದ ಐದೂವರೆ ದಶಕಗಳ ಅವಧಿಯಲ್ಲಿ ಕಿರು ಪ್ರಮಾಣದ ಉದ್ಯಮಗಳ ವಲಯವು ದೇಶದ ಆರ್ಥಿಕತೆಯಲ್ಲಿ ಪ್ರಮುಖ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಈ ಕಿರು ಉದ್ಯಮಿಗಳು ಒಟ್ಟು ದೇಶೀಯ ಉತ್ಪನ್ನದ ಬೆಳವಣಿಗೆ, ಉದ್ಯೋಗ ಅವಕಾಶಗಳ ಸೃಷ್ಟಿ ಮತ್ತು ಒಟ್ಟು ಆರ್ಥಿಕಾಭಿವೃದ್ಧಿಗೆ ಮಹತ್ವದ ಕೊಡುಗೆಯನ್ನು ನೀಡಿದೆ. ಈ ಉದ್ಯಮಗಳು ಈಗ ಸಣ್ಣ ಪ್ರಮಾಣದ ಸೇವೆ ಮತ್ತು ವ್ಯವಹಾರ ಉದ್ಯಮಗಳನ್ನು ಒಳಗೊಂಡಿದೆ. ಆದ್ದರಿಂದ ಈ ವಲಯವನ್ನು ಕಿರು ಉದ್ಯಮಗಳ ವಲಯ ಅಥವಾ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ ಅತ್ಯಂತ ಸಣ್ಣ ಪುಟ್ಟ ವ್ಯವಹಾರಗಳನ್ನು ನಡೆಸುವ ವ್ಯಾಪಾರಗಳು ಸೇರಿರುತ್ತಾರೆ.

ಕಿರು ಉದ್ಯಮಗಳ ಮಹತ್ವ

ಕಿರು ಉದ್ಯಮಗಳು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಭಾರತದಲ್ಲಿ ಕಿರು ಉದ್ಯಮಗಳು ನಿರುದ್ಯೋಗವನ್ನು ಹೋಗಲಾಡಿಸುವಲ್ಲಿ ವಿಶೇಷ ಮಹತ್ವ ಪಡೆದಿದೆ.

ಉದ್ಯೋಗ ಸೃಷ್ಟಿ, ಮಿತಿ ಮೀರಿ ಬೆಳೆಯುತ್ತಿರುವ ಜನಸಂಖ್ಯೆ, ಮಿಲಿಯಾಂತರ ಜನರು ನಿರುದ್ಯೋಗಿಗಳು ಮತ್ತು ಅರೆ ಉದ್ಯೋಗಿಗಳಿರುವ ಭಾರತ ದೇಶದಲ್ಲಿ ಕಿರು ಉದ್ಯಮಗಳು ಉದ್ಯೋಗ ಸೃಷ್ಟಿಯ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿವೆ. ಬೃಹತ್ ಪ್ರಮಾಣದ ಶ್ರಮ ಮತ್ತು ಬಂಡವಾಳ ಕೊರತೆಯ ಸಮಸ್ಯೆಗಳನ್ನು ಎದುರಿಸುತ್ತಿರುವ ಭಾರತದ ಕಿರು ಉದ್ಯಮಗಳು ಮಹತ್ವ ಪಡೆದಿದೆ.

[illegible]

ರಾಷ್ಟ್ರೀಯ ಆದಾಯಕ್ಕೆ ಕಿರು ಉದ್ಯಮಗಳಿಂದ ಪಡೆದ ಆದಾಯವು ಬಹಳ ಕೊಡುಗೆಯನ್ನು ನೀಡಿವೆ. ಪ್ರತಿಯೋರ್ವರ ತಲಾ ಆದಾಯದ ಏರಿಕೆಗೆ ಕಾರಣವಾಗಿರುವುದರಿಂದ ಕಿರು ಉದ್ಯಮಗಳು ಉದ್ಯೋಗಾವಕಾಶಗಳನ್ನು ಒದಗಿಸಿ ಆರ್ಥಿಕಾಭಿವೃದ್ಧಿಗೆ ಪರೋಕ್ಷವಾಗಿ ಕಾರಣವಾಗಿದೆ.

ಬಂಡವಾಳ ಕೊರತೆ ಎದುರಿಸುತ್ತಿರುವ ಭಾರತದಂತಹ ದೇಶದಲ್ಲಿ ಕಿರು ಉದ್ಯಮಗಳು ವಿಶೇಷ ಮಹತ್ವ ಪಡೆದಿವೆ. ಪ್ರತಿ ಕಾರ್ಮಿಕನು ತೊಡಗಿಸಬೇಕಾಗಿರುವ ಬಂಡವಾಳದ ಪ್ರಮಾಣ ಈ ಉದ್ಯಮಗಳಲ್ಲಿ ತುಂಬಾ ಕಡಿಮೆಯಾಗಿರುತ್ತದೆ. ಮಿತಿ ಮೀರಿದ ಶ್ರಮ ಮತ್ತು ಮಿತಿ ಬಂಡವಾಳ ಲಭ್ಯವಿರುವ ಭಾರತ ದೇಶದಲ್ಲಿ ಕಿರು ಉದ್ಯಮಿಗಳು ಪರಿಣಾಮಕರ ಪರಿಹಾರವಾಗಬಲ್ಲವು.

ಕಿರು ಉದ್ಯಮಗಳ ಸ್ಥಾಪನೆಗೆ ಸಾಮಾನ್ಯ ಕಾರ್ಮಿಕರು ಸಾಕು. ಈ ಉದ್ಯಮಗಳಲ್ಲಿ ಕೆಲಸ ಮಾಡಲು ಅಥವಾ ಉದ್ಯಮವನ್ನು ನಡೆಸಲು ವಿಶೇಷ ಪರಿಣತಿ ಹೊಂದಿರುವ ಅಥವಾ ದಕ್ಷ ತಂತ್ರಜ್ಞರ ಅಗತ್ಯತೆ ಬೇಕಾಗಿರುವುದಿಲ್ಲ. ಆದುದರಿಂದ ಈ ಕಿರು ಉದ್ದಿಮೆಗಳು ಸಾಮಾನ್ಯರಿಗೆ ನಿಲುಕುವಂಥ ಉದ್ಯೋಗವಕಾಶವಾಗಿ ಬೆಳೆಯುತ್ತದೆ. ಉದ್ಯೋಗ ಸೃಷ್ಟಿ, ಪ್ರಾದೇಶಿಕ ಅಸಮತೋಲನದ ನಿವಾರಣೆ, ಜೀವನ ಮಟ್ಟದ ಸುಧಾರಣೆ, ಆದಾಯದ ವೃದ್ಧಿ ಮುಂತಾದ ಪರಿಣಾಮಗಳ ಮೂಲಕ ಕಿರು ಉದ್ಯಮಗಳು ಸಮಾಜದ ನಿರ್ಮಾಣಕ್ಕೆ ದಾರಿಮಾಡಿಕೊಡುತ್ತದೆ. ಕಿರು ಉದ್ಯಮಗಳು ತುಂಬಾ ಚಿಕ್ಕದಾಗಿರುದರಿಂದ ವೈಯಕ್ತಿಕ ನೀರಿಕ್ಷಣೆ ಮತ್ತು ನಿಯಂತ್ರಣ ಸಾಧ್ಯವಾಗುತ್ತದೆ. ಎಲ್ಲಾ ಹಂತಗಳಲ್ಲಿ ಒಬ್ಬನೇ ವ್ಯಕ್ತಿ ಹತೋಟಿ ಸಾಧಿಸುವುದು ಸಾಧ್ಯವಿದೆ. ಇದು ಕಿರು ಉದ್ಯಮಗಳ ಅತ್ಯಂತ ಮುಖ್ಯವಾದ ಅನುಕೂಲವಾಗಿದೆ. ತದ್ವಿರುದ್ಧವಾಗಿ ದೊಡ್ಡ ಕೈಗಾರಿಕೆಗಳಲ್ಲಿ ವೈಯಕ್ತಿಕ ನಿರೀಕ್ಷಣೆ ಮತ್ತು ನಿಯಂತ್ರಣ ಸಾಧ್ಯವೇ ಆಗುವುದಿಲ್ಲ.

ಭಾರತದಲ್ಲಿ ಆರ್ಥಿಕತೆಯಲ್ಲಿ ಕಿರು ಉದ್ಯಮಗಳಿಗೆ ವಿಫುಲವಾದ ಅವಕಾಶಗಳಿವೆ. ನಿರುದ್ಯೋಗ ನಿರ್ಮೂಲನೆಯಲ್ಲಿ ವಿವಿಧ ತೆರವಾದ ಉದ್ಯಮಿಗಳು ಆರ್ಥಿಕಾಭಿವೃದ್ಧಿಗೆ ಕೊಡುಗೆಯನ್ನು ನೀಡಿವೆ. ಈ ಉದ್ಯಮಗಳಲ್ಲಿ ಅನೇಕ ವಿಧಗಳಿವೆ. ಅವುಗಳೆಂದರೆ ಬೃಹತ್ ಉದ್ಯಮಗಳು, ಸಣ್ಣ ಪ್ರಮಾಣದ ಉದ್ಯಮಗಳು, ಗೃಹ ಕೈಗಾರಿಕೆಗಳು ಮತ್ತು ಕಿರು ಉದ್ಯಮಗಳು. ಕಿರು ಉದ್ಯಮಗಳು ಹಳ್ಳಿಗಳ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವಲ್ಲಿ ಸಫಲವಾಗಿದೆ. ಕಿರು ಉದ್ಯಮಗಳು ವ್ಯಾಪಾರ, ಸಾಗಾಣಿಕೆ, ಸೇವೆಗಳನ್ನು ನೀಡುವ ಉದ್ಯಮಗಳು ಮತ್ತು ಕಾಮಾಗಾರಿ ವಲಯಗಳಲ್ಲಿ ವಿಫುಲವಾದ ಅವಕಾಶಗಳನ್ನು ಹೊಂದಿವೆ. ಕಿರು ಉದ್ಯಮಗಳು ತೀರ ಹಿಂದುಳಿದಿರುವ ಮತ್ತು ಅನಭಿವೃದ್ಧಿ ಹೊಂದಿರುವ ಆರ್ಥಿಕತೆಗೆ ಒಂದು ವರದಾನವಾಗಿದೆ. ಹಳ್ಳಿಗಳಲ್ಲಿಯ ಕಿರು ಉದ್ಯಮಗಳು ಉದ್ಯಮಶೀಲತೆಯನ್ನು ಮತ್ತು ಶಿಕ್ಷಿತ ನಿರುದ್ಯೋಗಿಗಳನ್ನು ಉದ್ಯೋಗಸ್ಥರನ್ನಾಗಿಸಿದೆ. ಈ ಕಿರುಉದ್ಯಮಗಳು ಇಂದು ಆದೆಷ್ಟೋ ಯುವಕ

ಯುವತಿಯರಿಗೆ ಸ್ವ ಉದ್ಯೋಗಾವಕಾಶವನ್ನು ಒದಗಿಸಿದೆ. ಭಾರತ ಸರ್ಕಾರದ೧೯೯೧ರ ನೂತನ ಕೈಗಾರಿಕಾ ನೀತಿಯು ಕಿರು ಉದ್ಯಮಗಳಿಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡಿವೆ. ಈ ಕೈಗಾರಿಕಾ ನೀತಿಯು ಪಟ್ಟಣ ಮತ್ತು ಹಳ್ಳಿಗಳನ್ನು ಕಿರು ಉದ್ಯಮಗಳನ್ನು ಆರಂಭಿಸುವಲ್ಲಿ ಸಾಕಷ್ಟು ಉತ್ತೇಜನವನ್ನು ನೀಡಿದೆ. ಹಳ್ಳಿಯಲ್ಲಿರುವ ಬಡ ಜನರಿಗೆ ಕಿರು ಉದ್ಯಮಗಳು ಸ್ವ ಉದ್ಯೋಗದ ಮುಖಾಂತರ ಆದಾಯದ ಮೂಲವಾಗಿದೆ. ಈ ಕಿರು ಉದ್ಯಮಗಳು ನಿರುದ್ಯೋಗವನ್ನು ತೊಡೆದು ಹಾಕುವಲ್ಲಿ ಸಾಕಷ್ಟು ಯಶಸ್ವೀಯಾಗಿವೆ.

ಕಿರು ಉದ್ಯಮಗಳಲ್ಲಿ ಇಟ್ಟಿಗೆ ಮಾಡುವ ಉದ್ಯಮ, ಹಾಲಿನ ಉತ್ಪನ್ನಗಳ ಉದ್ಯಮ, ಮಕ್ಕಳ ಆಟಿಕೆಗಳ ತಯಾರಿ ಉದ್ಯಮ, ಸೀಮೆ ಸುಣ್ಣ ತಯಾರಿಕಾ ಉದ್ಯಮ, ಅಣಬೆ ತಯಾರಿ ಘಟಕಗಳು, ನಾರಿನ ಉತ್ಪಾದನೆ, ಮೇಣದ ಬತ್ತಿ ತಯಾರಿಕಾ ಉದ್ಯಮ, ಅಗರಬತ್ತಿ ಉದ್ಯಮಗಳು ಬಹುತೇಕ ಪಾಲು ಪಡೆದಿದೆ. ಈ ಕಿರು ಉದ್ಯಮಗಳಲ್ಲಿ ಮಹಿಳೆಯ ಶೇಕಡಾವಾರು ಪಾಲು ಪುರುಷರಿಗಿಂತ ಹೆಚ್ಚಾಗಿದೆ. ಈ ಕಿರು ಉದ್ಯಮಗಳಿಗೆ ಕಿರು ಹಣಕಾಸಿನ ಮೂಲಕ ಕಿರುಸಾಲವನ್ನು ಕೂಡಾ ಸರಕಾರವು ಒದಗಿಸಿದೆ. ಈ ಕಿರುಸಾಲಗಳು ನಿರುದ್ಯೋಗಿಗಳಿಗೆ ತಮ್ಮದೇ ಸ್ವಂತ ಕಿರು ಉದ್ಯಮದ ಸ್ಥಾಪನೆಗೆ ಪ್ರೇರೇಪಣೆ ನೀಡಿದೆ. ಮಹಿಳಾ ಸ್ವಸಹಾಯ ಗುಂಪುಗಳು ಸರಕಾರದ ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ಈ ಕಿರು ಉದ್ಯಮಗಳನ್ನು ಪ್ರೋತ್ಸಾಹಿಸುತ್ತಿವೆ. ಈ ಕಿರು ಉದ್ಯಮಗಳು ಸ್ಥಳೀಯವಾಗಿ ಲಭ್ಯವಿರುವ ಕಚ್ಚಾ ವಸ್ತುಗಳನ್ನು ಉಪಯೋಗಿಸಿಕೊಂಡು ಉತ್ಪಾದನೆಯನ್ನು ಕೈಗೆತ್ತಿಕೊಂಡಿದೆ.

ಪ್ರಸ್ತುತ ಅನೇಕ ಸರ್ಕಾರೇತರ ಸಂಘ ಸಂಸ್ಥೆಗಳು, ಹಣಕಾಸು ಸಂಸ್ಥೆಗಳು ಮಹಿಳೆಯರಿಗೆ ಕಿರು ಉದ್ಯಮಕ್ಕಾಗಿ ಸಾಲವನ್ನು ನೀಡುತ್ತಿವೆ. ಈ ಮೂಲಕ ಅನೇಕ ಸ್ತ್ರೀಯರನ್ನು ಸ್ವ ಉದ್ಯಮ ಕೈಗೊಳ್ಳುವಲ್ಲಿ ಸಫಲರನ್ನಾಗಿಸಿದೆ. ಇದರ ಫಲವಾಗಿ ಅನೇಕ ಕಿರು ಉದ್ಯಮಿಗಳು ಸ್ವ ಉದ್ಯೋಗವನ್ನು ಕೈಗೊಂಡು ತಮ್ಮ ಜೀವನದಲ್ಲಿ ಸಫಲತೆಯನ್ನು ಸಾಧಿಸಿದ್ದಾರೆ.

೩.೫ ಕಿರು ಉದ್ಯಮಗಳ ಸಮಸ್ಯೆಗಳು

ಕಿರು ಉದ್ಯಮಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಅನೇಕ ಕಿರು ಉದ್ಯಮಗಳು ವಿವಿಧ ಕಾರಣಗಳಿಂದಾಗಿ ರೋಗಗ್ರಸ್ತಗೊಂಡಿವೆ. ಕಿರು ಉದ್ಯಮಗಳು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು ಕೆಳಗಿನಂತಿವೆ:

೧. ಕಿರು ಉದ್ಯಮಗಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಹಣಕಾಸಿನ ಕೊರತೆಯು ತುಂಬಾ ಗಂಭೀರ ಸಮಸ್ಯೆಯಾಗಿದೆ. ಈ ಉದ್ಯಮಗಳಿಗೆ ಹಣಕಾಸಿನ್ನು ಪೂರೈಸಲು ಸಾಕಷ್ಟು ಹಣಕಾಸಿನ

ಸಂಸ್ಥೆಗಳು ಸ್ಥಾಪನೆಯಾಗಿಲ್ಲ. ಜೊತೆಗೆ ಕಿರು ಉದ್ಯಮಗಳು ಸ್ವಂತ ಬಂಡವಾಳ ಕ್ರೋಡೀಕರಿಸುವಷ್ಟು ಶಕ್ತವಾಗಿರಲಿಲ್ಲ. ಇದರಿಂದಾಗಿ ಈ ಉದ್ಯಮಗಳು ಅನಿವಾರ್ಯವಾಗಿ ಲೇವಾದೇವಿಗಾರರಿಂದ ಹಾಗೂ ಬ್ಯಾಂಕೇತರ ಹಣಕಾಸಿನ ಸಂಸ್ಥೆಗಳಿಂದ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ಪಡೆಯಬೇಕಾದ ಪರಿಸ್ಥಿತಿ ಏರ್ಪಟ್ಟಿದೆ.

೨. ಕಿರು ಉದ್ಯಮಗಳಿಗೆ ಕಚ್ಚಾ ಸಾಮಾಗ್ರಿಗಳು ಸಮರ್ಪಕ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಕೆಲ ಉದ್ಯಮಗಳು ಸ್ಥಳೀಯ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿದ್ದು, ಅಲ್ಲಿ ವ್ಯಾಪಾರಸ್ಥರಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ. ಹೆಚ್ಚಿನ ಉದ್ಯಮಗಳು ತಮ್ಮ ಕಚ್ಚಾ ಸಾಮಾಗ್ರಿಗಳ ಪೂರೈಕೆಗಾಗಿ ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಮತ್ತು ವಿದೇಶಿ ಮೂಲಗಳನ್ನು ಅವಲಂಬಿಸಿವೆ.

೩.ಕಿರು ಉದ್ಯಮಗಳು ಎದುರಿಸುತ್ತಿರುವ ಇನ್ನೊಂದು ಪ್ರಮುಖ ಸಮಸ್ಯೆ ಎಂದರೆ ಯಂತ್ರೋಪಕರಣಗಳ ಸಮಸ್ಯೆಯಾಗಿದೆ. ಆಧುನಿಕ ಯಂತ್ರೋಪಕರಣಗಳು ತುಂಬಾ ದುಬಾರಿಯಾಗಿದ್ದು ಅವುಗಳನ್ನು ಪಡೆಯುವುದು ಕಿರು ಉದ್ಯಮಿಗಳಿಗೆ ಸಾಧ್ಯವಾಗುತ್ತಿಲ್ಲ.

೪. ಕಿರು ಉದ್ಯಮಗಳ ಅತ್ಯಂತ ಪ್ರಮುಖ ಸಮಸ್ಯೆ ಎಂದರೆ ಮಾರುಕಟ್ಟೆ ಸಮಸ್ಯೆಯಾಗಿದೆ. ಈ ಉದ್ಯಮಗಳು ಯಾವುದೇ ರೀತಿಯ ಸಂಘಟಿತ ಮಾರುಕಟ್ಟೆ ವ್ಯವಸ್ಥೆಯನ್ನು ಹೊಂದಿಲ್ಲ. ಮಾರುಕಟ್ಟೆಯ ಅಭಾವದಿಂದಾಗಿ ಅನೇಕ ಕಿರು ಉದ್ಯಮಗಳು ಮುಚ್ಚಿಹೋಗುತ್ತಿವೆ.

೫.ಕಿರು ಉದ್ಯಮಗಳು ಪುರಾತನವಾದ ಅತ್ಯುತ್ತಮವಾದ ತಂತ್ರಜ್ಞಾನವನ್ನು ಬಳಸುತ್ತಿವೆ. ಈ ಉದ್ಯಮಗಳು ಸಂಶೋಧನೆ ಮತ್ತು ತರಬೇತಿಯ ಸೌಲಭ್ಯಗಳನ್ನು ಹೊಂದಿಲ್ಲ. ಇದರ ಸರಕುಗಳ ಗುಣಮಟ್ಟ ಕಡಿಮೆ ಇದ್ದು ಉತ್ಪಾದನಾ ವೆಚ್ಚ ಹೆಚ್ಚಿದೆ.

೬. ಅನೇಕ ಕಿರು ಉದ್ಯಮಗಳಲ್ಲಿ ಆಡಳಿತ ನಿರ್ವಹಣೆ ದಕ್ಷವಾಗಿಲ್ಲ. ಇದರಿಂದಾಗಿ ಅವು ನಿರಂತರವಾಗಿ ನಷ್ಟಕ್ಕೊಳಗಾಗುತ್ತಿವೆ. ಯಾವುದೇ ಉದ್ಯಮದ ದಕ್ಷತೆಯನ್ನು ಹೆಚ್ಚಿಸಲು ತರಬೇತಿ ಅತ್ಯಗತ್ಯ ಅಂಶವಾಗಿದೆ. ಕಿರು ಉದ್ಯಮಗಳು ಈ ಅವಕಾಶದಿಂದ ವಂಚಿತವಾಗಿರುವುದು ಸ್ಪಷ್ಟವಾಗಿದೆ.

೭.ಕಿರು ಉದ್ಯಮಗಳಿಗೆ ವಿದ್ಯುತ್ ಪೂರೈಕೆ ಸಮರ್ಪಕವಾಗಿಲ್ಲ. ಆಗಾಗ್ಗೆ ಘೋಷಿಸಲಾಗುವ ವಿದ್ಯುತ್ ಕಡಿತಗಳು, ಕಿರು ಉದ್ಯಮದ ಉತ್ಪಾದನೆಯ ಮೇಲೆ ಹೊರೆಯಾಗಿ ಪರಿಣಮಿಸಿದೆ.

೮. ಕಿರು ಉದ್ಯಮಗಳು ಉತ್ಪಾದಿಸುವ ಅನೇಕ ಸರಕುಗಳನ್ನು ದೊಡ್ಡ ಕೈಗಾರಿಕೆಗಳು ಉತ್ಪಾದಿಸುತ್ತವೆ, ದೊಡ್ಡ ಕೈಗಾರಿಕೆಗಳು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳನ್ನು ಬಳಸಿ ಉತ್ತಮ ಗುಣಮಟ್ಟದ ಸರಕುಗಳನ್ನು ಉತ್ಪಾದಿಸುತ್ತವೆ. ಆದರೆ ಕಿರು ಉದ್ಯಮಗಳು ಹಳೆಯ ತಂತ್ರಜ್ಞಾನವನ್ನು ಬಳಸಿ ಕಡಿಮೆ ಗುಣಮಟ್ಟದ ಸರಕುಗಳನ್ನು ಉತ್ಪಾದಿಸುತ್ತಿವೆ. ಇದರಿಂದಾಗಿ ಈ ಉದ್ಯಮಗಳು ದೊಡ್ಡ ಕೈಗಾರಿಕೆಗಳು ಒಡ್ಡುವ ಪೈಪೋಟಿಯನ್ನು ಎದುರಿಸುವ ಶಕ್ತಿ ಹೊಂದಿಲ್ಲ.

೯. ಹೆಚ್ಚಿನ ಕಿರು ಉದ್ಯಮಗಳು ಗ್ರಾಮೀಣ ಮತ್ತು ಸಣ್ಣ ಪಟ್ಟಣ ಪ್ರದೇಶಗಳಲ್ಲಿ ಕೇಂದ್ರಿಕೃತಗೊಂಡಿವೆ. ಇವುಗಳು ಉತ್ಪಾದನೆ ಮಾಡುವ ಸರಕುಗಳನ್ನು ಮಾರುಕಟ್ಟೆ ಪ್ರದೇಶಕ್ಕೆ ಸಾಗಿಸಲು ಬೇಕಾದ ಉತ್ತಮ ಸಾರಿಗೆ ಸೌಲಭ್ಯಗಳಿಲ್ಲ, ಇದರಿಂದ ಸಾರಿಗೆ ವೆಚ್ಚ ಅಧಿಕವಾಗಿ ನಷ್ಟ ಅನುಭವಿಸುವಂಥಾಗಿದೆ.

೧೦. ಕಿರು ಉದ್ಯಮಗಳಲ್ಲಿ ತರಬೇತಿ ಮತ್ತು ಸಂಶೋಧನಾ ಸೌಲಭ್ಯಗಳು ಕೊರತೆಯಿಂದ ಕೂಡಿವೆ. ಇದರಿಂದಾಗಿ ಈ ಕೈಗಾರಿಕೆಗಳ ಆಧುನೀಕರಣ ಸಾಧ್ಯವಾಗುತ್ತಿಲ್ಲವಾದ ಕಾರಣ ಅವುಗಳ ಉತ್ಪಾದನಾ ವೆಚ್ಚ ಹೆಚ್ಚಿದೆ ಹಾಗೂ ಸರಕುಗಳ ಗುಣಮಟ್ಟ ಕಡಿಮೆ ಇದೆ.

೩.೬. ಕಿರು ಮಹಿಳಾ ಉದ್ದಿಮೆದಾರರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ

ಸಾಮಾಜಿಕ ಹಿನ್ನೆಲೆ

೧. ಸ್ವಾತಂತ್ರ್ಯವಿರಲಿಲ್ಲ

೨ ಅನಕ್ಷರತೆ

೩. ಕೌಟುಂಬಿಕ ಸಮಸ್ಯೆಗಳು

೪. ಸಾಮಾಜಿಕ ನೀತಿ – ನಿಯಮಗಳು

೫. ಜವಾಬ್ದಾರಿ ಮತ್ತು ಹೊಣೆಗಾರಿಕಾ ಸಾಮರ್ಥ್ಯ ಕಡಿಮೆಯಾಗಿರುವುದು.

೬. ಸಾಂಸ್ಕೃತಿಕ ಧರ್ಮಗಳ ಕಟ್ಟುಪಾಡುಗಳು

೭. ಪುರುಷತ್ವ ಸಮಾಜ

ಆರ್ಥಿಕ ಹಿನ್ನೆಲೆ

೧. ಹಣಕಾಸಿನ ತೊಂದರೆ

೨. ವೇತನ ಭಿನ್ನತೆಗಳು

೩. ಕೂಲಿಯೇತರ ಉದ್ಯೋಗ

೪. ಕೆಲಸದಲ್ಲಿ ಭಾಗವಹಿಸುವಿಕೆ

೩.೭. ಅಭಿವೃದ್ಧಿಗೆ ಮಹಿಳೆಯರ ಕೊಡುಗೆ

ಆರ್ಥಿಕಾಭಿವೃದ್ಧಿಯು ಮಹಿಳೆಯರ ಸ್ಥಿತಿಗತಿ ಮೇಲೆ ಗಾಢವಾದ ಪ್ರಭಾವ ಬೀರುವುದು. ಅಭಿವೃದ್ಧಿ ಕ್ರಿಯೆಯನ್ನು ವಿಸ್ತರಿಸುವುದು ಮತ್ತು ಅದರ ಆರ್ಥಿಕ ಮೌಲ್ಯವನ್ನು ಹೆಚ್ಚಿಸುವುದು. ಮಹಿಳೆಯರು ದೇಶವೊಂದರ ಆರ್ಥಿಕಾಭಿವೃದ್ಧಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಗಣನೀಯವಾದ ಕೊಡುಗೆ ಸಲ್ಲಿಸುವರು.

ಅಧುನಿಕ ಆರ್ಥಿಕಾಭಿವೃದ್ಧಿಯಲ್ಲಿ ಮಹಿಳೆಯರು ಎರಡು ರೀತಿಯಲ್ಲಿ ಪಾಲುಗೊಳ್ಳಬಹುದಾಗಿದೆ. ಅವುಗಳಾವುವೆಂದರೆ:

೧. ಉದ್ಯಮಶೀಲ ಸಂಘಟಕರಾಗಿ, ಸ್ವ ಉದ್ಯೋಗಿಗಳಾಗಿ ಮತ್ತು

೨. ಕೂಲಿ/ವೇತನ ಗಳಿಸುವ ಕಾರ್ಮಿಕರಾಗಿ

ಉನ್ನತ ಶಿಕ್ಷಣ, ವೃತ್ತಿ ತರಬೇತಿಗೆ ಮಹಿಳೆಯ ಪ್ರವೇಶವನ್ನು ಹೆಚ್ಚಿಸುವುದು, ಉತ್ತಮ ಪಡೆಸುವುದು ಅತ್ಯಾವಶ್ಯ. ಮಹಿಳೆಯರ ಮಾನವ ಸಂಪನ್ಮೂಲದ ವ್ಯಾಪ್ತಿ ಮತ್ತು ಗುಣದರ್ಜೆ ಉತ್ತಮಪಡಿಸುವುದರಿಂದ ಮಹಿಳೆಯರ ಸ್ವ ಉದ್ಯೋಗ ಮತ್ತು ಕೂಲಿ ಉದ್ಯೋಗ ಅವಕಾಶಗಳು ವಿಸ್ತರಿಸಲ್ಪಡುವುದು. ಹೀಗೆ, ಮಹಿಳಾ ಶಿಕ್ಷಣಕ್ಕೂ ಮತ್ತು ಆಕೆ ಆರ್ಥಿಕಾಭಿವೃದ್ಧಿ ಕ್ರಿಯೆಯಲ್ಲಿ ಪಾಲುಗೊಳ್ಳುವುದಕ್ಕೂ ನೇರವಾದ ಸಂಬಂಧವಿದೆ.

ತಂತ್ರಜ್ಞಾನ ಅವಿಷ್ಕಾರ ಮತ್ತು ಸಂರಚನೆಯಲ್ಲಾಗುವ ಬದಲಾವಣೆಗಳು ಮಹಿಳೆಯ ಕೂಲಿ ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವುದು ಅಥವಾ ಕಡಿಮೆಗೊಳಿಸಬಹುದು. ಮಾಹಿತಿ ತಂತ್ರಜ್ಞಾನ, ದೂರಸಂಪರ್ಕ ಕ್ಷೇತ್ರ, ವಸ್ತ್ರ ವಿನ್ಯಾಸ, ಮನರಂಜನೆ ಉದ್ಯಮ, ಅದ್ಯಾಪನ, ವೈದ್ಯಕೀಯ ಸೇವೆ ಕ್ಷೇತ್ರಗಳು ಮಹಿಳೆಗೆ ಉದ್ಯೋಗವಕಾಶವನ್ನು ವಿಫುಲವಾಗಿ ಸೃಷ್ಟಿಸಿವೆ.

ಮಹಿಳಾವಾದವು ಮುಂದುವರಿದ ದೇಶಗಳಲ್ಲಿ ಉದ್ಯೋಗಗಳು ಲಿಂಗ ತಟಸ್ಥ ಆಗಿರಬೇಕೆಂದು ಯಶಸ್ವಿಯಾಗಿ ಪ್ರತಿಪಾದಿಸಿದೆ. ಹೀಗಾಗಿ ಕೆಲವು ಮಹತ್ವದ ಕೈಗಾರಿಕೆಗಳ ಉತ್ಪಾದನೆ ಮತ್ತು ಮಾರಾಟ ವಿಭಾಗಗಳಲ್ಲಿ ಮಹಿಳೆಯರಿಗೆ ಉದ್ಯೋಗವಕಾಶಗಳು ದೊರಕುತ್ತಿವೆ. ಇದೆ ಬಗೆಯ ಬದಲಾವಣೆಯನ್ನು ಭಾರತವೂ ಸೇರಿದಂತೆ ಅನೇಕ ವಿಕಾಸಶೀಲ ದೇಶಗಳಲ್ಲಿ ಕಾಣಬಹುದು. ಮಹಿಳೆಯರು ತಮ್ಮ

ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಹೆಚ್ಚು ಬಂಡವಾಳ, ಸಮಯ ಮತ್ತು ಪ್ರಯತ್ನಗಳನ್ನು ತೊಡಗಿಸಬೇಕು.

ಭಾರತದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷವಾಗಿ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಮಹಿಳಾ ಪಾಳುಗೊಲ್ಲುವಿಕೆ ಕ್ರಮೇಣ ಹೆಚ್ಚುತ್ತಿದೆ. ಇದು ಭಾರತೀಯ ಮಹಿಳೆಯ ಬದಲಾಗುತ್ತಿರುವ ವೃತ್ತಿ ಬಲವನ್ನು ಸೂಚಿಸುತ್ತಿದೆ. ಇಂದು ಭಾರತ ಶ್ರೀಮಂತ ಮತ್ತು ಮಧ್ಯಮ ವರ್ಗಗಳ ಮಹಿಳೆಯ ಐಚ್ಚಿಕ ಜೀವನ ದೃಷ್ಟಿಕೋನವೇ ಬದಲಾಗುತ್ತಿದೆ. ಅಧಿಕ ಸಂಖ್ಯೆಯ ಮಹಿಳೆಯರು ವೃತ್ತಿಪರ ಶಿಕ್ಷಣ ಪಡೆದು ವೃತ್ತಿಪರರಾಗುತ್ತಿದಾರೆ. ಹೀಗೆ ಭಾರತದ ಆರ್ಥಿಕಾಭಿವೃದ್ಧಿ ಕ್ರಿಯೆಯಲ್ಲಿ ಭವಿಷ್ಯದಲ್ಲಿ ಮಹಿಳೆಯರ ಮಹತ್ವದ ಪಾತ್ರ ವಹಿಸುವುದು ನಿಶ್ಚಿತವಿದೆ.

ಮಹಿಳೆಯರು ಸಾಮಾನ್ಯವಾಗಿ ಪುರುಷರಿಗಿಂತ ಹೆಚ್ಚು ದಕ್ಷರು ಮತ್ತು ಕಡಿಮೆ ಭ್ರಷ್ಟರು ಮತ್ತು ಅವರ ಕೆಲಸದಲ್ಲಿ ಆಳವಾಗಿ ಮಗ್ನರಾಗುವ ಸ್ವಭಾವ ಹೊಂದಿರುವುದರಿಂದ ಸಾಮಾನ್ಯ ಆಡಳಿತದಲ್ಲಿ ಹೆಚ್ಚೆಚ್ಚು ಮಹಿಳೆಯರು ಭಾಗಿಯಾದರೆ ದಕ್ಷತೆ ವೃದ್ಧಿಯಾಗುತ್ತದೆ. ಈ ಆಧುನಿಕ ಯುಗದಲ್ಲಿ ಭಾರತದ ನಾರಿ, ಸಕ್ರಿಯ ರಾಜಕಾರಣದಲ್ಲಿ ತನ್ನದಾದ ಸಮಪಾಲನ್ನು ಪಡೆಯುವ ಪ್ರಯತ್ನದಲ್ಲಿ ತೊಡಗಿದ್ದಾಳೆ. ತನಗಿಂತ ಹೆಣ್ಣು ಎಲ್ಲೂ ಕಡಿಮೆಯಾಗಿಲ್ಲ ನಾವಿಬ್ಬರೂ ಸರಿಸಮಾನರು ಎಂಬ ಭಾವನೆ ಪುರುಷರಲ್ಲಿ ಮೂಡಿದರೆ ಈ ದೇಶದ ಬಹುಪಾಲು ಸಮಸ್ಯೆಗಳು ಪರಿಹಾರವಾದೀತು.

ಮಹಿಳೆಯರು ನೀತಿ ಮತ್ತು ನಿರ್ಧಾರ ಮಾಡುವ ಪ್ರಕ್ರಿಯೆಯಲ್ಲಿ ಚೆನ್ನಾಗಿ ಭಾಗವಹಿಸಬಲ್ಲರು. ನಮ್ಮ ರಾಜ್ಯವು ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿಗಳು, ಪುರಸಭೆಗಳು, ನಗರ ಸಭೆಗಳು ಮತ್ತು ಜಿಲ್ಲಾ ಸಭೆಗಳಲ್ಲಿ ಮಾತ್ರವಲ್ಲದೆ ಸಹಕಾರಿ ಸಂಸ್ಥೆಗಳು, ಹಾಲಿನ ಸಹಕಾರಿ ಸಂಘಗಳು, ಸ್ವಸಹಾಯ ಗುಂಪುಗಳು ಇತ್ಯಾದಿಗಳಲ್ಲಿ ಪ್ರಾತಿನಿಧ್ಯ ನೀಡಿ ಮಹಿಳೆಯರನ್ನು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದೆ. ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರು ತಮ್ಮನ್ನು ತಾವು ತೊಡಗಿಸಿಕೊಂಡು ರಾಜ್ಯದ ಆರ್ಥಿಕ ಬೆಳವಣಿಗೆಯಲ್ಲಿ ತಮ್ಮ ಕೊಡುಗೆಯನ್ನು ನೀಡುತ್ತಿದ್ದಾರೆ.

ಬಹುತೇಕ ಎಲ್ಲಾ ಆರ್ಥಿಕತೆಗಳಲ್ಲಿ ಸೇವಾ ವಲಯವು ಅತ್ಯಂತ ದೊಡ್ಡ ಆರ್ಥಿಕ ವಲಯವಾಗಿದೆ. ಈ ವಲಯದ ಅಭಿವೃದ್ಧಿಯಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ. ಆರೋಗ್ಯ, ಶಿಕ್ಷಣ, ವ್ಯಾಪಾರ, ಬ್ಯಾಂಕಿಂಗ್, ವಿಮೆ, ಪ್ರವಾಸೋದ್ಯಮ, ದೂರಸಂಪರ್ಕ, ಸಾರಿಗೆ, ಸಂಶೋಧನೆ ಮತ್ತು ಅಭಿವೃದ್ಧಿ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ನಿರತರಾಗಿದ್ದಾರೆ.

೩.೮. ಮಹಿಳಾ ಉದ್ದಿಮೆದಾರರಿಗೆ ನೀಡುವ ಸವಲತ್ತುಗಳು

ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆ ಮತ್ತು ಅವರ ಸ್ಥಾನಮಾನಗಳ ಸುಧಾರಣೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

೧. ಉದ್ಯೋಗ ತರಬೇತಿ

ಮುಖ್ಯವಾಗಿ ಗ್ರಾಮೀಣ ಪ್ರದೇಶಗಳ ಮಹಿಳೆಯರು ವಿವಿಧ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಅವರಿಗೆ ತರಬೇತಿಯನ್ನು ಒದಗಿಸಲಾಗುತ್ತಿದೆ. ಮಹಿಳಾ ಸಶಕ್ತಿಕರಣದಲ್ಲಿ ಈ ಕಾರ್ಯಕ್ರಮವು ಗಮನಾರ್ಹವಾದ ಯಶಸ್ಸನ್ನು ಸಾಧಿಸಿದೆ.

೨. ಗ್ರಾಮೀಣ ಪ್ರದೇಶಗಳ ಸ್ತ್ರೀಯರ ಅಭಿವೃದ್ಧಿ ಕಾರ್ಯಕ್ರಮ

ಈ ಕಾರ್ಯಕ್ರಮವು ೧೯೮೨ ಸೆಪ್ಟೆಂಬರ್ ನಲ್ಲಿ ೫೦ ಕ್ಷೇತ್ರಗಳ ಆಚರಣೆಗೆ ತರಲಾಯಿತು. ಆದಾಯವನ್ನು ಹೆಚ್ಚಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು ಮತ್ತು ಆದಾಯ ಸೃಷ್ಟಿಸುವಂತಹ ಉದ್ಯಮಗಳಲ್ಲಿ ನಿರತರಾಗಲು ಪೂರಕ ಸೇವೆಗಳನ್ನು ಒದಗಿಸುವುದು ಈ ಕಾರ್ಯಕ್ರಮದ ನ್ಯಾಯವಾಗಿದೆ. ಈ ಉದ್ದೇಶದಿಂದ ಮಹಿಳೆಯರಿಗೆ ವೈಯಕ್ತಿಕ ಅಥವಾ ಒಂದು ವ್ಯವಸ್ಥಿತ ಗುಂಪಿನ ನೆರವನ್ನು ನೀಡಲಾಯಿತು.

೩. ಮೂಲ ಶಿಕ್ಷಣ

ಹೆಣ್ಣು ಮಕ್ಕಳ ಮೂಲಶಿಕ್ಷಣ ಮತ್ತು ಉನ್ನತ ಶಿಕ್ಷಣಕ್ಕೆ ಪ್ರೇರೇಪಿಸಲು ಕೇಂದ್ರ ಸರ್ಕಾರದ ಹೊಣೆಗಾರಿಕೆಯಲ್ಲಿ ಒಂದು ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯನ್ವಯ ಪ್ರತ್ಯೇಕವಾಗಿ ಹೆಣ್ಣು ಮಕ್ಕಳಿಗೆ ಅನೌಪಚಾರಿಕ ವಿದ್ಯಾಕೇಂದ್ರಗಳನ್ನು ತೆರೆಯಲು ಶಿಕ್ಷಣದಲ್ಲಿ ಹಿಂದುಳಿದ ರಾಜ್ಯಗಳಿಗೆ ಹಣಕಾಸಿನ ನೆರವನ್ನು ಒದಗಿಸಲಾಗುತ್ತಿದೆ.

೪. ಮಹಿಳಾ ಸಹಕಾರ ಸಂಘಗಳ ರಚನೆ

ಪ್ರತ್ಯೇಕವಾಗಿ ಮಹಿಳೆಯರಿಗಾಗಿ ಸಹಕಾರ ಸಂಘಗಳನ್ನು ಸ್ಥಾಪಿಸುವ ಕಾರ್ಯಕ್ರಮವನ್ನು ಅನುಸರಿಸಲಾಗಿದೆ. ಆಂದರೆ ಈ ಸಹಕಾರ ಸಂಘಗಳಲ್ಲಿ ಮಹಿಳೆಯರು ಮಾತ್ರ ಸದಸ್ಯರಾಗಿರುತ್ತಾರೆ. ಪ್ರಬಲವಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಬಹಳ ಸಂಖ್ಯೆಯಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗಾಗಿಯೇ ಸ್ಥಾಪನೆಯಾಗುತ್ತಿರುವುದನ್ನು ಗಮನಿಸಬಹುದು. ಮಹಿಳೆಯರಿಗೆ

ಸಾಕಷ್ಟು ಆದಾಯದ ಮೂಲಕ ಆರ್ಥಿಕ ಸಬಲತೆಯನ್ನು ತಂದುಕೊಡಲು ಈ ಸಂಘಗಳು ಸಹಕಾರಿಯಾಗಿದೆ.

೫. ಸಮಾನ ಪ್ರತಿ ಫಲ ಕಾಯಿದೆ

ಮಹಿಳೆಯರ ಉದ್ಯೋಗಕ್ಕೆ ಸಂಬಂಧಿಸಿದ ವಿಷಯಗಳ ಅನುಷ್ಠಾನವನ್ನು ಉಸ್ತುವಾರಿ ನೋಡಿಕೊಳ್ಳಲು ೧೯೭೬ ರಲ್ಲಿ ರಚಿಸಲಾದ ವಿಶೇಷ ವಿಭಾಗವು ಇನ್ನು ಮುಂದುವರಿಯುತ್ತಿದೆ. ಒಂದೇ ವಿಧವಾದ ಕೆಲಸಗಳಿಗೆ ಪುರುಷನಂತೆ ಸ್ತ್ರೀಯರಿಗೆ ಸಮಾನ ವೇತನಗಳನ್ನು ಒದಗಿಸಲು ಜಾರಿಯಲ್ಲಿರುವ ಸಮಾನ ಪ್ರತಿ ಫಲ ಕಾಯಿದೆಯ ಅನುಷ್ಠಾನ ಇದರ ಕಾರ್ಯವಾಗಿದೆ.

೬. ಮಹಿಳಾ ಸ್ವರ್ಣಸಿದ್ಧ ಯೋಜನೆ

ಈ ಕಾರ್ಯಕ್ರಮವು ಮಹಿಳೆಯರ ಸಾಮಾಜಿಕ - ಆರ್ಥಿಕ ಸಶಕ್ತಿಕರಣವನ್ನು ಗುರಿಯಾಗಿ ಹೊಂದಿದೆ. ಇದನ್ನು ೧೧೬ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೬೫೦ ಕ್ಷೇತ್ರಗಳಲ್ಲಿ ಪ್ರಾರಂಭಿಸಲಾಗಿದೆ.

೭. ಉದ್ಯೋಗಶೀಲ ಮಹಿಳೆಯರಿಗೆ ಸಾಲದ ಕಾರ್ಯಕ್ರಮ

ಈ ಕಾರ್ಯಕ್ರಮದಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್ ಗಳು ಅತೀ ಕಡಿಮೆ ಬಡ್ಡಿ ದರದಲ್ಲಿ ಅಂದರೆ ಶೇಕಡಾ೫ ರ ದರದಲ್ಲಿ ಗರಿಷ್ಠ ಮೊತ್ತದ ಸಾಲವನ್ನು ಒದಗಿಸುತ್ತದೆ.

೮. ತೆರಿಗೆ ವಿನಾಯಿತಿ

ಮಹಿಳಾ ಉದ್ಯಮಶೀಲರ ಬೆಳವಣೆಗೆಗಾಗಿ ಸರ್ಕಾರ ತನ್ನ ತೆರಿಗೆಯಲ್ಲಿ ಪುರುಷರಿಗಿಂತ ಹೆಚ್ಚಿನ ವಿನಾಯಿತಿಗಳನ್ನು ನೀಡುವುದರ ಮುಖಾಂತರ ಸಹಕಾರಿಯಾಗಿದೆ.

೩.೯ ಕಿರು ಉದ್ಯಮ ಆಯ್ಕೆ ಮಾಡಿಕೊಂಡಿರುವುದಕ್ಕೆ ಕಾರಣಗಳು

ಮಂಗಳೂರು ತಾಲೂಕಿನಲ್ಲಿ ನಡೆಸಿದ ಅಧ್ಯಯನದ ಪ್ರಕಾರ ಮಹಿಳಾ ಕಿರು ಉದ್ಯಮಿಗಳು ಈ ಉದ್ಯಮವನ್ನು ಆಯ್ಕೆ ಮಾಡಲು ಈ ಕೆಳಗಿನ ಕಾರಣಗಳನ್ನು ಕೊಟ್ಟಿದ್ದಾರೆ. ಅವುಗಳೆಂದರೆ:

೧. ಬಂಡವಾಳದ ಪ್ರಮಾಣ ಈ ಉದ್ಯಮಗಳಲ್ಲಿ ತುಂಬಾ ಕಡಿಮೆಯಾಗಿರುತ್ತದೆ

೨. ಕಿರು ಉದ್ಯಮಗಳ ಸ್ಥಾಪನೆಗೆ ಸಾಮಾನ್ಯ ಕಾರ್ಮಿಕರು ಸಾಕು.ವಿಶೇಷ ಪರಿಣತಿ ಹೊಂದಿರುವ ಅಥವಾ ದಕ್ಷ ತಂತ್ರಜ್ಞರ ಅಗತ್ಯತೆ ಬೇಕಾಗಿರುವುದಿಲ್ಲ.

೩. ಕಿರು ಉದ್ದಿಮೆಗಳು ಸಾಮಾನ್ಯರಿಗೆ ನಿಲುಕುವಂಥ ಉದ್ಯೋಗವಕಾಶವಾಗಿ ಬೆಳೆಯುತ್ತಿವೆ.

೪. ಕಿರು ಉದ್ಯಮಗಳು ತುಂಬಾ ಚಿಕ್ಕದಾಗಿರುದರಿಂದ ವೈಯಕ್ತಿಕ ನೀರಿಕ್ಷಣೆ ಮತ್ತು ನಿಯಂತ್ರಣ ಸಾಧ್ಯವಾಗುತ್ತದೆ.

೫. ಕಿರು ಉದ್ಯಮಗಳು ಸ್ವ ಉದ್ಯೋಗದ ಮುಖಾಂತರ ಆದಾಯದ ಮೂಲವಾಗಿದೆ

೬. ಎಲ್ಲಾ ಹಂತಗಳಲ್ಲಿ ಒಬ್ಬನೇ ವ್ಯಕ್ತಿ ಹತೋಟಿ ಸಾಧಿಸುವುದು ಸಾಧ್ಯವಿದೆ

೭. ಅನೇಕ ಕಿರು ಉದ್ಯಮಿಗಳು ಸ್ವ ಉದ್ಯೋಗವನ್ನು ಕೈಗೊಂಡು ತಮ್ಮ ಜೀವನದಲ್ಲಿ ಸಫಲತೆಯನ್ನು ಸಾಧಿಸಿದ್ದಾರೆ.

೮. ಕಿರು ಉದ್ಯಮ ಆಯ್ಕೆ ಮಾಡಲು ಮುಖ್ಯ ಕಾರಣ ಕುಟುಂಬದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದಿರುವುದು.

ಈ ಅಧ್ಯಾಯದಲ್ಲಿ ಕಿರು ಮಹಿಳಾ ಉದ್ದಿಮೆದಾರರು ಯಾವೆಲ್ಲ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಮತ್ತು ಅದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ತಿಳಿದಿದ್ದೇವೆ. ನಾಲ್ಕನೇ ಅಧ್ಯಾಯದಲ್ಲಿ ಮಂಗಳೂರು ತಾಲೂಕಿನಲ್ಲಿರುವ ಕಿರು ಮಹಿಳಾ ಉದ್ಯಮಿಗಳಿಂದ ಪಡೆದ ಮಾಹಿತಿಯ ವಿಶ್ಲೇಷಣೆ ಮಾಡಲಿದ್ದೇವೆ.

೩.೧೦. ಕೊನೆಟಿಪ್ಪಣಿ

೧. ಹೇಮಲತಾ ಎಚ್.ಎಂ, ಮಹಿಳಾ ಅಧ್ಯಯನ- ೩, ಮಹಿಳೆ ಮತ್ತು ದುಡಿಮೆ, ೨೦೦೯ ಪುಟ ೫೭.

೨. ದಿನೇಶ್ ಪಿ.ಟಿ ಹಾಗು ಎನ್ ಕೆ ಗೌಡ, ಮಹಿಳಾ ಉದ್ಯಮಶೀಲತೆ, ೨೦೦೭, ಪುಟ ೨೪೧

೩. ಐ. ಬಿ.ಐ.ಡಿ.

೪. ದಿನೇಶ್ ಪಿ.ಟಿ ಹಾಗು ಎನ್ ಕೆ ಗೌಡ, ಮಹಿಳಾ ಉದ್ಯಮಶೀಲತೆ, ೨೦೦೭, ಪುಟ ೨೪೪

೫. ಐ. ಬಿ.ಐ.ಡಿ. ಪುಟ ೨೪೨

ಅಧ್ಯಾಯ ೪

ಮಹಿಳಾ ಸಬಲೀಕರಣದಲ್ಲಿ ಕಿರು ಮಹಿಳಾ ಉದ್ಯಮಿಗಳ ಪಾತ್ರ- ಮಂಗಳೂರು ತಾಲೂಕಿನ ಕ್ಷೇತ್ರಾಧಾರಿತ ಮಾಹಿತಿ ವಿಶ್ಲೇಷಣೆ

೪.೧. ಪೀಠಿಕೆ

೪.೨. ಪ್ರಶ್ನಾವಳಿಗೆ ಉತ್ತರಿಸಿದವರಿಗೆ ಸಂಬಂಧಿಸಿದಂತೆ ಸಾಮಾನ್ಯ ಮಾಹಿತಿಗಳು ಮತ್ತು ಅದರ ವಿಶ್ಲೇಷಣೆಗಳು


ಮಂಗಳೂರು ತಾಲೂಕಿನ ಕ್ಷೇತ್ರಾಧಾರಿತ ಮಾಹಿತಿ ವಿಶ್ಲೇಷಣೆ

ಈ ಅಧ್ಯಾಯದಲ್ಲಿ ಸಂಶೋಧನಾ ಅಧ್ಯಯನದಂತೆ ಮಂಗಳೂರು ತಾಲೂಕಿನಲ್ಲಿರುವ ಕೆಲವು ಮಹಿಳಾ ಕಿರು ಉದ್ಯಮಿಗಳ ಬಗ್ಗೆ ವಿಶ್ಲೇಷಣೆಯನ್ನು ಮಾಡಲಾಗಿದೆ. ಮುಖ್ಯವಾಗಿ ಮಹಿಳಾ ಕಿರು ಉದ್ಯಮಿಗಳ ಸ್ಥಿತಿಗತಿಗಳು, ಉದ್ಯಮ ಕೈಗೊಳ್ಳಲು ಕಾರಣಗಳು, ಸಬಲೀಕರಣದಲ್ಲಿ ಉದ್ಯಮಶೀಲತೆಯ ಪಾತ್ರ, ಆದಾಯ ಗಳಿಕೆ, ವೆಚ್ಚದ ಸ್ವರೂಪ, ಬಂಡವಾಳ ಮತ್ತು ಮೂಲ ಸೌಲಭ್ಯಗಳ ರಚನೆಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ಇದರ ಜೊತೆಗೆ ಕಿರು ಉದ್ಯಮಗಳ ಸಮಸ್ಯೆಗಳ ಕುರಿತಾದ ಅಭಿಪ್ರಾಯವನ್ನು ಕೂಡ ಸಂಗ್ರಹಿಸಲಾಗಿದೆ.


ಈ ಅಧ್ಯಯನದಲ್ಲಿ ಮಾಹಿತಿಯನ್ನು ಪ್ರಶ್ನಾವಳಿ, ಸಂದರ್ಶನ ಮತ್ತು ಅವಲೋಕನದ ಮೂಲಕ ವಿಶ್ಲೇಷಿಸಲಾಗಿದೆ. ಈ ಅಧ್ಯಾಯದಲ್ಲಿ ರೇಖಾ ಚಿತ್ರಗಳನ್ನು ಮತ್ತು ಕೋಷ್ಟಕಗಳನ್ನು ಅಳವಡಿಸಲಾಗಿದೆ. ಅಧ್ಯಯನದಲ್ಲಿ ಮಂಗಳೂರು ತಾಲೂಕಿನ ಕೆಲವು ಆಯ್ದ ಕಿರು ಉದ್ಯಮ ನಡೆಸುತ್ತಿರುವ ೧೦೦ ಮಂದಿ ಮಹಿಳೆಯರಿಂದ ಮಾಹಿತಿಯನ್ನು ಪಡೆಯಲಾಗಿದೆ.

ಕೋಷ್ಟಕ ೪.೧ ಮಹಿಳಾ ಕಿರು ಉದ್ಯಮಿಗಳ ಶಿಕ್ಷಣ

ಶಿಕ್ಷಣ	ಮಾಹಿತಿದಾರರ ಸಂಖ್ಯೆ	ಶೇಕಡಾ
ಪ್ರಾಥಮಿಕ	೧೦	೧೦
ಪ್ರೌಢ	೨೦	೨೦
ಪದವಿಪೂರ್ವ	೨೦	೨೦
ಪದವಿ	೫೦	೫೦
ಒಟ್ಟು	೧೦೦	೧೦೦




ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೧೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಪ್ರಾಥಮಿಕ ಶಿಕ್ಷಣವನ್ನು, ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಪ್ರೌಢ ಶಿಕ್ಷಣವನ್ನು, ಶೇಕಡಾ ೫೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಪದವಿಪೂರ್ವ ಶಿಕ್ಷಣವನ್ನು, ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಪದವಿ ಶಿಕ್ಷಣವನ್ನು ಪಡೆದಿದ್ದಾರೆ. ಇದರಿಂದ ತಿಳಿಯುದೇನೆಂದರೆ ಅತೀ ಹೆಚ್ಚು ಮಹಿಳಾ ಕಿರು ಉದ್ಯಮಿಗಳು ಪದವಿಪೂರ್ವ ಶಿಕ್ಷಣವನ್ನು ಪಡೆದಿದ್ದಾರೆ. ಕಾರಣವೇನೆಂದರೆ ಕೆಲವು ಕೌಟುಂಬಿಕ ಕಾರಣಗಳಿಂದ ಅವರು ವಿದ್ಯಾಭ್ಯಾಸ ಮುಂದುವರಿಸಲು ಆಗಲಿಲ್ಲ.



ಕೋಷ್ಟಕ ೪.೨ ಮಹಿಳಾ ಕಿರು ಉದ್ಯಮಿಗಳ ತೊಡಗಿಸಿಕೊಂಡಿರುವ ಚಟುವಟಿಕೆ


ಚಟುವಟಿಕೆ	ಮಾಹಿತಿದಾರರ ಸಂಖ್ಯೆ	ಶೇಕಡಾ
ಹೋಟೆಲ್ ಉದ್ಯಮ (ಸಣ್ಣ)	೩೦	೩೦
ಟೈಲರ್ ಅಂಗಡಿ (ಸಣ್ಣ)	೩೩	೩೩
ಡ್ರೆಸ್ ಅಂಗಡಿ (ಸಣ್ಣ)	೧೭	೧೭
ಉಪ್ಪಿನಕಾಯಿ ತಯಾರಿಕೆ	೨೦	೨೦
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೩೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಹೋಟೆಲ್ ಉದ್ಯಮವನ್ನು, ಶೇಕಡಾ ೩೩ ರಷ್ಟು ಮಹಿಳಾ ಕಿರು ಉದ್ಯಮಿಗಳು ಟೈಲರ್ ಅಂಗಡಿಯನ್ನು, ಶೇಕಡಾ ೧೭ ರಷ್ಟು ಮಹಿಳಾ ಕಿರು ಉದ್ಯಮಿಗಳು ಡ್ರೆಸ್ ಅಂಗಡಿಯನ್ನು, ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಉಪ್ಪಿನಕಾಯಿ ತಯಾರಿಕೆ ಉದ್ಯಮವನ್ನು ನಡೆಸುತ್ತಿದ್ದಾರೆ. ಇದರಿಂದ ತಿಳಿಯುದೇನೆಂದರೆ ಅತೀ ಹೆಚ್ಚು ಮಹಿಳಾ ಕಿರು ಉದ್ಯಮಿಗಳು ಟೈಲರ್ ಅಂಗಡಿಯನ್ನು ನಡೆಸುತ್ತಿದ್ದಾರೆ. ಕಾರಣವೇನೆಂದರೆ ಇತರ ಕಿರು ಉದ್ಯಮಗಳಿಗೆ ಹೋಲಿಸಿದರೆ ಟೈಲರಿಂಗ್ ಉದ್ಯಮವು ಕಷ್ಟಕರವಾದರೂ ಅದನ್ನು ಇಷ್ಟಪಟ್ಟು ಕಲಿತರೆ ಮಹಿಳೆಯರಿಗೆ ಕಲಿಯಲು ಸುಲಭವಾಗಿವೆ.

ಕೋಷ್ಟಕ ೪.೩ ಮಹಿಳಾ ಕಿರು ಉದ್ಯಮಿಗಳ ವೃತ್ತಿಗೆ ಕುಟುಂಬದವರ ಸಹಕಾರ


ಸಹಕಾರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಪ್ರೋತ್ಸಾಹದಾಯಕ	೮೩	೮೩
ತೃಪ್ತಿಕರ	೧೭	೧೭
ಸಹಕಾರವೇ ಇಲ್ಲ	೦	೦
ಅತೃಪ್ತಿಕರ	೦	೦
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೮೩ ರಷ್ಟು ಮಹಿಳಾ ಕಿರು ಉದ್ಯಮಿಗಳ ವೃತ್ತಿಗೆ ಕುಟುಂಬದವರ ಸಹಕಾರ ಪ್ರೋತ್ಸಾಹದಾಯಕವಾಗಿದೆ. ಶೇಕಡಾ ೧೭ ರಷ್ಟು ಮಹಿಳಾ ಕಿರು ಉದ್ಯಮಿಗಳ ವೃತ್ತಿಗೆ ಕುಟುಂಬದವರ ಸಹಕಾರ ತೃಪ್ತಿಕರವಾಗಿದೆ. ಸಹಕಾರವೇ ಇಲ್ಲದಿರುವುದು ಅಥವಾ ಅತೃಪ್ತಿಕರವಾಗಿರುವವರ ಸಂಖ್ಯೆ ಶೂನ್ಯವಾಗಿದೆ. ಇದರಿಂದ ತಿಳಿಯುವುದೇನೆಂದರೆ ಅತೀ ಹೆಚ್ಚು ಮಹಿಳಾ ಉದ್ಯಮಿಗಳ ವೃತ್ತಿಗೆ ಕುಟುಂಬದವರ ಸಹಕಾರ ಪ್ರೋತ್ಸಾಹದಾಯಕವಾಗಿದೆ. ಏಕೆಂದರೆ ಕುಟುಂಬದ ಪ್ರತಿಯೊಬ್ಬಸದಸ್ಯರು ಆರ್ಥಿಕತೆಗಾಗಿ ಈ ಕಿರು ಉದ್ಯಮವನ್ನು ಅವಲಂಬಿಸಿದ್ದಾರೆ.

ಕೋಷ್ಟಕ ೪.೪ ಉದ್ಯಮಕ್ಕೆ ಹೂಡಿರುವ ಒಟ್ಟು ಬಂಡವಾಳ

ಬಂಡವಾಳ	ಮಾಹಿತಿದಾರರ ಸಂಖ್ಯೆ	ಶೇಕಡಾ
೧೦,೦೦೦-೨೦,೦೦೦	೫೦	೫೦
೨೦,೦೦೦-೩೦,೦೦೦	೧೦	೧೦
೩೦,೦೦೦-೪೦,೦೦೦	೧೦	೧೦
೪೦,೦೦೦ ಕ್ಕಿಂತ ಹೆಚ್ಚು	೩೦	೩೦
ಒಟ್ಟು	೧೦೦	೧೦೦




ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೫೦ ರಷ್ಟು ಮಹಿಳಾ ಕಿರು ಉದ್ಯಮಿಗಳು ೧೦,೦೦೦-೨೦,೦೦೦ ಬಂಡವಾಳ ಹೂಡಿಕೆ ಮಾಡಿದ್ದರೆ, ಶೇಕಡಾ ೧೦ ರಷ್ಟು ಮಹಿಳಾ ಕಿರು ಉದ್ಯಮಿಗಳು ೨೦,೦೦೦-೩೦,೦೦೦ ಬಂಡವಾಳ ಹೂಡಿಕೆ ಮಾಡಿದ್ದರೆ, ಶೇಕಡಾ ೧೦ ರಷ್ಟು ಮಹಿಳಾ ಕಿರು ಉದ್ಯಮಿಗಳು ೩೦,೦೦೦-೪೦,೦೦೦ ಬಂಡವಾಳ ಹೂಡಿಕೆ ಮಾಡಿದ್ದರೆ, ಶೇಕಡಾ ೩೦ ರಷ್ಟು ಮಹಿಳಾ ಕಿರು ಉದ್ಯಮಿಗಳು ೪೦,೦೦೦ ಕ್ಕಿಂತ ಹೆಚ್ಚು ಬಂಡವಾಳ ಹೂಡಿಕೆ ಮಾಡಿದ್ದಾರೆ. ಇದರಿಂದ ತಿಳಿಯುದೇನೆಂದರೆ ಪ್ರಾರಂಭದಲ್ಲಿ ಕಡಿಮೆ ಬಂಡವಾಳದಿಂದ ಉದ್ಯಮವನ್ನು ಆರಂಭಿಸಿದ್ದಾರೆ.



ಕೋಷ್ಟಕ ೪.೫ ಉದ್ಯಮದ ತಿಂಗಳ ಉಳಿತಾಯದ ವಿವರ


ಉಳಿತಾಯ	ಮಾಹಿತಿದಾರರ ಸಂಖ್ಯೆ	ಶೇಕಡಾ
೧,೦೦೦ ಕ್ಕಿಂತ ಕಡಿಮೆ	೫೦	೫೦
೧,೦೦೦-೨,೦೦೦	೧೬	೧೬
೨,೦೦೦-೩,೦೦೦	೧೭	೧೭
೩,೦೦೦ ಕ್ಕಿಂತ ಹೆಚ್ಚು	೧೭	೧೭
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೫೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಉಳಿತಾಯವೂ ೧,೦೦೦ ಕ್ಕಿಂತ ಕಡಿಮೆ, ಶೇಕಡಾ ೧೬ ರಷ್ಟು ಮಹಿಳಾ ಕಿರು ಉದ್ಯಮಿಗಳ ಉಳಿತಾಯವೂ ೧,೦೦೦-೨,೦೦೦, ಶೇಕಡಾ ೧೭ ರಷ್ಟು ಮಹಿಳಾ ಕಿರು ಉದ್ಯಮಿಗಳ ಉಳಿತಾಯವೂ ೨,೦೦೦-೩,೦೦೦, ಶೇಕಡಾ ೧೭ ರಷ್ಟು ಮಹಿಳಾ ಕಿರು ಉದ್ಯಮಿಗಳ ಉಳಿತಾಯವೂ ೨,೦೦೦ ಕ್ಕಿಂತ ಜಾಸ್ತಿ ಇದೆ. ಈ ಅಂಕಿ ಅಂಶಗಳಿಂದ ತಿಳಿಯುದೇನೆಂದರೆ ಅತೀ ಹೆಚ್ಚು ಮಹಿಳಾ ಉದ್ಯಮಿಗಳ ಉಳಿತಾಯವೂ ೧,೦೦೦ ಕ್ಕಿಂತ ಕಡಿಮೆ ಇದೆ. ಕಿರು ಉದ್ಯಮವಾದರೂ ಖರ್ಚುವೆಚ್ಚಗಳಿರುವುದರಿಂದ ಉಳಿತಾಯವು ಕಡಿಮೆಯಾಗಿದೆ.

ಕೋಷ್ಟಕ ೪.೭ ಉದ್ಯಮಕ್ಕೆ ತಿಂಗಳಿಗೆ ತಗಲುವ ವೆಚ್ಚದ ವಿವರ


ವೆಚ್ಚ	ಮಾಹಿತಿದಾರರ ಸಂಖ್ಯೆ	ಶೇಕಡಾ
೧,೦೦೦-೨,೦೦೦	೦	೦
೨,೦೦೦-೩,೦೦೦	೦	೦
೩,೦೦೦- ೪,೦೦೦	೨೦	೨೦
೪,೦೦೦ ಕ್ಕಿಂತ ಹೆಚ್ಚು	೮೦	೮೦
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳ ತಿಂಗಳ ತಗಲುವ ವೆಚ್ಚವು ೩,೦೦೦- ೪,೦೦೦ ವಿದೆ. ಶೇಕಡಾ ೮೦ ರಷ್ಟು ಮಹಿಳಾ ಕಿರು ಉದ್ಯಮಿಗಳ ತಿಂಗಳ ತಗಲುವ ವೆಚ್ಚವು ೪,೦೦೦ ಕ್ಕಿಂತ ಹೆಚ್ಚಿವೆ. ಈ ಅಂಕಿ ಅಂಶಗಳಿಂದ ತಿಳಿಯುವುದೇನೆಂದರೆ ಅತೀ ಹೆಚ್ಚು ಮಹಿಳಾ ಕಿರು ಉದ್ಯಮಿಗಳ ತಿಂಗಳಿಗೆ ತಗಲುವ ವೆಚ್ಚವು ೪,೦೦೦ ಕ್ಕಿಂತ ಹೆಚ್ಚಿವೆ. ಯಾವುದೇ ಉದ್ಯಮವಾದರೂ ಖರ್ಚುವೆಚ್ಚಗಳು ಅಧಿಕವಾದ್ದರಿಂದ ಕಿರು ಉದ್ಯಮವು ಕೂಡ ಅಧಿಕ ಖರ್ಚುಗಳನ್ನು ಹೊಂದಿವೆ.

ಕೋಷ್ಟಕ ೪.೭ ಮಹಿಳಾ ಕಿರು ಉದ್ಯಮಿಗಳ ಬಂಡವಾಳದ ಮೂಲ


ಮೂಲ	ಮಾಹಿತಿದಾರರ ಸಂಖ್ಯೆ	ಶೇಕಡಾ
ಬ್ಯಾಂಕ್	೫೦	೫೦
ಸಹಕಾರಿ ಸಂಘ	೦	೦
ಸ್ವಸಹಾಯ ಸಂಘ	೨೦	೨೦
ಸ್ವಂತ ಹಣ	೨೦	೨೦
ಇತರೆ ಸಾಲ	೧೦	೧೦
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೫೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಬಂಡವಾಳದ ಮೂಲ ಬ್ಯಾಂಕ್ ಗಳಾಗಿವೆ. ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಬಂಡವಾಳದ ಮೂಲ ಸ್ವಸಹಾಯ ಸಂಘಗಳಾಗಿವೆ. ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಬಂಡವಾಳದ ಮೂಲ ಸ್ವಂತ ಹಣಗಳಾಗಿವೆ ಮತ್ತು ಶೇಕಡಾ ೧೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಬಂಡವಾಳದ ಮೂಲ ಇತರ ಸಾಲಗಳಾಗಿವೆ. ಈ ಅಂಕಿ ಅಂಶದಿಂದ ತಿಳಿಯುವುದೇನೆಂದರೆ ಅತಿ ಹೆಚ್ಚು ಮಹಿಳಾ ಉದ್ಯಮಿಗಳ ಬಂಡವಾಳದ ಮೂಲ ಬ್ಯಾಂಕ್ ಗಳಾಗಿವೆ. ಕಿರು ಉದ್ಯಮದಲ್ಲಿ ಬಂಡವಾಳ ಕಡಿಮೆ ಇದ್ದರೂ ಹೆಚ್ಚಿನ ಮಹಿಳಾ ಉದ್ದಿಮೆದಾರರು ತಮ್ಮ ಬಂಡವಾಳಕ್ಕಾಗಿ ಬ್ಯಾಂಕ್ ಗಳನ್ನು ಅವಲಂಬಿಸಿದ್ದಾರೆ.

ಕೋಷ್ಟಕ ೪.೮ ಕಿರು ಉದ್ಯಮದ ಲಾಭದ ವಿವರ


ವಿವರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಬಹಳ	೦	೦
ಸಾಧಾರಣ	೯೦	೯೦
ಇಲ್ಲ	೧೦	೧೦
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೯೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಉದ್ಯಮದ ಲಾಭವು ಸಾಧಾರಣವಾಗಿದೆ ಮತ್ತು ಶೇಕಡಾ ೧೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಉದ್ಯಮವು ಲಾಭದಾಯಕವಾಗಿಲ್ಲ. ಇದರಿಂದ ತಿಳಿಯುವುದೇನೆಂದರೆ ಅತೀ ಹೆಚ್ಚು ಮಹಿಳಾ ಕಿರು ಉದ್ಯಮಿಗಳ ಉದ್ಯಮದ ಲಾಭವು ಸಾಧಾರಣವಾಗಿವೆ. ಕಾರಣ ಕಿರು ಉದ್ಯಮದಲ್ಲಿ ಖರ್ಚು ಅಧಿಕವಿದ್ದು ಉಳಿತಾಯವು ಕಡಿಮೆ ಇರುವುದರಿಂದ ಲಾಭವು ಸಾಧಾರಣವಾಗಿವೆ.

ಕೋಷ್ಟಕ ೪.೯. ಕಿರು ಉದ್ಯಮವು ಲಾಭದಾಯಕವಾಗಿಲ್ಲದ್ದಿದ್ದರೆ ಕಾರಣಗಳು

ಕಾರಣಗಳು	ಮಾಹಿತಿದಾರರ ಸಂಖ್ಯೆ	ಶೇಕಡಾ
ಸ್ವರ್ಧೆ	೪೦	೪೦
ಪ್ರಚಾರ ಕಡಿಮೆ	೧೦	೧೦
ಗ್ರಾಹಕರ ಅಭಾವ	೧೦	೧೦
ಇತರೆ	೧೦	೧೦
ಒಟ್ಟು	೧೦೦	೧೦೦




ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೪೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಉದ್ಯಮವು ಲಾಭ ಪಡೆಯದಿರಲು ಕಾರಣ ಸ್ವರ್ಧೆ, ಶೇಕಡಾ ೧೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಉದ್ಯಮವು ಲಾಭ ಪಡೆಯದಿರಲು ಕಾರಣ ಪ್ರಚಾರ ಕಡಿಮೆ, ಶೇಕಡಾ ೧೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಉದ್ಯಮವು ಲಾಭ ಪಡೆಯದಿರಲು ಕಾರಣ ಗ್ರಾಹಕರ ಅಭಾವ, ಮತ್ತು ಶೇಕಡಾ ೧೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಉದ್ಯಮವು ಲಾಭ ಪಡೆಯದಿರಲು ಇತರೆ ಕಾರಣಗಳಿವೆ. ಕಿರು ಉದ್ಯಮಗಳು ಲಾಭದಾಯಕವಾಗಿಲ್ಲದಿರುದಕ್ಕೆ ಹಲವಾರು ಕಾರಣಗಳಿವೆ. ಇದರಲ್ಲಿ ಪ್ರಮುಖ ಕಾರಣವೆಂದರೆ ಸ್ವರ್ಧೆ. ಇತರ ಮಹಿಳಾ ಉದ್ದಿಮೆದಾರರು ಅಥವಾ ಪುರುಷ ಉದ್ದಿಮೆದಾರರಿಂದ ಅಧಿಕ ಸ್ವರ್ಧೆ ಇವೆ.



ಕೋಷ್ಟಕ ೪.೧೦ ಕೌಟುಂಬಿಕ ಒತ್ತಡ ವೃತ್ತಿಗೆ ಕಿರಿ ಕಿರಿ ಮಾಡುವುದೇ


ವಿವರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಹೌದು	೦	೦
ಇಲ್ಲ	೧೦೦	೧೦೦
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೧೦೦ ರಷ್ಟು ಮಹಿಳಾ ಕಿರು ಉದ್ಯಮಿಗಳ ವೃತ್ತಿಗೆ ಕೌಟುಂಬಿಕವಾಗಿ ಯಾವುದೇ ರೀತಿಯ ಕಿರಿ ಕಿರಿ ಇರುವುದಿಲ್ಲ. ಇದರಿಂದ ತಿಳಿಯುವುದೇನೆಂದರೆ ಮಹಿಳಾ ಕಿರು ಉದ್ಯಮಿಗಳ ಕುಟುಂಬದ ಪ್ರತಿಯೊಬ್ಬರೂ ಉದ್ಯಮಕ್ಕೆ ಪ್ರೋತ್ಸಾಹ ನೀಡುತ್ತಾರೆ.

ಕೋಷ್ಟಕ ೪.೧೧ ಮಹಿಳಾ ಉದ್ದಿಮೆದಾರರ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆ

ಹಿನ್ನಲೆ	ಮಾಹಿತಿದಾರರ ಸಂಖ್ಯೆ	ಶೇಕಡಾ
ಅತ್ಯುತ್ತಮ	೦	೦
ಉತ್ತಮ	೬೦	೬೦
ಸಾಧಾರಣ	೪೦	೪೦
ಕೆಳಮಟ್ಟ	೦	೦
ಒಟ್ಟು	೧೦೦	೧೦೦




ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೬೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆ ಉತ್ತಮವಾಗಿವೆ. ಶೇಕಡಾ ೪೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆ ಸಾಧಾರಣವಾಗಿವೆ. ಇದರಿಂದ ತಿಳಿಯುವುದೇನೆಂದರೆ ಅತೀ ಹೆಚ್ಚು ಮಹಿಳಾ ಕಿರು ಉದ್ಯಮಿಗಳ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆ ಉತ್ತಮವಾಗಿವೆ.



ಕೋಷ್ಟಕ ೪.೧೨ ಕಿರು ಉದ್ಯಮ ವಲಯದಲ್ಲಿರುವ ಸ್ಥಾನಮಾನ


ಸ್ಥಾನಮಾನ	ಮಾಹಿತಿದಾರರ ಸಂಖ್ಯೆ	ಶೇಕಡಾ
ಅತ್ಯುತ್ತಮ	೩೦	೩೦
ಉತ್ತಮ	೫೦	೫೦
ಸಾಧಾರಣ	೨೦	೨೦
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೩೦ ರಷ್ಟು ಮಹಿಳಾ ಕಿರು ಉದ್ಯಮಿಗಳಿಗೆ ಉದ್ಯಮ ವಲಯದಲ್ಲಿ ಅತ್ಯುತ್ತಮ ಸ್ಥಾನಮಾನವಿದೆ, ಶೇಕಡಾ ೫೦ ರಷ್ಟು ಮಹಿಳಾ ಕಿರು ಉದ್ಯಮಿಗಳಿಗೆ ಉದ್ಯಮ ವಲಯದಲ್ಲಿ ಉತ್ತಮ ಸ್ಥಾನಮಾನವಿದೆ. ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳಿಗೆ ಉದ್ಯಮ ವಲಯದಲ್ಲಿ ಸ್ಥಾನಮಾನವು ಸಾಧಾರಣ ಮಟ್ಟದಲ್ಲಿದೆ. ಇದರಿಂದ ತಿಳಿಯುವುದೇನೆಂದರೆ ಅತೀ ಹೆಚ್ಚು ಮಹಿಳಾ ಕಿರು ಉದ್ಯಮಿಗಳಿಗೆ ಉದ್ಯಮ ವಲಯದಲ್ಲಿ ಉತ್ತಮ ಸ್ಥಾನಮಾನವಿದೆ.

ಕೋಷ್ಟಕ ೪.೧೩ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿರುವಿಕೆ


ವಿವರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಹೌದು	೪೦	೪೦
ಇಲ್ಲ	೬೦	೬೦
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೪೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ ಮತ್ತು ಶೇಕಡಾ ೬೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿಲ್ಲ. ಇದರಿಂದ ತಿಳಿಯುವುದೇನೆಂದರೆ ಅತೀ ಹೆಚ್ಚು ಮಹಿಳಾ ಕಿರು ಉದ್ಯಮಿಗಳು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿಲ್ಲ.

ಕೋಷ್ಟಕ ೪.೧೪ ಪುರುಷರು ನಡೆಸುವ ಕಿರು ಉದ್ಯಮದಿಂದ ಸ್ಪರ್ಧೆ ಇದೆಯೇ

ವಿವರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಹೌದು	೮೦	೮೦
ಇಲ್ಲ	೨೦	೨೦
ಒಟ್ಟು	೧೦೦	೧೦೦




ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೮೦ ರಷ್ಟು ಮಹಿಳಾ ಕಿರು ಉದ್ಯಮಿಗಳಿಗೆ ಪುರುಷರು ನಡೆಸುವ ಕಿರು ಉದ್ಯಮದಿಂದ ಸ್ಪರ್ಧೆ ಇದೆ ಮತ್ತು ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳಿಗೆ ಪುರುಷರು ನಡೆಸುವ ಕಿರು ಉದ್ಯಮದಿಂದ ಸ್ಪಧೆ ಇಲ್ಲ. ಇದರಿಂದ ತಿಳಿಯುವುದೇನೆಂದರೆ ಅತೀ ಹೆಚ್ಚು ಮಹಿಳಾ ಕಿರು ಉದ್ಯಮಿಗಳಿಗೆ ಪುರುಷರು ನಡೆಸುವ ಕಿರು ಉದ್ಯಮದಿಂದ ಸ್ಪರ್ಧೆ ಇದೆ. ಅಂದರೆ ೨೦% ರಷ್ಟು ಮಹಿಳಾ ಕಿರು ಉದ್ಯಮಿಗಳಿಗೆ ಅವರು ನಡೆಸುವ ಸ್ಥಳದಲ್ಲಿ ಪುರುಷ ಉದ್ಯಮಿಗಳಿಲ್ಲದಿರುವುದರಿಂದ ಅವರಿಗೆ ಸ್ಪರ್ಧೆ ಇಲ್ಲ.



[illegible]

ಕೋಷ್ಟಕ ೪.೧೫. ಮಹಿಳಾ ಅಭಿವೃದ್ಧಿಯಲ್ಲಿ ಉದ್ಯಮಶೀಲತೆಯ ಪ್ರಭಾವ


ವಿವರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಹೌದು	೧೦೦	೧೦೦
ಇಲ್ಲ	೦	೦
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೧೦೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಪ್ರಕಾರ ಮಹಿಳಾ ಅಭಿವೃದ್ಧಿಯಲ್ಲಿ ಉದ್ಯಮಶೀಲತೆಯ ಪ್ರಭಾವವಿದೆ. ಇದರಿಂದ ತಿಳಿಯುವುದೇನೆಂದರೆ ಎಲ್ಲಾ ಮಹಿಳಾ ಕಿರು ಉದ್ಯಮಿಗಳು ಉದ್ಯಮಶೀಲತೆಯಿಂದ ಪ್ರಭಾವಿತರಾಗಿದ್ದಾರೆ. ಅಧ್ಯಾಯನದ ಪ್ರಕಾರ ಮಹಿಳೆಯರ ಅಭಿವೃದ್ಧಿಯಲ್ಲಿ ಉದ್ಯಮಶೀಲತೆಯು ಪ್ರಮುಖ ಪಾತ್ರ ವಹಿಸಿರುವುದನ್ನು ಮಹಿಳಾ ಉದ್ದಿಮೆದಾರರು ಒಪ್ಪಿಕೊಂಡಿದ್ದಾರೆ.

ಕೋಷ್ಟಕ ೪.೧೬. ಉದ್ದಿಮೆಗೆ ಸರ್ಕಾರದಿಂದ ಸವಲತ್ತುಗಳು ದೊರೆತಿದೆಯೇ

ವಿವರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಹೌದು	೨೦	೨೦
ಇಲ್ಲ	೮೦	೮೦
ಒಟ್ಟು	೧೦೦	೧೦೦




ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳಿಗೆ ಸರಕಾರದಿಂದ ಸವಲತ್ತುಗಳು ದೊರೆತಿವೆ ಮತ್ತು ಶೇಕಡಾ ೮೦ ರಷ್ಟು ಮಹಿಳಾ ಕಿರು ಉದ್ಯಮಿಗಳಿಗೆ ಸರಕಾರದಿಂದ ಯಾವುದೇ ಸವಲತ್ತುಗಳು ದೊರೆತ್ತಿಲ್ಲ. ಇದರಿಂದ ತಿಳಿಯುವುದೇನೆಂದರೆ ಸರಕಾರವು ಹಲವಾರು ಸವಲತ್ತುಗಳನ್ನು ನೀಡುತ್ತಿವೆ. ಆದರೆ ಈ ಸವಲತ್ತುಗಳು ಮಹಿಳಾ ಉದ್ದಿಮೆದಾರರಿಗೆ ತಲುಪುತ್ತಿಲ್ಲ.



ಕೋಷ್ಟಕ ೪.೧೭ ಉದ್ದಿಮೆಗೆ ಸರಕಾರದಿಂದ ದೊರೆತ ಸವಲತ್ತುಗಳು


ವಿವರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಸಾಲ	೧೦೦	೧೦೦
ಸಹಾಯಧನ	೦	೦
ಕಡಿಮೆ ಬಡ್ಡಿದರ	೦	೦
ಒಟ್ಟು	೧೦೦	೧೦೦



ಸರಕಾರದಿಂದ ಸವಲತ್ತು ಪಡೆದ ಶೇಕಡಾ ೨೦ ರಲ್ಲಿ ಎಲ್ಲರಿಗೂ ಸಾಲದ ರೂಪದಲ್ಲಿ ಸಹಾಯವಾಗಿವೆ ವಿನಃ ಬೇರೆ ಯಾವುದೇ ಸವಲತ್ತುಗಳು ದೊರೆತ್ತಿಲ್ಲ. ಸರಕಾರದಿಂದ ದೊರೆಯುವ ಸವಲತ್ತುಗಳಲ್ಲಿ ಸಾಲ, ಸಹಾಯಧನ, ಕಡಿಮೆಬಡ್ಡಿದರ ಇತ್ಯಾದಿಗಳಿವೆ. ಮಹಿಳಾ ಉದ್ದಿಮೆದಾರರಿಗೆ ಸಾಲವು ದೊರೆಯುತ್ತಿವೆ ಆದರೆ ಸಹಾಯಧನ ಮತ್ತು ಕಡಿಮೆಬಡ್ಡಿದರಗಳು ದೊರೆಯುತ್ತಿಲ್ಲ.

ಕೋಷ್ಟಕ ೪.೧೮. ಕಿರು ಉದ್ದಿಮೆಯನ್ನು ಆಯ್ಕೆ ಮಾಡಲು ಕಾರಣ

ವಿವರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಆರ್ಥಿಕ ಪರಿಸ್ಥಿತಿ	೧೦	೧೦
ಕೌಟುಂಬಿಕ ಕಾರಣ	೨೦	೨೦
ಸ್ವತಂತ್ರವಾಗಿರಲು	೫೦	೫೦
ಅನುಭವವಿದೆ	೨೦	೨೦
ಒಟ್ಟು	೧೦೦	೧೦೦




ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೧೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಈ ಉದ್ಯಮವನ್ನು ಆಯ್ಕೆ ಮಾಡಲು ಆರ್ಥಿಕ ಪರಿಸ್ಥಿತಿ ಕಾರಣ, ಪ್ರಕಾರ ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಈ ಉದ್ಯಮವನ್ನು ಆಯ್ಕೆ ಮಾಡಲು ಕೌಟುಂಬಿಕ ಪರಿಸ್ಥಿತಿ ಕಾರಣ, ಪ್ರಕಾರ ಶೇಕಡಾ ೫೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಈ ಉದ್ಯಮವನ್ನು ಆಯ್ಕೆ ಮಾಡಲು ಸ್ವತಂತ್ರತೆ ಕಾರಣ, ಪ್ರಕಾರ ಶೇಕಡಾ ೨೦ ರಷ್ಟು ಮಹಿಳಾ ಕಿರು ಉದ್ಯಮಿಗಳು ಈ ಉದ್ಯಮವನ್ನು ಆಯ್ಕೆ ಮಾಡಲು ಅವರ ಸೇವಾನುಭವ ಕಾರಣ. ಇದರಿಂದ ತಿಳಿಯುವುದೇನೆಂದರೆ ಅತೀ ಹೆಚ್ಚು ಮಹಿಳಾ ಕಿರು ಉದ್ಯಮಿಗಳು ಈ ಉದ್ಯಮವನ್ನು ಸ್ವತಂತ್ರವಾಗಿರಲು ಆಯ್ಕೆ ಮಾಡಿಕೊಂಡಿದ್ದಾರೆ.



ಕೋಷ್ಟಕ ೪.೧೯. ಮಹಿಳಾ ಸಬಲೀಕರಣದ ಬಗ್ಗೆ ತಿಳಿದಿದೆಯೇ

ವಿವರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಹೌದು	೯೦	೯೦
ಇಲ್ಲ	೧೦	೧೦
ಒಟ್ಟು	೧೦೦	೧೦೦




ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೯೦ ರಷ್ಟು ಮಹಿಳಾ ಕಿರು ಉದ್ಯಮಿಗಳಿಗೆ ಮಹಿಳಾ ಸಬಲೀಕರಣದ ಬಗ್ಗೆ ತಿಳಿದಿದೆ ಮತ್ತು ಶೇಕಡಾ ೧೦ ರಷ್ಟು ಮಹಿಳಾ ಕಿರು ಉದ್ಯಮಿಗಳಿಗೆ ಮಹಿಳಾ ಸಬಲೀಕರಣದ ಬಗ್ಗೆ ತಿಳಿದಿಲ್ಲ . ಇದರಿಂದ ತಿಳಿಯುವುದೇನೆಂದರೆ ಅತೀ ಹೆಚ್ಚು ಮಹಿಳಾ ಕಿರು ಉದ್ಯಮಿಗಳಿಗೆ ಮಹಿಳಾ ಸಬಲೀಕರಣದ ಬಗ್ಗೆ ತಿಳಿದಿದೆ. ಪ್ರಾಥಮಿಕ ಶಿಕ್ಷಣ ಪಡೆದ ಮಹಿಳೆ ಉದ್ದಿಮೆದಾರರಿಗೆ ಸಬಲೀಕರಣದ ಬಗ್ಗೆ ಅಷ್ಟಾಗಿ ತಿಳಿದಿಲ್ಲ. ಪ್ರೌಢ, ಪದವಿ ಹಾಗೂ ಪದವಿ ಪೂರ್ವ ಶಿಕ್ಷಣ ಪಡೆದ ಮಹಿಳೆ ಉದ್ದಿಮೆದಾರರಿಗೆ ಸಬಲೀಕರಣದ ಬಗ್ಗೆ ತಿಳಿದಿದೆ.



ಕೋಷ್ಟಕ ೪.೧೦. ಅಭಿವೃದ್ಧಿಯಲ್ಲಿ ಮಹಿಳೆಯರು ಬಹುಮುಖ್ಯ ಪಾತ್ರ ವಹಿಸುತ್ತಿದ್ದಾರೆಯೇ

ವಿವರ	ಮಾಹಿತಿದಾರರ ಸಂಖ್ಯೆ	ಶೇಕಡಾ
ಹೌದು	೧೦೦	೧೦೦
ಇಲ್ಲ	೦	೦
ಒಟ್ಟು	೧೦೦	೧೦೦



ಈ ಮೇಲ್ಕಂಡ ಅಂಕಿಅಂಶಗಳ ಪ್ರಕಾರ ಶೇಕಡಾ ೧೦೦ ರಷ್ಟು ಮಹಿಳಾ ಕಿರು ಉದ್ಯಮಿಗಳ ಪ್ರಕಾರ ಅಭಿವೃದ್ಧಿಯಲ್ಲಿ ಮಹಿಳೆಯರು ಬಹು ಮುಖ್ಯ ಪಾತ್ರ ವಹಿಸುತ್ತಾರೆ. ದೇಶವು ಅಭಿವೃದ್ಧಿಯಾಗಬೇಕಾದರೆ ಪುರುಷ ಹಾಗೂ ಮಹಿಳೆಯರ ಸಮಪಾಲು ಇರಬೇಕು. ಅದರಲ್ಲೂ ಮಹಿಳೆಯರ ಪಾತ್ರ ಬಹುಮುಖ್ಯವೆನಿಸುತ್ತದೆ.

ಅಧ್ಯಾಯ ೫

ಸಲಹೆ, ಸೂಚನೆಗಳು ಮತ್ತು ಸಂಹಾರ

೫.೧ ಸಾರಾಂಶ

೫.೨ ಸಲಹೆ ಸೂಚನೆಗಳು

೫.೩ ಕೊನೆಮಾತು

೫.೧ ಸಾರಾಂಶ

ಅಭಿವೃದ್ಧಿಯು ದೇಶದ ಮಾನವ ಸಂಪನ್ಮೂಲದ ಪೂರ್ಣ ಪ್ರಮಾಣದ ಬಳಕೆಯನ್ನು ಬಯಸುತ್ತದೆ. ಮಾನವ ಸಂಪನ್ಮೂಲದ ಮುಖ್ಯ ಭಾಗವಾಗಿರುವ ಮಹಿಳೆಯರನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂಬುದು ಕಂಡುಕೊಂಡ ವಿಚಾರ. ಮಹಿಳಾ ಸಬಲೀಕರಣದ ಗುರಿ ಸಾಧನೆಗೆ ಆರ್ಥಿಕ ಭದ್ರತೆಯೇ ಮೂಲ ಮಂತ್ರ. ಮಹಿಳೆಯರ ಸಬಲೀಕರಣದ ವಿಷಯದಲ್ಲಿ ಆರ್ಥಿಕ ಸ್ವಾವಲಂಬನೆಯು ಪ್ರಮುಖ ಪಾತ್ರ ವಹಿಸುತ್ತದೆ. ಅಶಕ್ತ ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗಲು ಉದ್ಯಮಶೀಲತೆ ಗುಣವನ್ನು ಬೆಳೆಸಬೇಕಾಗಿದೆ. ಉದ್ಯಮಶೀಲತೆಯು ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳಾಗಲು ಪ್ರೇರೇಪಿಸುತ್ತದೆ. ಇದಕ್ಕಾಗಿ ಕೈಕೊಂಡ ಈ ಅಧ್ಯಯನವು ಸಬಲೀಕರಣಕ್ಕೆ ಉದ್ಯಮಶೀಲತೆಯು ಯಾವ ರೀತಿ ಸಹಕರಿಸಿದೆ ಎಂಬುದನ್ನು ಸ್ಥಳೀಯ ಚೌಕಟ್ಟಿನಲ್ಲಿ ವಿವರಿಸಿದೆ. ವಿಶ್ಲೇಷಣೆ ಭಾಗದಲ್ಲಿ ಸಂಗ್ರಹಿಸಿದ ಮಾಹಿತಿಯಲ್ಲಿ ಕಂಡುಕೊಂಡ ವಿಚಾರವನ್ನು ವಿವರಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶಗಳು, ಇತಿಮಿತಿಗಳು, ವಿಧಾನಗಳು , ಸಮಸ್ಯೆಗಳ ಬಗ್ಗೆ ವಿವರಣೆ ನೀಡಲಾಗಿದೆ. ಯಾವ ಉದ್ದೇಶಗಳನ್ನು ಮುಂದಿಟ್ಟುಕೊಂಡು ಹಾಗೂ ಯಾವ ವಿಧಾನಗಳಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ ಎಂಬುದನ್ನು ತಿಳಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಮಹಿಳಾ ಸಬಲೀಕರಣ ಬಗ್ಗೆ ತಿಳಿಸಲಾಗಿದೆ. ಸಬಲೀಕರಣದ ನಿರೂಪಣೆ, ಮಹಿಳಾ ಸಬಲೀಕರಣದ ಉದ್ದೇಶಗಳು, ಸಬಲರಾದ ಮಹಿಳೆಯರಲ್ಲಿ ಕಂಡುಬರುವ ಗುಣಲಕ್ಷಣಗಳು, ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ, ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪ್ರಭಾವ, ಮಹಿಳೆಯರ ಅಭಿವೃದ್ಧಿಯಲ್ಲಿ ಸಬಲೀಕರಣದ ಮಹತ್ವ ಎಂಬಿತ್ಯಾದಿ ವಿಷಯಗಳನ್ನು ಚರ್ಚಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಅಧ್ಯಯನದ ಪ್ರಮುಖ ವಿಷಯವಾಗಿರುವ ಮಹಿಳಾ ಉದ್ಯಮಶೀಲತೆ ಮತ್ತು ಕಿರು ಉದ್ಯಮಗಳ ಬಗ್ಗೆ ತಿಳಿಸಲಾಗಿದೆ. ಮಹಿಳಾ ಉದ್ಯಮಶೀಲತೆ, ಮಹಿಳಾ ಉದ್ಯಮಿಗಳ ಗುಣಲಕ್ಷಣಗಳು , ಸಮಸ್ಯೆಗಳು ಮತ್ತು ಸವಾಲುಗಳು, ಸರ್ಕಾರ ಕೈಗೊಂಡ ಕ್ರಮಗಳು, ಕಿರು ಉದ್ಯಮಗಳ ಮಹತ್ವ ಮತ್ತು ಸಮಸ್ಯೆಗಳು, ಅಭಿವೃದ್ಧಿಯಲ್ಲಿ ಮಹಿಳೆಯರ ಕೊಡುಗೆಗಳು, ಮಹಿಳಾ ಉದ್ದಿಮೆದಾರರಿಗೆ ನೀಡುವ ಸವಲತ್ತುಗಳು, ಕಿರು ಉದ್ಯಮ ಆಯ್ಕೆ ಮಾಡಿಕೊಂಡಿರುವುದಕ್ಕೆ ಕಾರಣಗಳು ಮುಂತಾದ ವಿಷಯಗಳ ಬಗ್ಗೆ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಮಂಗಳೂರು ತಾಲೂಕಿನ ಕಿರು ಮಹಿಳಾ ಉದ್ಯಮಿಗಳಿಂದ ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆ ಮಾಡಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಇಡೀ ಅಧ್ಯಾಯದ ಸಾರ, ಕೊನೆಮಾತು ಮತ್ತು ಮಹಿಳಾ ಸಬಲಿಕರಣಕ್ಕೆ ಬೇಕಾದ ಸಲಹೆ ಸೂಚನೆಗಳನ್ನು ನೀಡಲಾಗಿದೆ.

೫.೨. ಸಲಹೆ ಸೂಚನೆಗಳು

ದೇಶದ ಕೈಗಾರಿಕಾಭಿವೃದ್ಧಿಗೆ ಉದ್ಯಮಶೀಲತೆಯು ಅವಶ್ಯಕವಾಗಿರುದರಿಂದ ಉದ್ಯಮಶೀಲತೆಯನ್ನು ಬೆಳೆಸುವುದು ಇಂದಿನ ಅಗತ್ಯತೆಯಾಗಿದೆ. ಅದರಲ್ಲೂ ಮಹಿಳಾ ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸುವುದು ತುಂಬಾ ಅವಶ್ಯಕವಾದ ಅಂಶವಾಗಿದೆ.

ಮಹಿಳಾ ಸಬಲೀಕರಣ ಮತ್ತು ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕೆಲವು ಉಪಯುಕ್ತ ಸಲಹೆಗಳನ್ನು ನೀಡಲಾಗಿದೆ.

೧. ಮಹಿಳಾ ಸಂಘಟನೆಗಳನ್ನು ಸದೃಡಗೊಳಿಸಿ, ಈ ಸಂಘಟನೆಯಿಂದ ಕಿರು ಮಹಿಳಾ ಉದ್ದಿಮೆದಾರರಿಗೆ ಉತ್ತೇಜನ ನೀಡುವುದು.

೨. ರಾಜಕೀಯ, ಆರ್ಥಿಕ ಹಾಗು ಸಾಮಾಜಿಕ ರಂಗಗಳಲ್ಲಿ ಸಮಾನ ಅವಕಾಶಗಳಿಗಾಗಿ ಹೊರಡಿಸಲಾದ ಹಕ್ಕುಗಳು ಮಹಿಳೆಯರಿಗೆ ದೊರೆಯುವ ಹಾಗೆ ಪ್ರಯತ್ನಿಸುವುದು.

೩. ಮಹಿಳೆಯರ ಉಚಿತ ಶಿಕ್ಷಣಕ್ಕೆ ಮಹತ್ವ ನೀಡುವುದು ಮತ್ತು ಇದಕ್ಕೆ ಬೇಕಾದ ಸವಲತ್ತುಗಳನ್ನು ಸರಕಾರವೇ ಒದಗಿಸುವುದು.

೪. ಕಿರು ಮಹಿಳಾ ಉದ್ದಿಮೆದಾರರಿಗಾಗಿಯೇ ಪ್ರತ್ಯೇಕ ಯೋಜನೆ ರೂಪಿಸುವುದು ಮತ್ತು ಸಹಾಯಧನ, ವಿಶೇಷ ಪ್ಯಾಕೇಜ್, ವಿಶೇಷ ಸಬ್ಸಿಡಿಯನ್ನು ಕಲ್ಪಿಸುವುದು.

೫. ಪುರುಷ ಮಹಿಳೆಯರೆಂಬ ಬೇಧಭಾವ ತೊರೆದು ಲಿಂಗ ಸಮಾನತೆಗೆ ಒತ್ತು ಕೊಡಬೇಕು. ಇದನ್ನು ಕಾನೂನಿಗಿಂತಲೂ ಜನರು ಸ್ವಯಂ ಸ್ಪೂರ್ತಿಯಿಂದ ಬೆಂಬಲಿಸಬೇಕು.

೬. ಮಹಿಳಾ ಉದ್ದಿಮೆದಾರರಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಕಾಯಿದೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

೭. ಸರಕಾರವು ಕಿರು ಉದ್ಯಮದ ವಿಚಾರದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವಾಗ ಮಹಿಳಾ ಕಿರು ಉದ್ಯಮಿಗಳ ನಿಲುವನ್ನು ಪರಿಗಣಿಸಬೇಕು.

೮. ಕಿರು ಉದ್ಯಮಶೀಲತಾ ಅಭಿವೃದ್ಧಿ ಯೋಜನೆಗಳಲ್ಲಿ ಮಹಿಳಾ ಕಿರು ಉದ್ಯಮಶೀಲತೆಯನ್ನು ಪ್ರತ್ಯೇಕವಾಗಿ ಪರಿಗಣಿಸಬೇಕು. ಇದರಿಂದ ಮಹಿಳಾ ಉದ್ದಿಮೆದಾರರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ.

೯. ಮಹಿಳಾ ಉದ್ದಿಮೆದಾರರಿಗೆ ಹಣಕಾಸು ನೆರವು ಪಡೆಯಲು ಇರುವ ನೀತಿ ನಿಯಮಗಳು ಸರಳಗೊಂಡು ಹಣದ ಸೌಲಭ್ಯ ಸುಲಭವಾಗಿ ಸಿಗುವಂತಾಗಬೇಕು.

೧೦. ಉದ್ಯಮ ತರಬೇತಿ ಕೇಂದ್ರಗಳ ಸ್ಥಾಪನೆಯಾಗಬೇಕು. ಯಶಸ್ವಿ ಮಹಿಳಾ ಉದ್ಯಮಿಗಳಿಂದ ಮಹಿಳೆಯರಿಗೆ ವಿಶೇಷ ತರಬೇತಿ, ಅವರಲ್ಲಿಯೂ ಬಡ ಮಹಿಳೆಯರಿಗೆ ಉಚಿತ ತರಬೇತಿ ವ್ಯವಸ್ಥೆಯಾಗಬೇಕು.

೧೧. ಕುಟುಂಬದವರ ನೈತಿಕ ಬೆಂಬಲ ಹಾಗು ಸರಕಾರದ ಸಹಾಯದಿಂದ ಮಹಿಳೆಯರು ಉದ್ಯಮ ನಡೆಸುವುದನ್ನು ಒಂದು ಪರ್ಯಾಯ ವೃತ್ತಿಯಾಗಿ ಆಯ್ಕೆ ಮಾಡಿಕೊಳ್ಳುವಂತೆ ಪ್ರೇರೇಪಿಸಬೇಕು.

೧೨. ಮಹಿಳೆಯಲ್ಲಿ ಅಡಗಿರುವ ಪ್ರತಿಭೆ, ಸಾಮರ್ಥ್ಯಗಳನ್ನು ಹೊರತರಲು ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳು ಮದ್ಯ ಪ್ರವೇಶಿಸಿ ಅದಕ್ಕೆ ಬೇಕಾದ ನೆರವನ್ನು ನೀಡಬೇಕು.

೧೩. ಮಹಿಳಾ ಉದ್ಯಮಿಗಳು ತಾವು ಯಶಸ್ವಿ ಉದ್ಯಮಿಗಳಾಗಿ ಇತರ ಮಹಿಳೆಯರನ್ನು ಉದ್ಯಮಿಗಳನ್ನಾಗಿ ರೂಪಿಸಲು ಮುಂದಾಗಬೇಕು.

೫.೩. ಕೊನೆ ಮಾತು

ಮಹಿಳಾ ಸಶಕ್ತೀಕರಣ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು, ಅವರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲು ಅವರನ್ನು ಉದ್ಯಮಶೀಲರನ್ನಾಗಿ ಮಾಡಬೇಕು. ಅದೇ ರೀತಿ ಉದ್ಯಮಲೋಕದಲ್ಲಿ ಸ್ತ್ರೀಯರನ್ನು ಉದ್ಯಮಿಗಳನ್ನಾಗಿ ಮಾಡದ ಹೊರತು ಅವರ ಅರ್ಹತೆ ಮತ್ತು ಶಕ್ತಿಯನ್ನು ಗುರುತಿಸಲು ಸಾಧ್ಯವಿಲ್ಲ.

ಸ್ತ್ರೀ ಸಬಲೀಕರಣ ಪುರುಷ ಪ್ರಧಾನ ವ್ಯವಸ್ಥೆಯ ಎಲ್ಲಾ ಅಂಕು - ಡೊಂಕುಗಳನ್ನು ಸರಿಪಡಿಸಿ ಸಮಾನತೆ ಧ್ವಜ ಹಾರಿಸುವಲ್ಲಿ ಸಾಮೂಹಿಕ ಚಳುವಳಿ ಮತ್ತು ವ್ಯವಸ್ಥೆಯ ಅಗತ್ಯತೆ ಅನಿವಾರ್ಯವಾಗಿದೆ. ಇಂತಹ ವ್ಯವಸ್ಥೆ ಕಾಯಿದೆಯ ಸ್ಥಾನ ಪಡೆಯದಿದ್ದರೆ ಸ್ತ್ರೀಯರ ಅಗತ್ಯತೆಗಳನ್ನು ಪೂರೈಸಲಾಗುವುದಿಲ್ಲ, ಅವರ ಸ್ಥಾನ ಮಾನ ಪರಿಸ್ಥಿತಿಗೆ ಅನುಗುಣವಾಗಿ ತ್ವರಿತ ಬದಲಾವಣೆ ಆಗಬೇಕಿದೆ. ಕಾಲ್ಪನಿಕವಾದ ಅಧಿಕಾರ ಸ್ವೀಕೃತಿಯಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ಕಿರು ಉದ್ದಿಮೆ ವಲಯದಲ್ಲಿ ಸ್ವ ಉದ್ಯೋಗಕ್ಕೆ ಹೇರಳ ಅವಕಾಶಗಳು ಇರುವುದು ಮಾತ್ರವಲ್ಲದೆ, ಆರ್ಥಿಕ ಸ್ವಾವಲಂಬನೆಗೆ ಸ್ವ ಉದ್ಯೋಗವು ದಾರಿ ಮಾಡಿಕೊಡುತ್ತದೆ. ಯಶಸ್ಸು ಸಾಧಿಸಲು ಮತ್ತು ಪರಿಪೂರ್ಣತೆಗೆ ಯೋಜನೆ ಮಾಡಿಕೊಳ್ಳಬೇಕು. ದೇಶದ ಸರ್ವಾಂಗೀಣ ಪ್ರಗತಿಗಾಗಿ ಮಹಿಳೆಯರು ಸಲ್ಲಿಸುತ್ತಿರುವ ಸೇವೆ ಅತಿ ದೊಡ್ಡದು ಹಾಗೂ ಅಮೋಘವಾದುದು. ಆದ್ದರಿಂದಲೇ ಅವರನ್ನು ಅವರ ಶಕ್ತಿಯನ್ನು ಗುರುತಿಸಿ, ಅಭಿವೃದ್ಧಿ ಪಥದಲ್ಲಿ ಮುನ್ನಡೆಯುವ ಅವಶ್ಯಕತೆ ಇದೆ. ಇದರಲ್ಲಿ ಬರಿಯ ಅವರ ಪ್ರಗತಿ ಮಾತ್ರವಲ್ಲದೆ, ದೇಶದ ಪ್ರಗತಿಯೂ ಸಹ ಅಡಕವಾಗಿದೆ.

ಮಹಿಳೆಯರು ಎದುರಿಸುತ್ತಿರುವ ಎಲ್ಲಾ ತೆರನಾದ ಸ್ಪರ್ಧೆ ಮತ್ತು ಸಮಸ್ಯೆಗಳಿಗೆ ಶೋಷಣೆ ಮತ್ತು ನಿಯಂತ್ರಣಗಳಿಗೆ ಮಾನವೀಯ ದೃಷ್ಟಿಯಿಂದ ಯಾವ ತೆರನಾದ ತಾರತಮ್ಯವನ್ನು ಮಾಡದೆ, ಬಂಡವಾಳಶಾಹಿ ಪ್ರವೃತ್ತಿ ಎದುರಿಸುವಂತಹ ವಾತಾವರಣ ಕಲ್ಪಿಸಿಕೊಡಬೇಕಿದೆ. ಮಹಿಳಾ ಸಬಲೀಕರಣ ಪ್ರಪಂಚದಾದ್ಯಂತಹ ಕೇಳಿಬರುತ್ತಿರುವ ಇತ್ತೀಚೇನ ವಿಶೇಷ ಬೆಳವಣಿಗೆ, ನ್ಯಾಯ, ಸಮಾನತೆ, ಆಧಾರಿತ ಸಮಾಜ -ರಾಷ್ಟ್ರ ನಿರ್ಮಾಣದಲ್ಲಿ, ಶಾಂತಿ -ಅಹಿಂಸೆ ಪಾಲಿಸುವಲ್ಲಿ ಮುಂದಿನ ತಲೆಮಾರಿನವರಿಗೆ ಆದರ್ಶಗಳನ್ನು ನೀಡುವಲ್ಲಿ ಈ ಸಬಲೀಕರಣ ಒಂದು ಚಳುವಳಿ ರೂಪದಲ್ಲಿ ಸಾಮೂಹಿಕವಾಗಿ ವ್ಯಕ್ತಗೊಳ್ಳಬೇಕಾಗಿದೆ ಎಂಬುದೇ ನನ್ನ ಆಶಯವಾಗಿದೆ.

ಅನುಬಂಧ-I

<u>ಪ್ರಶ್ನಾವಳಿ</u>

"ಮಹಿಳಾ ಸಬಲೀಕರಣದಲ್ಲಿ ಕಿರು ಮಹಿಳಾ ಉದ್ಯಮಿಗಳ ಪಾತ್ರ"- ಮಂಗಳೂರು ತಾಲೂಕಿನ ಒಂದು ಅಧ್ಯಯನ"

ಪೀಠಿಕೆ

ಪ್ರಸ್ತುತ ಅಧಯಯನದ ಮುಖ್ಯ ಉದ್ದೇಶ ಮಹಿಳಾ ಸಬಲೀಕರಣದಲ್ಲಿ ಕಿರು ಮಹಿಳಾ ಉದ್ಯಮಿಗಳ ಪಾತ್ರವನ್ನು ಪರಿಶೀಲಿಸುವುದು ಮತ್ತು ಪರಾಮರ್ಶೆ ನಡೆಸುವುದು.

ಸೂಚನೆಗಳು

ಈ ಪ್ರಶ್ನಾವಳಿಯಲ್ಲಿ ವಿವಿಧ ಪ್ರಕಾರದ ಪ್ರಶ್ನೆಗಳಿವೆ. ಪ್ರಶ್ನೆಗಳಿಗೆ ಕೊಟ್ಟ ಉತ್ತರದಲ್ಲಿ ಸರಿಯಾದುದನ್ನು ಉತ್ತರಿಸಿದರಾಯಿತು

- ಈ ಸಮೀಕ್ಷೆಯನ್ನು ಕೇವಲ ಅಧ್ಯಯಾನ ಉದ್ದೇಶಕ್ಕಾಗಿ ಮಾತ್ರ ಮಾಡಲಾಗುತ್ತಿದೆ.
- ನೀವು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಗೌಪ್ಯತೆಯನ್ನು ಕಾಪಾಡಲಾಗುವುದು.
- ನಿಮ್ಮ ಇತರೆ ಉಪಯುಕ್ತ ಸಲಹೆ ಮತ್ತು ಪೂರಕ ಅಭಿಪ್ರಾಯವಿದ್ದಲ್ಲಿ ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲಾಗುವುದು.
- ನಿಮ್ಮ ಸಹರಕ್ಕಾಗಿ ಅನಂತ ಕೃತಜ್ಞತೆಗಳು.

1. ವೈಯಕ್ತಿಕ ವಿಚಾರ
2. ಸಾಮಾಜಿಕ ವಿಚಾರ
3. ಕಿರು ಉದ್ಯಮದ ವಿಚಾರ

1. ವೈಯಕ್ತಿಕ ವಿಚಾರ

೧. ಹೆಸರು:

೨. ವಯಸ್ಸು:

೩. ವಿವಾಹಿತೆ: ಹೌದು ( ) ಅಲ್ಲ ( )

೪. ವಿವಾಹಿತೆಯಾದಲ್ಲಿ ಮಕ್ಕಳ ಸಂಖ್ಯೆ:

2. ಸಾಮಾಜಿಕ ವಿಚಾರ

೧. ಶಿಕ್ಷಣ

ಪ್ರಾಥಮಿಕ ( ) ಪ್ರೌಢ ( )

ಪದವಿಪೂರ್ವ ( ) ಪದವಿ ( )

೨. ಯಾವ ಧರ್ಮಕ್ಕೆ ಸೇರಿದವರು

ಹಿಂದು ( ) ಮುಸ್ಲಿಂ ( )

ಕ್ರಿಶ್ಚಿಯನ್ ( ) ಇತರ ( )

೩. ಹಿಂದು ಆಗಿದ್ದಲ್ಲಿ ಯಾವ ಜಾತಿಗೆ ಸೇರಿದವರು

ಮುಂದುವರಿದ ( ) ಹಿಂದುಳಿದ ( )

ಪರಿಶಿಷ್ಟ ಜಾತಿ ( ) ಇತರೆ ಹಿಂದುಳಿದ ( )

3. ಕಿರು ಉದ್ಯಮದ ವಿಚಾರ

೧. ತೊಡಗಿಸಿಕೊಂಡಿರುವ ಚಟುವಟಿಕೆಯ ಹೆಸರು

೨. ಎಷ್ಟು ವರ್ಷಗಳಿಂದ ಈ ಉದ್ಯಮ ನಡೆಸುತ್ತಿದ್ದೀರಾ?

೧-೫ ವರ್ಷ ( ) ೫-೧೦ ವರ್ಷ ( )

೧೦-೧೫ ವರ್ಷ ( ) ೧೫ ಕ್ಕಿಂತ ಹೆಚ್ಚು ( )

೩. ನಿಮ್ಮ ಕೈಕೆಳಗೆ ಎಷ್ಟು ಮಂದಿ ದುಡಿಯುತ್ತಿದ್ದಾರೆ?

೨-೩ ( ) ೩-೪ ( ) ೪-೫ ( ) ೫ ಕ್ಕಿಂತ ಹೆಚ್ಚು ( )

೪. ನಿಮ್ಮ ವೃತ್ತಿಗೆ ನಿಮ್ಮ ಕುಟುಂಬದವರ ಸಹಕಾರ ಹೇಗಿದೆ?

ಪ್ರೋತ್ಸಾಹದಾಯಕ ( ) ತೃಪ್ತಿಕರ ( )

ಸಹಕಾರವೇ ಇಲ್ಲ ( ) ಅತೃಪ್ತಿಕರ ( )

೫. ಉದ್ಯಮ ಮನೆಯಿಂದ ಎಷ್ಟು ದೂರದಲ್ಲಿದೆ?

೧ ಕಿ.ಮೀ.ಗಿಂತ ಕಡಿಮೆದೂರ ( ) ೧-೨ ಕಿ.ಮೀ.ಗಿಂತ ದೂರ ( )

೨-೪ ಕಿ.ಮೀ.ಗಿಂತ ದೂರ ( ) ೫ ಕಿ.ಮೀ.ಗಿಂತ ದೂರ ( )

೬. ಉದ್ಯಮಕ್ಕೆ ಹೂಡಿರುವ ಒಟ್ಟು ಬಂಡವಾಳ

೧೦,೦೦೦-೨೦,೦೦೦ ( ) ೨೦,೦೦೦-೩೦,೦೦೦ ( )

೩೦,೦೦೦-೪೦,೦೦೦ ( ) ೪೦,೦೦೦ ಕ್ಕಿಂತ ಹೆಚ್ಚು ( )

೭. ನಿಮ್ಮ ತಿಂಗಳ ಉಳಿತಾಯ ಎಷ್ಟು?

೧,೦೦೦ಕ್ಕಿಂತ ಕಡಿಮೆ ( ) ೧,೦೦೦-೨,೦೦೦ ( )

೨,೦೦೦-೩,೦೦೦ ( ) ೩,೦೦೦ ಕ್ಕಿಂತ ಜಾಸ್ತಿ ( )

೮. ನಿಮ್ಮ ಉದ್ಯಮಕ್ಕೆ ತಿಂಗಳಿಗೆ ತಗಲುವ ವೆಚ್ಚ ಎಷ್ಟು?

೧,೦೦೦-೨,೦೦೦ ( ) ೨,೦೦೦-೩,೦೦೦ ( )

೩,೦೦೦ - ೪,೦೦೦ ( ) ೪,೦೦೦ ಕ್ಕಿಂತ ಜಾಸ್ತಿ ( )

೯. ಬಂಡವಾಳದ ಮೂಲ?

ಬ್ಯಾಂಕ್ ( ) ಸಹಕಾರಿ ಸಂಘ ( ) ಸ್ವಸಹಾಯ ಸಂಘ ( )

ಸ್ವಂತ ಹಣ ( ) ಇತರೆ ಸಾಲ ( )

೧೦. ಸಾಲ ಪಡೆದಿದ್ದರೆ ಬಡ್ಡಿದರ ಎಷ್ಟು?

೧೦-೨೦% ( ) ೨೦-೩೦% ( ) ೩೦-೪೦% ( )

೧೧. ಸ್ವಂತ ಆಸ್ತಿ ಇದೆಯೇ?

ಹೌದು ( ) ಇಲ್ಲ ( )

೧೨. ಸಾಲ ಪಡೆಯುವಾಗ ಯಾವ ದಾಖಲೆಗಳನ್ನು ನೀಡಿದ್ದೀರಿ?

ಆಸ್ತಿಪತ್ರ ( ) ಮನೆಪತ್ರ ( ) ಇತರೆ ( )

೧೩. ಸಾಲ ಮರುಪಾವತಿಯ ವಿಧಾನ ಯಾವುದು?

ದಿನ ಪಾವತಿ ( ) ವಾರ ಪಾವತಿ ( ) ತಿಂಗಳ ಪಾವತಿ ( )

೧೪. ಉದ್ಯಮ ಲಾಭದಾಯಕವಾಗಿದೆಯೇ?

ಬಹಳ ( ) ಸಾಧಾರಣ ( ) ಇಲ್ಲ ( )

೧೫. ಇಲ್ಲದಿದ್ದರೆ ಕಾರಣವೇನು?

ಸ್ಪರ್ಧೆ ( ) ಪ್ರಚಾರ ಕಡಿಮೆ ( )

ಗ್ರಾಹಕರ ಅಭಾವ ( ) ಇತರೆ ( )

೧೬. ಉದ್ಯಮ ಕೈಗೊಳ್ಳುವ ಮೊದಲು ಆರ್ಥಿಕ ಪರಿಸ್ಥಿತಿ?

ಉತ್ತಮ ( ) ಅತ್ಯುತ್ತಮ ( )

ಸಾಧಾರಣ ( ) ಕೆಳಮಟ್ಟ ( )

೧೭. ಉದ್ಯಮ ಕೈಗೊಂಡ ನಂತರ ಆರ್ಥಿಕ ಪರಿಸ್ಥಿತಿ?

ಉತ್ತಮ ( ) ಅತ್ಯುತ್ತಮ ( )

ಸಾಧಾರಣ ( ) ಕೆಳಮಟ್ಟ ( )

೧೮. ನಿಮ್ಮ ಸಂಪಾದನೆಯ ಖರ್ಚಿನ ಉದ್ದೇಶ?

ಉಳಿತಾಯ ( ) ಮನೆಖರ್ಚು ( )

ಸಾಲ ತೀರಿಸಲು ( ) ಇತರೆ ( )

೧೯. ಕೌಟುಂಬಿಕ ಒತ್ತಡ ನಿಮ್ಮ ವೃತ್ತಿಗೆ ಕಿರಿಕಿರಿ ಮಾಡುವುದೇ?

ಹೌದು ( ) ಇಲ್ಲ ( )

೨೦. ನಿಮ್ಮ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆ ಯಾವ ರೀತಿ ಇದೆ?

ಉತ್ತಮ ( ) ಅತ್ಯುತ್ತಮ( )

ಸಾಧಾರಣ ( ) ಕೆಳಮಟ್ಟ ( )

೨೧. ಉದ್ಯಮ ಪ್ರಾರಂಭಿಸುವ ಮೊದಲು ಸಾಲವಿತ್ತೆ?

ಹೌದು ( ) ಇಲ್ಲ ( )

೨೨. ನಿಮಗೆ ಕಿರು ಉದ್ಯಮದ ವಲಯದಲ್ಲಿ ಸ್ಥಾನಮಾನ ಹೇಗೆ ಇದೆ?

ಅತ್ಯುತ್ತಮ ( ) ಉತ್ತಮ ( )ಸಾಧಾರಣ ( )

೧೩. ಮಹಿಳಾ ಕಿರು ಉದ್ಯಮಿಗಳ ಸಂಘದ ಸದಸ್ಯರೇ?

ಹೌದು ( ) ಇಲ್ಲ ( )

೧೪. ಸದಸ್ಯರಾದಲ್ಲಿ ಯಾವ ರೀತಿ?

ಕಾರ್ಯದರ್ಶಿ ( ) ಜೊತೆಕಾರ್ಯದರ್ಶಿ ( ) ಕೇವಲ ಸದಸ್ಯೆ ( )

೧೫. ಯಾವುದಾದರು ಇತರ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂದಿದ್ದೀರಾ?

ಹೌದು ( ) ಇಲ್ಲ ( )

೧೬. ಪುರುಷರು ನಡೆಸುವ ಕಿರು ಉದ್ಯಮದಿಂದ ಸ್ಪರ್ಧೆ ಇದೆಯೇ?

ಹೌದು ( ) ಇಲ್ಲ ( )

೧೭. ನಿಮ್ಮ ಅಭಿವೃದ್ಧಿಯಲ್ಲಿ ಉದ್ಯಮಶೀಲತೆಯ ಪ್ರಭಾವವಿದೆಯೇ?

ಹೌದು ( ) ಇಲ್ಲ ( )

೧೮. ನಿಮ್ಮ ಉದ್ದಿಮೆಗೆ ಸರ್ಕಾರದಿಂದ ಯಾವುದಾದರು ಸವಲತ್ತುಗಳು ದೊರೆತಿದೆಯೇ?

ಹೌದು ( ) ಇಲ್ಲ ( )

೧೯. ಹೌದಾದರೆ ಯಾವ ಸವಲತ್ತುಗಳು?

ಸಾಲ ( ) ಸಹಾಯಧನ ( ) ಕಡಿಮೆ ಬಡ್ಡಿದರ ( )

೨೦. ನೀವು ಈ ಉದ್ಯಮವನ್ನು ಆಯ್ಕೆ ಮಾಡಲು ಕಾರಣವೇನು?

ಆರ್ಥಿಕ ಪರಿಸ್ಥಿತಿ ( ) ಕೌಟುಂಬಿಕ ಕಾರಣ ( )

ಸ್ವತಂತ್ರವಾಗಿರಲು ( ) ಅನುಭವವಿದೆ ( )

೨೧. ನಿರ್ಧಾರ ತೆಗೆದುಕೊಳ್ಳಲು ನೀವು ಯಾರ ಸಹಾಯ ಪಡೆಯುತ್ತೀರಿ?

ಸ್ವಂತ ನಿರ್ಧಾರ ( ) ತಂದೆ ( )

ಗಂಡ ( ) ಅಣ್ಣ ( )

೨೨. ನಿಮಗೆ ಮಹಿಳಾ ಸಬಲೀಕರಣದ ಬಗ್ಗೆ ತಿಳಿದಿದೆಯಾ?

ಹೌದು ( ) ಇಲ್ಲ ( )

೨೩. ಅಭಿವೃದ್ಧಿಯಲ್ಲಿ ಮಹಿಳೆಯರು ಬಹುಮುಖ್ಯ ಪಾತ್ರ ವಹಿಸುತ್ತಿದ್ದಾರೆ.

ಹೌದು ( ) ಇಲ್ಲ ( )

ಸ್ಥಳ : ಸಹಿ

ದಿನಾಂಕ :

ಅನುಬಂಧ-II

ಪರಾಮರ್ಶನ ಗ್ರಂಥಗಳು

೧. ಅಂಜನಪ್ಪ ಬಿ. ಹೆಚ್.: ಮಹಿಳೆ ಮತ್ತು ದುಡಿಮೆ, ದೇಸಿ ಪುಸ್ತಕ, ಬೆಂಗಳೂರು, ೨೦೦೯.

೨. ಆಂಟನಿ ವಲ್ಸಮ್ಮ: ವಿಮೆನ್ ಎಂಟರ್ಪ್ರಿನರಸ್- ಎ ಸ್ಟಡಿ ಸದರ್ನ್ ಇಕೋನಾಮಿಸ್ಟ್, ವಾಲ್ಯೂಮ್ ೪೫(೨೧) ಮಾರ್ಚ್ ೩ ೨೦೦೭.

೩. ಒಡೆಯರ್ ಡಿ. ಹೆಗ್ಗಡೆ: ಭಾರತದ ಆರ್ಥಿಕಾಭಿವೃದ್ಧಿ, ಅರ್ಜುನ್ ಪಬ್ಲಿಷಿಂಗ್ ಹೌಸ್, ಮೈಸೂರು, ೨೦೦೬

೪. ಒಡೆಯರ್ ಡಿ. ಹೆಗ್ಗಡೆ ಮತ್ತು ಎನ್ ಅನ್ನಪೂರ್ಣೆಶ್ವರಿ: ಮಹಿಳಾ ಅಧ್ಯಯನ- ಆರ್ಥಿಕ ಸಾಮಾಜಿಕ ನೆಲೆಗಳು ಮತ್ತು ಸಬಲೀಕರಣ, ಶ್ರೀ ವಿಶಾಲ್ ಎಂಟರ್ ಪ್ರೈಸಸ್, ಬೆಂಗಳೂರು.

೫. ಒಡೆಯರ್ ಡಿ. ಹೆಗಡೆ: ಮಹಿಳಾ ಅಧ್ಯಯನ, ಶ್ರೀ ವಿಶಾಲ್ ಎಂಟಪ್ರೈಸಸ್, ಬೆಂಗಳೂರು.

೬. ಕಾರಿನ್ ಕುಮಾರ, ಶಿಕ್ಷಣದಿಂದಲೇ ಮಹಿಳಾ ಸಬಲೀಕರಣ, ಪ್ರಜಾವಾಣಿ ೧೨/೧೨/೨೦೧೩.

೭. ಕಲ್ಬಾಗ್ ಸಿ. : ವಿಮೆನ್ ಎಂಪ್ಲೋಯ್ ಮೆಂಟ್ ಅಂಡ್ ದಿ ವರ್ಕ್ ಪ್ಲೇಸ್, ಡಿಸ್ಕವರಿ ಪಬ್ಲಿಕೇಷನ್ ಹೌಸ್, ಡೆಲ್ಲಿ, ೧೯೯೨, ಅಲ್ಲಹಾಬಾದ್ ೧೯೯೩.

೮. ಗೋವಿಂದರಾಜು ಬಿ. ಎಂ: ಉದ್ಯೋಗ ಮತ್ತು ಮಹಿಳೆ, ದಿನೇಶ್ ಪಿ. ಟಿ. ಮತ್ತು ಎನ್. ಕೆ ಗೌಡ: ಮಹಿಳಾ ಉದ್ಯಮಶೀಲತೆ, ಜಯಶೀಲ ಮತ್ತು ಸುಧಾಕರ್ ಎಸ್: ಗ್ರಾಮೀಣ ಮಹಿಳೆಯರ ಸಬಲೀಕರಣದ ವಿವಿಧ ಆಯಾಮಗಳು, ಶೌಕತ್ ಆಲಿ, ಎಂ ಮೇಗಲಮನಿ ಮತ್ತು ಪಿ. ಎಂ. ಹೊನಕೇರಿ: ಸ್ತ್ರೀಯರ ಸಬಲೀಕರಣದಲ್ಲಿ ಶಿಕ್ಷಣದ ಪಾತ್ರ, ಜಯಶೀಲ, ಶೌಕತ್ ಆಲಿ, ಎಂ ಮೇಗಲಮನಿ, ಸುಧಾಕರ ಎಸ್ (ಸಂ): ಮಹಿಳೆ ಮತ್ತು ಅಭಿವೃದ್ಧಿ, ಕಿಸಾನ್ ಪಬ್ಲಿಕೇಷನ್, ಮಂಗಳೂರು, ೨೦೦೭.

೯. ಚಂದ್ರಪೂಜಾರಿ ಎಂ:ಸಂಶೋಧನೆ ಏನು? ಏಕೆ? ಹೇಗೆ?, ಹಂಪಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ , ೨೦೦೯.

೧೦.ಚಂದ್ರಪೂಜಾರಿ ಎಂ: ಸಂಶೋಧನ ಪ್ರಸ್ತಾವ, ಹಂಪಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ೨೦೧೧. ೧೧. ಚಿನ್ನಪ್ಪ ಗೌಡ ಕೆ : ಮಹಿಳೆ ಅಭಿವೃದ್ಧಿ ಕಥನ, ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ ಶೌಕತ್ ಆಲಿ, ಎಂ ಮೆಗಲಮನಿ, ಸುಧಾಕರ ಎಸ್(ಸಂ) ಕಿಸನ್ ಪಬ್ಲಿಕೇಷನ್, ಮಂಗಳೂರು, ೨೦೦೭.

೧೨. ಜಯಲತಾ ಜೆ: ರೋಲ್ ಆಪ್ ವಿಮೆನ್ ಎಂಟ್ರೆಪ್ರಿನಿಯರ್ಸ್ ಇನ್ ಸೋಶಿಯಲ್ ಆಪ್ ಲಿಪ್ಟ್ ಮೆಂಟ್ , ಸದರ್ನ್ ಇಕೊನೋಮಿಕ್ಸ್, ೪೭(೧), ಮೇ ೨೦೦೮.

೧೩. ಜಾನಕಿ ಎಂ: ಮಹಿಳೆಯರ ಮುನ್ನಡೆ, ಸಾಧನೆ, ದಕ್ಷಿಣ ಕನ್ನಡ ಜಿಲ್ಲಾ ಕೋಆಪರೇಟಿವ್ ಬ್ಯಾಂಕ್ ನಿಗಮ, ಮಂಗಳೂರು, ೨೦೦೪.

೧೪. ನಾರಾಯಣಿ ದಾಮೋದರ್: ಅಸೀಮಾ,ಸಂಪುಟ ೪ ಸಂಚಿಕೆ ೪, ಮೇ ತಿಂಗಳು ೧೯೯೭

೧೫. ಪ್ರಭಾಕರ ಶಿಶಿಲ ಬಿ. : ಭಾರತದ ಆರ್ಥಿಕತೆ ಸಮಸ್ಯೆಗಳು ಮತ್ತು ಸುಧಾರಣೆಗಳು, ಮಂಗಳ ಪ್ರಕಾಶನ, ಮಂಗಳೂರು, ೨೦೦೯.

೧೬. ಪ್ರಭಾಕರ ಶಿಶಿಲ. ಬಿ. : ಅಭಿವೃದ್ಧಿಯ ಅರ್ಥಶಾಸ್ತ್ರ, ಕಲಾ ಪ್ರಕಾಶನ, ಬೆಂಗಳೂರು, ೨೦೦೫.

೧೭. ಬಾಸಿಲ್ ಹನ್ಸ್ ವಿ. : ಭಾರತದಲ್ಲಿ ಉದ್ಯಮಶೀಲತೆ ಮತ್ತು ಮಹಿಳಾ ಸಬಲೀಕರಣ: ಸಾಧ್ಯತೆಗಳು ಮತ್ತು ಸವಾಲುಗಳು, ಜಯಶೀಲ ರವಿಂದ್ರ ಕುಮಾರ್ ಬಿ. ಮತ್ತು ವಿಲಾಸ್ ಎಂ ಕಾದ್ರೋಳಕರ್ (ಸಂ), ಮಹಿಳಾ ಸಬಲೀಕರಣದಲ್ಲಿ ಸ್ವ ಸಹಾಯ ಗುಂಪುಗಳ ಪಾತ್ರ- ಒಂದು ವಿಶ್ಲೇಷಣೆ, ಗ್ಲೋಬಲ್ ರಿಸರ್ಚ್ ಪಬ್ಲಿಕೇಷನ್.

೧೮. ಮಂಜುಳಾ ಬಿ. ಸಿ.: ಬ್ಯಾಂಕ್ ಪೈನಾನ್ಸ್ ಫಾರ್ ಸೆಲ್ಫ್ ಎಂಪ್ಲಾಯಿ ಮೆಂಟ್ ಆಪ್ ವಿಮೆನ್ - ದಿ ಕೇಸ್ ಸ್ವಡಿ ಆಪ್ ದ ಸೆಲ್ಫ್ ಎಂಪ್ಲಾಯಿ ಮೆಂಟ್ ಪ್ರೋಗ್ರಾಮ್ ಫಾರ್ ಅರಬನ್ ಪೂವರ್ ಇನ್ ಮಂಗಳೂರು ಸಿಟಿ ಕಾರ್ಪೋರೇಶನ್ ಏರಿಯ, ಮಂಗಳೂರು ವಿಶ್ವವಿದ್ಯಾಲಯದ ಎಂ. ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ, ೧೯೮೯.

೧೯. ಯೋಗರಾಜು ಎಸ್. ಡಿ. ಮಹಿಳಾ ಸಬಲೀಕರಣ, ಶ್ರೀ ಅನ್ನಪೂರ್ಣ ಪ್ರಕಾಶನ, ಬೆಂಗಳೂರು, ೨೦೧೩.

೨೦. ರಾಚಪ್ಪಾಜಿ ಎಂ ಮತ್ತು ಎಸ್ ನಾಗರಾಜು: ಮಹಿಳಾ ಸಬಲೀಕರಣದ ವಿವಿಧ ಹೆಜ್ಜೆಗಳು, ಟಿ. ಮಲ್ಲಿಕಾರ್ಜುನ: ಪ್ರಸ್ತುತ ಸಮಾಜದಲ್ಲಿ ಮಹಿಳಾ ಉದ್ಯಮಶೀಲತೆ ಒಂದು ಅವಲೋಕನ, ಸಂದೀಪ್ ಪ್ರಕಾಶನ, ಚಾಮರಾಜನಗರ.

೨೧. ರಾಣಿ ಸಿ: ಪೊಟೆನ್ಶಿಯಲ್ ವಿಮೆನ್ ಎಂಟರ್ಪ್ರಿನರಸ್, ಎಸ್. ಇಡಿ, ಎಮ್.ಇ, ವಾಲ್ಯೂಮ್ ೧೩ ನಂಬರ್ ೪, ೧೯೮೬.

೨೨. ರಂಜನಾ ಕುಮಾರಿ: ವಿಮೆನ್ ಇನ್ ಡಿಸಿಷನ್ ಮೇಕಿಂಗ್, ವಿಕಾಸ್ ಪಬ್ಲಿಕೇಷಿಂಗ್ ಹೌಸ್ ಪ್ರೈವೇಟ್ ಲಿಮಿಟೆಡ್ ನ್ಯೂ ಡೆಲ್ಲಿ ೧೯೯೨.

೨೩. ವಿಜಯಕುಮಾರಿ ಎಸ್ ಕರಿಕಲ್ : ಮಹಿಳೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ,೨೦೦೭.

೧೪. ವೇಣುಗೋಪಾಲ್ ಜಿ ಎಸ್ ಮತ್ತು ಟಿ. ಎಸ್. ವೆಂಕಟೇಶ್: ಸ್ತ್ರೀ ಚಿಂತನೆ - ಸಮಸ್ಯೆ, ಸವಾಲು, ಸಬಲೀಕರಣದ ಆಯಾಮಗಳು, ರತ್ನಮ್ಮ ಆರ್, ಜಾಹ್ನವಿ ಎಸ್: ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರದ ಕಾನೂನುಗಳು ಶ್ರೀ ಅನ್ನಪೂರ್ಣ ಪ್ರಕಾಶನ, ಬೆಂಗಳೂರು, ೨೦೧೧.

೧೫. ಶಿವಚಿತ್ತಪ್ಪ ಕೆ: ಮಹಿಳಾಭಿವೃದ್ಧಿಯ ಆಯಾಮಗಳು,ಮಹಿಳಾ ಅಭಿವೃದ್ಧಿಯ ಮಾಪನದ ವಿವಿಧ ಆಯಾಮಗಳು ಜ್ಞಾನೋದಯ ಪಬ್ಲಿಕೇಷನ್, ಮೈಸೂರ್.

೧೬. ಶೋಭಾಮಣಿ: ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪಾತ್ರ: ಒಂದು ಪ್ರಕರಣ ಅಧ್ಯಯನ, ವಿ.ಬಾಸಿಲ್ ಹನ್ಸ್, ೨೦೦೯.

೧೭. ಸವಿತಾ: ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿ ಒಂದು ಅಧ್ಯಯನ, ಗೋವಿಂದ ಭಟ್, ೨೦೧೩.

೧೮. ಹೇಮಲತಾ ಎಚ್ ಎಂ: ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆ, ರಾಜಕೀಯ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ, ಮಹಿಳೆಯರು, ಮಹಿಳಾ ಅಧ್ಯಯನ ೧, ಡಿ.ವಿ.ಕೆ ಮೂರ್ತಿ ಪ್ರಕಾಶಕರು, ಮೈಸೂರ್, ೨೦೦೪.

೧೯. ಹೇಮಲತಾ ಎಚ್. ಎಂ.: ಮಹಿಳಾ ಅಧ್ಯಯನ -೩: ಮಹಿಳೆ ಮತ್ತು ದುಡಿಮೆ, ಮಹಿಳಾಭಿವೃದ್ಧಿ ಕಾರ್ಯನೀತಿ ಹಾಗು ಯೋಜನೆಗಳು, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೨೦೦೯.